MADAM SPEAKER:—I will put the resolution to the vote of the House. The question is:

"That whereas imposition of ceiling on urban immovable property and the acquisition of such property in excess of the ceiling limit with a view to utilising such excess for public purposes is a matter of general importance and the problems relating thereto are common to all the States:

And whereas legislation for the purpose mentioned above is relatable to matters enumerated in Entry 18 of List II of the Seventh Schedule to the Constitution of India with respect to which Parliament has no power to make a law for the State except as provided in articles 249 and 250 thereof;

And whereas for the purpose of securing uniformity in legislation, it is desirable that such legislation should be undertaken by Parliament;

Now, therefore, in pursuance of clause (1) of article 252 of the Constitution of India, this Assembly hereby resolves that the imposition of ceiling on urban immovable property and acquisition of such property in excess of the ceiling limit with a view to utilising such excess for public purposes and all other matters connected therewith or incidental thereto shall be regulated in this State by Parliament by law".

The motion was adopted

Discussion on the Report on the Scarcity condition prevailing in several parts of the state

SRI C M. ARUMUGAM.—Madam Speaker, with your permission I may intervene in the course of the discussions and say something as a matter of personal explanation; Therefore I request you now to permit Mr. Deve Gowda, Hon. Leader of the Opposition to initiate discussions on the Report.

MADAM SPEAKER.—Yes, Hon. Leader of Opposition to initiate the the debate. 1-00 p.m.

†ಶ್ರೀ ಎಚ್. ಡಿ. ದೇವೇಗೌಡ.—(ಹೊಳೆನರಸೀಪುರ) ಮಾನ್ಯ ಸಭಾಧ್ಯಕ್ಷಣಿಯವರೇ, ರಾಜ್ಯದಲ್ಲಿರ ತಕ್ಕ ಅಭಾವ ಪರಿಸ್ಥಿತಿಯ ಒಂದು ವಿಶ್ಲೇಷಣೆಯನ್ನ ಈ ಸಭೆಯ ಆದೇಶದ ಮೇಲೆ ತಾವೇ ಸ್ವತಃ ಖುದ್ದಾಗಿ ಪರಿಶೀಲನೆ ಮಾಡಿ ಈ ಸಭೆಗೆ ವರದಿಯನ್ನು ಶ್ರೀಮಾನ್ ಆರ್ಮುಗಂ ಅವರು ಒಪ್ಪಿಸಿದ್ದಾರೆ. ಅವರಿಗೆ ಸಿಕ್ಕಿದಂಥ ಬಹಳ ಕಡಿಮೆ ಕಾಲದಲ್ಲಿ ಹೆಚ್ಚು ಪ್ರಯತ್ನ ಮಾಡಿದ್ದಾರೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ಸಂದರ್ಭದಲ್ಲಿ ನಾನು ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಾರಣ ವಾದರೂ ಇಷ್ಟೇ, ಕೇವಲ ಒಂದು ವಾರದಲ್ಲಿ ಅವರು ಸುಮಾರು ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸಮಾಡಿ ಬಹು ತೇಕವಾಗಿ ನಾವು ಏನು ಅಪೇಕ್ಷೆ ಮಾಡಿದ್ದೆವೋ, ಆ ಎಲ್ಲಾ ಅಪೇಕ್ಷೆಗಳನ್ನು ಒಳಗೊಂಡ ರಿಪೋರ್ಟನ್ನು ಸಂಕ್ಷಿಪ್ತವಾಗಿ ಅವರು ಕೊಟ್ಟಿದ್ದಾರೆ. ಅವರ ಜೊತೆಯಲ್ಲಿ ನಮ್ಮ ಸ್ಟಾಫ್‌ನವರು ಬಹಳವಾಗಿ ಸಹಕರಿಸಿದ್ದಾರೆ. ಇಂಥ ಕಠಿಣವಾದ ಕೆಲಸವನ್ನು, ಕೇವಲ ೮ ದಿವಸದಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸಮಾಡಿ,

(ಶ್ರೀ ಎಚ್. ಡಿ. ದೇವೇಗೌಡ)

ಅಲ್ಲಿರತಕ್ಕ ಪರಿಸ್ಥಿತಿಯನ್ನು ಮನನ ಮಾಡಿ, ಸುಮಾರು ೧೩೧ ಪುಟಗಳ ಒಂದು ವರದಿಯನ್ನು ಈ ಸಭೆಗೆ ಒದಗಿಸಿದ್ದಾರೆ. ನಾನು ನಿಜವಾಗಿಯೂ ಈ ಕೆಲಸಕ್ಕೆ ಶ್ರಮಪಟ್ಟ ಎಲ್ಲರಿಗೂ, ಸರ್ಕಾರಿ ನೌಕರರಿಗಾಗಲಿ, ಮತ್ತು ಶ್ರೀಮಾನ್ ಆರ್ಮುಗಂ ಅವರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸಭಾಧ್ಯಕ್ಷಣಿಯವರೇ, ಈ ಸಭೆ ಏಕಸದಸ್ಯ ಆಯೋಗವನ್ನು ಕಳುಹಿಸಬೇಕು ಎಂದು ನಿರ್ಣಯ ತೆಗೆದುಕೊಂಡಿದ್ದರ ಹಿನ್ನಲೆಯಾದರೂ ಇಷ್ಟೆ ಕಳೆದ ಸಾರಿ ಶಾಸನ ಸಭೆಯ ಕಾರ್ಯಕಲಾಪಗಳನ್ನು ಮುಂದು ವರಿಸಿದ ಮೇಲೆ, ರಾಜ್ಯದಲ್ಲಿ ಬೃಹತ್ ಸಮಸ್ಯೆ ಇದೆ ಈ ಒಂದು ಸಮಸ್ಯೆಯನ್ನು ಬಗೆಹರಿಸತಕ್ಕಂಥಾದ್ದಕ್ಕೆ ಸರ್ಕಾರ ತೆಗೆದುಕೊಂಡಿರತಕ್ಕ ಕಾರ್ಯಕ್ರಮ ಅಷ್ಟೊಂದು ಸಮರ್ಪಕವಾಗಿಲ್ಲ ಎನ್ನುವ ಒಂದು ಆಪಾದನೆ ಬಂದಮೇಲೆ ಇದನ್ನು ಕೇವಲ್ಲ ರಾಜಕೀಯ ಪಕ್ಷದ ಬಣ್ಣದಿಂದ ಕೂಡಿದ ಅಭಿಪ್ರಾಯ ಬರತಕ್ಕಂಥಾದ್ದು ಉಚಿತವಲ್ಲ ಎನ್ನುವ ಅಭಿಪ್ರಾಯದಿಂದ ಈ ಸಭೆ ಒಂದು ನಿರ್ಧಾರಕ್ಕೆ ಬಂತು. ಇವತ್ತು ಯಾವ ರಾಜಕೀಯ ಬಣ್ಣಕ್ಕೆ ಅಂಟಿಕೊಳ್ಳದೆ ಇರತಕ್ಕ ಒಂದು ನಿರ್ಣಯಕ್ಕೆ ಬರುವುದು ಅವಶ್ಯಕ ಎಂದು ಹೇಳಿ ಏಕಸದಸ್ಯ ಆಯೋಗವನ್ನು ಕಳುಹಿಸಿಕೊಟ್ಟೆವು. ಇದರ ಹಿನ್ನಲೆಯನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕಳೆದ ನಾಲ್ಕು ತಿಂಗಳಿಂದ ಈಚೆಗೆ ರಾಜ್ಯದಲ್ಲಿ ಉಂಟಾಗಿರತಕ್ಕ ಬರಗಾಲ ಸಮಸ್ಯೆಯ ಬಗ್ಗೆ ಭಿನ್ನ ಭಿನ್ನವಾದ ಅಭಿಪ್ರಾಯ ಗಳು ವ್ಯಕ್ತಪಟ್ಟಿವೆ. ಅಲ್ಲಿ ಕೆಲಸ ಸಾಕಷ್ಟು ಸಮರ್ಪಕವಾಗಿ ನಡೆದಿಲ್ಲ ಎನ್ನತಕ್ಕ ಆಪಾದನೆಯನ್ನು ಬಹುಶಃ ಎಲ್ಲಾ ರಾಜಕೀಯ ಪಕ್ಷಗಳು ಮಾಡಿವೆ. ಇದನ್ನು ಆರೋಪಣೆ ಎಂದರೆ ಹೇಳಿದರೆ ತಪ್ಪಾಗುವುದಿಲ್ಲ. ಬಹುಶಃ ವಿರೋಧ ಪಕ್ಷದ ವತಿಯಿಂದ ನಾನಾಗಲೀ ನನ್ನ ಪಕ್ಷದ ಮುಂಖಂಡರುಗಳಾಗಲೀ, ಎಸ್.ಎಸ್.ಪಿ. ಪಕ್ಷದ ಮುಂಖಂಡರಾಗಲೀ, ಯಾವ ರಾಜಕೀಯ ಪಕ್ಷದ ಮುಂಖಂಡರಾಗಲೀ ಇದರ ಬಗ್ಗೆ ಅವರ ಮೆಚ್ಚಿಗೆ ಯನ್ನು ವ್ಯಕ್ತಪಡಿಸಿಲ್ಲ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಆಡಳಿತ ಕಾಂಗ್ರೆಸ್ಸಿನ ಮುಂಖಂಡರೂ ಕೂಡ ಇವತ್ತಿನ ಈ ಒಂದು ಕಾರ್ಯದ ಬಗ್ಗೆ ಸರ್ಕಾರ ವಿಫಲಗೊಂಡಿದೆ ಎನ್ನುವ ಆಪಾದನೆಯನ್ನು ಬಹಿರಂಗವಾಗಿ ಮಾಡಿದ್ದಾರೆ. ಆದರಿಂದ್ದ ಈ ಒಂದು ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಂಡೆವು. ನಾನು ಒಂದೊಂದು ವಿಷಯವನ್ನು ಪ್ರಸ್ತಾಪ ಮಾಡುತ್ತಾ ಹೋದರೆ ಬಹುಶಃ ಈ ಸಭೆಯ ಹೆಚ್ಚು ಕಾಲ ವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರಿಂದ್ದ ನಾನು ಕೆಲವು ವಿಷಯಗಳನ್ನು ಮಾತ್ರ ಈ ಸಂಧರ್ಭ ದಲ್ಲಿ ಪ್ರಸ್ತಾಪಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ರಾಜ್ಯದಲ್ಲಿ ಒಂದು ಹಿಡಿ ಅನ್ನಕ್ಕಾಗಿ, ಕೂಳಿಗಾಗಿ ಹೋರಾಟ ನಡೆಯುವ ಸಮಯದಲ್ಲಿ ರಾಜಕೀಯ ದೃಷ್ಟಿಕೋನದಿಂದ ಮಾತನಾಡತಕ್ಕದ್ದು ಯೋಗ್ಯವಲ್ಲ. ಸರ್ಕಾರದ ಮೇಲೆ ನನ್ನ ಆರೋಪಣೆಯಾದರೂ ಇಷ್ಟೆ ಈ ಒಂದು ಸಮಸ್ಯೆಯನ್ನು ಬಗೆಹರಿಸಲು ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಬದಲಾಗಿ ಹೆಚ್ಚು ಪೊಳ್ಳು ಭರವಸೆಯನ್ನು, ಇವತ್ತು ಯಾವ ಜನ ನೊಂದಿದ್ದಾರೆ, ಯಾವ ಜನ ಹಿಡಿ ಕೂಳಿಗೋಸ್ಕರ ಅಂಗಲಾಚಿಬೇಡುತ್ತಿದ್ದಾರೆ, ಅಂಥವರ ಮನಸ್ಸನ್ನು ತೃಪ್ತಿಪಡಿಸುವುದಕ್ಕೆ ಪ್ರಯತ್ನ ಮಾಡಿಲ್ಲ ಎಂದು ಹೇಳಿದರೆ ಬಹುಶಃ ಅದು ಉತ್ಪ್ರೇಕ್ಷೆಯ ಮಾತಲ್ಲ. ಮಾನ್ಯ ಮಂತ್ರಿಗಳಾದ ಸಿದ್ದವೀರಪ್ಪನವರು ಈ ಸಭೆಯಲ್ಲಿಲ್ಲ ಈಗ ಹೊರಗೆ ಹೋಗಿದ್ದಾರೆ. ಹಿಂದೆ ಧರ್ಮವೀರ ಅವರ ಕಾಲದಲ್ಲಿ ರಾಜ್ಯದಲ್ಲಿರತಕ್ಕ ಬರಗಾಲ ಪರಿಸ್ಥಿತಿಯನ್ನು ಬಿಡಿಸತಕ್ಕಂಥಾದ್ದಕ್ಕೆ ಶ್ರೀ ಧರ್ಮವೀರ ಅವರಿಗೆ ಒಂದು ಉಪದೇಶ ಮಾಡಿದ್ದಾರೆ ಏನೆಂದರೆ New congress demand pay cut by Governor''. ಒಂದು ದಿವಸ ರಾಜ್ಯಪಾಲರ ಸಂಬಳವನ್ನು ಕಡಿತಮಾಡಿಕೊಳ್ಳಿ, ರಾಜ್ಯದಲ್ಲಿರತಕ್ಕ ಕ್ಷಾಮಡಾಮರಗಳ ಪರಿಸ್ಥಿತಿಯಲ್ಲಿ ಪೂರ್ಣ ಸಂಬಳವನ್ನು ಪಡೆಯ ತಕ್ಕದ್ದು, ಪೂರ್ಣ ವೇತನವನ್ನು ಪಡೆಯತಕ್ಕದ್ದು ಯೋಗ್ಯವಲ್ಲ ಎನ್ನುವ ಹೇಳಿಕೆಯನ್ನು ಶ್ರೀ ಮಾನ್ ಸಿದ್ದವೀರಪ್ಪನವರು ೧೬ನೇ ಸೆಪ್ಟೆಂಬರ್ ೧೯೭೧ರಲ್ಲಿ ಕೊಟ್ಟರು. ಇವತ್ತು ನಾನು ಕೇಳುತ್ತೇನೆ, ಈ ಒಂದು ದಿಸೆಯಲ್ಲಿ ತಾವು ಎಷ್ಟು ದೂರ ಮುಂದುವರಿದಿದ್ದೀರಿ ಎಂದು? ಏಕೆಂದರೆ ಉಪದೇಶ ಮಾಡುವುದು ಬಹಳ ಸುಲಭ, ಆದರೆ ಅದನ್ನು ಅನುಷ್ಠಾನಕ್ಕೆ ತರತಕ್ಕಂಥಾದ್ದು ಬಹಳ ಕಷ್ಟ. ಹಾಗೆ ಹೇಳಿದ ಮಾತ್ರಕ್ಕೆ ಸಿದ್ದವೀರಪ್ಪನವರ ಸಂಬಳ ಕಡಿತ ಮಾಡಿಕೊಳ್ಳಿ ಎಂದು ಹೇಳುವುದಿಲ್ಲ. ಮಂತ್ರಿಗಳು ತಮ್ಮ ಸಂಬಳ ಕಡಿತ ಮಾಡಿಕೊಳ್ಳುವುದರಿಂದ ರಾಜ್ಯದಲ್ಲಿರತಕ್ಕ ಭೀಕರ ಕ್ಷಾಮ ಪರಿಸ್ಥಿತಿ ಸುಧಾರಣೆಯಾಗುತ್ತದೆ ಎಂದು ನಂಬಿಕೆ ಇರುವವನು ನಾನಲ್ಲ. ಮಂತ್ರಿಗಳು ನೂರು ರೂಪಾಯಿಗಳನ್ನು ತಮ್ಮ ಸಂಬಳದಲ್ಲಿ ಕಡಿತ ಮಾಡಿ ಕೊಂಡರೆ ಇದಕ್ಕೆ ಸಹಕಾರಿಯಾಗುತ್ತದೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ತಾವು ಏನು ಉಪದೇಶ ಮಾಡಿದಿರಿ, ಆ ಉಪದೇಶಕ್ಕೆ ತಕ್ಕಂತೆ ಸಾಂಕೇತಿಕವಾಗಿ ನಡೆದುಕೊಳ್ಳಬೇಕಾಗಿತ್ತು. ಶ್ರೀ ಮಾನ್ ಆರ್ಮುಗಂ ಅವರು ಬಹಳ ಶಕ್ತಿಮೀರಿ ಪ್ರಯತ್ನ ಮಾಡಿದ್ದಾರೆ. ಮಂತ್ರಿಗಳು ತಮ್ಮ ಪ್ರವಾಸದ ಕಾಲ ದಲ್ಲಿ ಕೊಟ್ಟಂಥ ಭರವಸೆಗಳ ಸುರಿಮಳೆಯನ್ನು ಈ ಒಂದು ವರದಿಯಲ್ಲಿ ಆರ್ಮುಗಂ ಅವರು ಸೇರಿಸು ವುದಕ್ಕೆ ಪ್ರಯತ್ನ ಮಾಡಿದ್ದಾರೆ. ವರದಿಯಲ್ಲಿ ೪೦ನೇ ಪುಟದಿಂದ ಹಿಡಿದು ೫೬ನೇ ಪುಟದವರೆಗೆ ೧೬

ಪುಟಗಳ ಭರವಸೆಗಳನ್ನು ಮಂತ್ರಿಗಳು ಕೊಟ್ಟಿರತಕ್ಕದ್ದನ್ನು ನಮೂದಿಸಿದ್ದಾರೆ. ಮಾನ್ಯ ಸಿದ್ದವೀರಪ್ಪನವರು ಒಂದು ಮಾತು ಹೇಳಿದ್ದು ಈ ಸಂದರ್ಭದಲ್ಲಿ ಜ್ಞಾಪಕ್ಕೆ ಬರುತ್ತದೆ. ಕನಕಪುರದಲ್ಲಿ ಅವರು ಹೀಗೆ ಹೇಳಿದಾರೆ, ಹಿಂದಿನ ಸರ್ಕಾರಗಳು ಕಡಾಣಿ ಇಲ್ಲದೆ ಬಂಡಿ ಓಡಿಸುತ್ತಿದ್ದರು, ಇಂಥ ಸರ್ಕಾರಗಳು ರಾಜ್ಯದಲ್ಲಿದ್ದವು ಎಂದು ೪೦ನೇ ಪುಟದಿಂದ ೫೬ನೇ ಪುಟದವರೆಗೆ ಇವರ ಭಾಷಣಗಳನ್ನು ನೋಡಿದರೆ ಯಾವ ಲಂಗು ಲಗಾಮು ಇಲ್ಲದೆ ಇರುವ ಭಾಷಣ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದರ ಬಗ್ಗೆ ಹೆಚ್ಚಾಗಿ ಲಂಬಿಸಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಂತ್ರಿಗಳ ಭಾಷಣ ಕಾರ್ಯರೂಪಕ್ಕೆ ಬಂದಿಲ್ಲ ಎನ್ನುವ ಬಗ್ಗೆ ೫೬ನೇ ಪುಟದಲ್ಲಿ ನಮ್ಮ ಮಾನ್ಯ ಮಿತ್ರರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಂತ್ರಿಗಳ ಹೇಳಿಕೆ, ಆದು ಸಚಿವ ಸಂಪುಟದ ಹೇಳಿಕೆಯೇ? ಅಥವಾ ವೈಯಕ್ತಿಕ ಹೇಳಿಕೆಯೇ? ಒಂದಕ್ಕೆ ಒಂದಕ್ಕೆ ಕೋಆರ್ಡಿನೇಷನ್ ಇಲ್ಲ. ಮಂತ್ರಿಗಳು ಅವರವರ ಇಚ್ಛೆ ರೀತಿ, ಅವರ ಮನಸ್ಸಿಗೆ ಬಂದಂಥ ರೀತಿಯಲ್ಲಿ ಹೇಳಿಕೆಯನ್ನು ಕೊಡುತ್ತಾಹೋಗಿದ್ದಾರೆ ಎನ್ನುವುದನ್ನು ಮಿತ್ರರಾಗಿರತಕ್ಕ ಆರ್ಮುಗಂ ಅವರು ಅದರಲ್ಲಿ ತಿಳಿಸಿದ್ದಾರೆ. ಇಂದು ಸರಕಾರ ಈ ಒಂದು ಸಭೆಯಲ್ಲಿ ಏಕ ಸದಸ್ಯ ಆಯೋಗ ಕಳಿಸುವುದಾಗಿ ನಿರ್ಣಯಮಾಡಿದ ಮೇಲೆ ಕೆಲವು ಹುಕುಮುಗಳನ್ನು ಜಾರಿಗೆ ತಂದಿದ್ದಾರೆ. ಬಹುಶಃ ಇದಕ್ಕಿಂತ ಮುಂಚೆ ಸರಕಾರದವರು ತೆಗೆದುಕೊಂಡಿರುವ ನಿರ್ಣಯಗಳನ್ನು, ಅವನ್ನು ಕಾರ್ಯಾಚರಣೆಗೆ ತರುವುದರಲ್ಲಿ ಮಾಡಿರುವ ಸಾಹಸ ಎಷ್ಟುಮಟ್ಟಿಗಿದೆ ಎಂಬುದು ವರದಿ ನೋಡಿದರೆ ಗೊತ್ತಾಗುವುದು. ಏಕ ಸದಸ್ಯ ಆಯೋಗ ಕಳಿಸುವುದಾಗಿ ನಿರ್ಣಯ ಮಾಡಿದ ಮೇಲೆ ಸರಕಾರ ಆತುರವಾಗಿ, ತುರ್ತಾಗಿ, ಅವಸರದಿಂದ ನಿರ್ಣಯಗಳು ಕೆಲವನ್ನು ಮಾಡಿದೆ. ಇದು ಸರಕಾರಕ್ಕೆ ತೀವ್ರತೆ ಎಷ್ಟಿದೆ ಎಂಬುದನ್ನು ತೋರಿಸುವುದು ಎಂದು ತಿಳಿಯಪಡಿಸಲು ಹೀಗೆ ಪ್ರಯತ್ನಮಾಡಿದ್ದಾರೆ, ಇದನ್ನು ಏಕ ಸದಸ್ಯ ಆಯೋಗದ ಬಗ್ಗೆ ನಿರ್ಣಯವಾದಮೇಲೆ ಮಾಡಿದ್ದಾರೆ. ಅದಕ್ಕಿಂತ ಮುಂಚೆ ತೀವ್ರತೆ ಇರಲಿಲ್ಲವೇನೋ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಸಕ್ತಿ ಇರಲಿಲ್ಲವೇನೋ ಎಂಬುದು ಎದ್ದು ಕಾಣುತ್ತದೆ. ಕಾರಣವಾದರೂ ಇಷ್ಟೆ. ಈ ಸಭೆಯಲ್ಲಿ ನಿರ್ಣಯವಾದ ಮೇಲೆ ಸರಕಾರದವರು ಮಾಡಿರುವ ನಿರ್ಣಯಗಳನ್ನು ನೋಡಿದರೆ ಹಿಂದೆ ಈ ಸಭೆಯಲ್ಲಿ ಚರ್ಚೆಯಾಗುವುದಕ್ಕೆ ಮುಂಚೆ ಮಾಡಬೇಕಾದ ನಿರ್ಣಯವನ್ನು ಆಮೇಲೆ ಮಾಡಿದ್ದಾರೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ ಎಂದು ನಾನು ಹೇಳಲಿಚ್ಛಿಸುತ್ತೇನೆ.

ಮಾನ್ಯ ಸಭಾಧ್ಯಕ್ಷಣಿಯವರೇ, ಕಳೆದ ನಾಲ್ಕು ತಿಂಗಳಿನಿಂದೀಚೆಗೆ ನಾನು, ಮಂತ್ರಿಗಳು, ಶಾಸಕರು, ಪಾರ್ಲಿಮೆಂಟ್ ಸದಸ್ಯರು, ರಾಜ್ಯದ ಎಲ್ಲಾ ಮುಖಂಡರು ಮಾಡಿರುವ ಆಪಾದನೆಗಳು ಅಥವ ಇತರರು ಪತ್ರಿಕೆಗಳಿಗೆ ಕೊಟ್ಟಿರುವ ಹೇಳಿಕೆಗಳು ಇವುಗಳೆಲ್ಲವನ್ನೂ ಈ ಸಭೆಯಲ್ಲಿ ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ. ಈ ದಿವಸ ಆಡಳಿತ ಕಾಂಗ್ರೆಸಿನ ಲೋಕಸಭಾ ಸದಸ್ಯರೇ ಹೇಳಿದ್ದಾರೆ, ಸರಕಾರ ಎಷ್ಟುಮಟ್ಟಿಗೆ ವಿಫಲವಾಗಿದೆ ಇದರಲ್ಲಿ ಎಂಬುದನ್ನು ಹೇಳಿದ್ದಾರೆ. ಇದರ ಜೊತೆಗೆ ಸಚಿವ ಸಂಪುಟದ ಸದಸ್ಯರಾಗಿದ್ದ ಬಸವಲಿಂಗಪ್ಪನವರು ಕೂಡ ಈ ಬಗ್ಗೆ ನಾವೇನು ಪ್ರಯತ್ನ ಮಾಡಿದ್ದೇವೆ, ಯಾರು ಕೆಲಸ ಮಾಡುವರೋ ಅವರಿಗೆ ಹಣ ಸೇರಬೇಕು ಎಂದೇನು ನಿರ್ಣಯ ಮಾಡಿದ್ದೇವೋ ಅದರಂತೆ ಇಂದು ಆಗುತ್ತಿಲ್ಲ, ಹಣ ಅವರಿಗೆ ಸಿಕ್ಕುತ್ತಿಲ್ಲ, ಮಧ್ಯಸ್ತಗಾರರ ಕೈಸೇರುತ್ತಿದೆ ಎಂಬ ಆಪಾದನೆ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಮತ್ತೊಬ್ಬ ಮಾಜಿ ರೆವಿನ್ಯೂ ಸಚಿವರು ಮತ್ತು ಲೋಕಸಭೆ ಸದಸ್ಯರೂ ಕೂಡ ಇಂದು ರಾಜ್ಯದಲ್ಲಿ ಬರಗಾಲಕ್ಕಾಗಿ ಖರ್ಚು ಮಾಡುವ ಹಣ ಪುಡಾರಿಗಳ ಕೈಸೇರುತ್ತಿದೆ ಎಂದು ಹೇಳಿದ್ದಾರೆ. ಇದನ್ನು ಅವರು ಹೇಳಿ ಸುಮಾರು ಮೂರು ತಿಂಗಳಾಯ್ತು. ಇವತ್ತು ಆಪಾದನೆ ಮಾಡಬೇಕು ಎಂಬ ದೃಷ್ಟಿಯಿಂದ ಇದನ್ನು ಹೇಳುತ್ತಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಬೇರೆ ರಾಜಕೀಯ ಪಕ್ಷಗಳು ಖಾಸಗಿ ಮಹನೀಯರು ಸಹಕರಿಸಬೇಕು ಎಂದು ಕೇಳುತ್ತಿದ್ದರು. ಸಮಸ್ಯೆ ಉದ್ಭವವಾದಮೇಲೆ ಇಂದು ಸಮಸ್ಯೆ ಭೀಕರವಾದಮೇಲೆ ಸಹಕಾರ ಕೇಳುತ್ತಿದ್ದಾರೆ. ಇದಕ್ಕೆ ರಾಜಕೀಯ ಬಣ್ಣ ಕಟ್ಟುವುದು ಬೇಡ, ಎಲ್ಲರೂ ಸಹಕರಿಸಿ ಸಮಸ್ಯೆಯನ್ನು ಬಗೆಹರಿಸೋಣ ಎಂದು ಹೇಳುತ್ತಿದ್ದಾರೆ. ಇದನ್ನು ಒಪ್ಪುತ್ತೇನೆ. ಆದರೆ ಈ ಅರಿವು ಯಾವಾಗ ಉಂಟಾಯಿತು? ಈ ಕಾರ್ಯವನ್ನು ನಡೆಸುವ ಹೊಣೆಗಾರಿಕೆಯನ್ನು ಇಂದು ಸ್ಥಾನೀಕ ಸಂಸ್ಥೆಗಳಿಂದ ಕಿತ್ತುಹಾಕಿದರು. ಹಿಂದೆ ಸ್ಥಾನೀಕ ಸಂಸ್ಥೆಗಳು ಬರಗಾಲ ಕಾಮಗಾರಿಗಳನ್ನು ಮಾಡಿದ್ದಾಗ ಅನೇಕ ಹಣ ಅಪವ್ಯಯ ಮಾಡಿದ್ದವು, ದುರುಪಯೋಗ ಮಾಡಿದವು ಎಂದು ಆಪಾದಿಸಿ ಅವುಗಳಿಂದ ಈ ಕೆಲಸ ತಪ್ಪಿಸಿ ಇವತ್ತು ಲೋಕೋಪಯೋಗಿ ಇಲಾಖೆ ನೇತೃತ್ವದಲ್ಲಿ ಕೆಲಸ ಮಾಡಿಸಲು ಹೊರಟಿದ್ದಾರೆ. ಹಿಂದೆ ಕಾಮಗಾರಿಗಳನ್ನು ನಡೆಸಿ ಕಾರ್ಯನಿರ್ವಹಣೆ ಮಾಡಿದ ಸ್ಥಾನಿಕ ಸಂಸ್ಥೆಗಳು ಅವ್ಯವಹಾರ ಮಾಡಿವೆಯೆಂದು ಬಹಿರಂಗವಾಗಿ ಘೋಷಣೆ ಮಾಡಿದಿರಿ. ಹಾಗೆ ಮಾಡಿದ್ದರೆ ಆ ಸಂಸ್ಥೆಗಳಿಗೆ ಶಿಕ್ಷೆಯಾಗಬೇಕು. ತಪ್ಪನ್ನು ವೀರೇಂದ್ರ ಪಾಟೀಲರ ಸರಕಾರವಾಗಲೀ ಅದಕ್ಕಿಂತ ಪೂರ್ವದಲ್ಲಿದ್ದವರಾಗಲಿ, ಸಂಸ್ಥೆಗಳವರಾಗಲಿ, ಅದರಲ್ಲಿದ್ದ ಚುನಾಯಿತ ಸದಸ್ಯರಾಗಲಿ ಯಾರೇ ಮಾಡಿರಲಿ ಅವ್ಯವಹಾರ ಮಾಡಿದ್ದಾರೆಂದು ಹೇಳಿದವರು ತಪ್ಪಿತಸ್ಥರಿಗೆ ಶಿಕ್ಷೆ ಮಾಡುವ ಜವಾಬ್ದಾರಿ ಹೊರಬೇಕಾಗುತ್ತದೆ. ನಾನು ಇದರ ಬಗ್ಗೆ ಕಳಕಳಿಯಿಂದ ಪ್ರಾರ್ಥನೆಮಾಡುತ್ತೇನೆ. ತಮ್ಮ ಉದ್ದೇಶ ಇಷ್ಟೆ. ಕೆಲಸಮಾಡಿದ ಪ್ರತಿಫಲ

(ಶ್ರೀ ಹೆಚ್. ಡಿ. ದೇವೇಗೌಡ)

ಇಂದು ಯಾರು ಕೆಲಸ ಮಾಡುವರೋ ಅವರಿಗೆ ಸಿಕ್ಕಬೇಕು ಎಂಬ ಆಸೆಯಿಂದ ಇಂದು ಲೋಕೋಪಯೋಗಿ ಇಲಾಖೆಗೆ ವಹಿಸಿದರು. ಆರ್ಮುಗಂ ವರದಿ ನೋಡಿದರೆ ಎಷ್ಟುಮಟ್ಟಿಗೆ ಸರಕಾರದ ವ್ಯವಸ್ಥೆಯಿಂದ ಅನುಕೂಲವಾಗಿದೆಯೆಂಬುದು ವ್ಯಕ್ತವಾಗುವುದು. ಕಂಟ್ರಾಕ್ಟ ಸಿಸ್ಟಂ ಇಂದು ಯಾವ ರೀತಿಯಲ್ಲಿ ಜಾರಿಯಲ್ಲಿದೆ ಎಂಬುದನ್ನು ನಮ್ಮ ಮಿತ್ರರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಇವತ್ತು ಪೀಸ್‌ವರ್ಕರ್ಸ್ ನಾಲ್ಕಾರು ಜನರನ್ನಿಟ್ಟುಕೊಂಡು ಕೆಲಸಮಾಡಿಸುತ್ತಿದ್ದಾರೆಂದು ವಿಶದವಾಗಿ ಹೇಳಿದ್ದಾರೆ. ಆಮೇಲೆ ಒಂದೇ ಕೆಲಸಕ್ಕೆ ಕೆಲವು ಕಡೆ ೩ ರೂಪಾಯಿ ೨೦ ಪೈಸೆ ಮತ್ತೆ ಬೇರೆ ಕಡೆ ೨ ರೂಪಾಯಿ ಚಿಲ್ಲರೆ ಹೀಗೆಲ್ಲಾ ಪೇಮೆಂಟ್ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಹೀಗಾದರೆ ಸರಕಾರದ ಆಸೆ ಏನಿತ್ತು ಯಾರು ಕೆಲಸ ಮಾಡುವರೋ ಅವರಿಗೆ ಈ ಹಣ ಸೇರಬೇಕು ಎಂಬುದು ಹಾಗಾಗಲು ಸಾಧ್ಯವಾಯಿತೇ ಎಂದು ಕೇಳುತ್ತೇನೆ. ಆರ್ಮುಗಂ ರವರು ವಿರೋಧ ಪಕ್ಷದವರು, ಅವರೊಬ್ಬರೇ ಅಲ್ಲದೆ ಆಡಳಿತ ಪಕ್ಷದ ಬಸವಲಿಂಗಪ್ಪನವರೇ ಇದನ್ನು ಹೇಳಿದ್ದಾರೆ, ಅವರು ಕೂಡ ಈ ಅಪಾದನೆ ಮಾಡಿದ್ದಾರೆ. ಎಂ. ವಿ. ಕೃಷ್ಣಪ್ಪನವರು ಸಹ ಅಪಾದನೆ ಮಾಡಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಸ್ಥಾನೀಕ ಸಂಸ್ಥೆಗಳಮೇಲೆ ಅಪಾದನೆ ಹೊರಿಸಿದವರು ಇದಕ್ಕೆ ಉತ್ತರ ಕೊಡುವರೇ? ಇವತ್ತು ಎಲ್ಲ ರಾಜಕೀಯ ಪಕ್ಷಗಳು ಸಹಕಾರ ಬೇಕು, ಆದರಿಂದ ಈ ಸಮಸ್ಯೆ ಬಗೆಹರಿಸಬೇಕು ಎಂದು ವಾದ ಮಾಡುತ್ತಿದ್ದರು. ಇಂದು ಸ್ಥಾನೀಕ ಸಂಸ್ಥೆಗಳನ್ನು ತೆಗೆದಿರಿ, ದೃಷ್ಟಿಕೋನ ಬದಲಾಯಿತು. ಇಂದು ಸ್ಥಾನೀಕ ಸಂಸ್ಥೆಗಳು ಆಡಳಿತ ಕಾಂಗ್ರೆಸ್ಸಿನ ಕೈಲಿ ಇಲ್ಲದಿರಬಹುದು ಅವು ಬೇರೆ ರಾಜಕೀಯ ಪಕ್ಷಗಳವರ ಕೈಲಿರುವ ಒಂದೇ ಒಂದು ನೆಪದಿಂದ ತಾವು ಅವುಗಳ ಸಹಕಾರ ಪಡೆಯದೇ ಹಿಂದೇಟು ಹಾಕಿದಿರಿ. ಇದು ಸರಿಯೇ ಎಂದು ಕೇಳುತ್ತೇನೆ. ಇದನ್ನು ನಿಮ್ಮ ಹೃದಯ ಬಿಚ್ಚಿ ಹೇಳಿ. ಇವತ್ತು ತಮ್ಮ ಪಕ್ಷದಲ್ಲೇನೇ ಎಲ್ಲಾ ನೀತಿವಂತ ಜನರಿದ್ದಾರೆಂದು ಹೇಳುವುದಾದರೆ ನಾನು ಕ್ಷಮೆ ಕೇಳುತ್ತೇನೆ. ಮಾನ್ಯ ಶ್ರೀ ರಾಮಯ್ಯರವರು ಮಾತನಾಡುವಾಗ ವಿರೋಧ ಪಕ್ಷ ಉತ್ಪ್ರೇಕ್ಷೆ ಮಾಡುವುದು ಸರಿಯಲ್ಲವೆಂದು ಹೇಳಿದರು. ದ್ವೇಷಾರೋಪಣೆ ಅಲ್ಲವೇ ಇದು ಎಂದು ಪುಟ್ಟಸ್ವಾಮಯ್ಯ ನವರು ಕೇಳಿದರು. ಇಂದು ಮಾಡಿರುವ ಕೆಲಸ ಎಂಟು ತಿಂಗಳಿಂದೀಚೆಗೆ ಮಾಡಿರುವ ಕೆಲಸ ಸರಿಯಾಗಿ ನಡೆದಿದೆ ಎಂದು ಧೃಡೀಕರಿಸಿದರೆ ನಾನು ರಾಜಕೀಯವನ್ನೇ ಕೈಬಿಡುತ್ತೇನೆ, ಈ ಸಭೆಗೆ ರಾಜೀನಾಮೆ ನೀಡುತ್ತೇನೆ, ರಾಜಕೀಯ ಜೀವನದಲ್ಲೇ ನಾನಿರುವುದಿಲ್ಲ. ಇಂದು ಹೇಳುವುದಾದರೆ ನಾನು ಕೆಲವು ಸಮಾಚಾರ ಸಂಗ್ರಹಮಾಡಿದ್ದೇನೆ ಇವತ್ತು ಅಧಿಕಾರಿಗಳಿಗೆ ಇಂಥವರಿಗೆ ಇಂಥ ಕೆಲಸ ಕೊಡಿ ಎಂದು ಚೀಟಿ ಕಳಿಸುವರು. ಇಂಥವರಿಗೆ ಕೂಡಲೇ ಬಿಲ್ ಮಾಡಿ ಕೊಡಿ ಎಂಬುದಾಗಿ ಬರೆದಿದ್ದಾರೆ. ಇಂಥ ಸಾಕಷ್ಟು ಕಾಗದಗಳನ್ನು ಮತ್ತು ಇವರು ಕೊಟ್ಟಿರತಕ್ಕ ಚೀಟಿಗಳನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯವಾದ ಮಟ್ಟಿಗೂ ನನ್ನ ಕೈಲಾದ ಪ್ರಯತ್ನಗಳನ್ನೆಲ್ಲಾ ಮಾಡಿ ಶೇಖರಣೆ ಮಾಡಿದ್ದೇನೆ. ಆದರೆ ಈಗಿನ ಸಂದರ್ಭದಲ್ಲಿ ಈ ಸಭೆಯ ನೀತಿ ನಿಯಮಗಳಿಗೆ ತಲೆಬಾಗಿ ಯಾರ ಹೆಸರನ್ನೂ ಹೇಳುವುದು ಬೇಡ ಎಂದು ಅದನ್ನು ಕೈ ಬಿಟ್ಟಿದ್ದೇನೆ. ಈ ದಿವಸ ಸರ್ಕಾರದವರು ಖರ್ಚುಮಾಡಿರತಕ್ಕ ಹಣವೇನಿದೆ ಅದು ನ್ಯಾಯವಾದ ವ್ಯಕ್ತಿಗೆ ಅಂದರೆ ಯಾರಿಗೆ ಸಲ್ಲಬೇಕೋ ಅಂಥ ವ್ಯಕ್ತಿಗೆ ಪೂರ್ಣವಾಗಿ ಸಂದಾಯವಾಗಿದೆ ಎಂದು ಅವರು ರುಜುವಾತು ಮಾಡುವುದಾದ ಪಕ್ಷಕ್ಕೆ ನಾನು ಈ ಸ್ಥಾನಕ್ಕೆ ರಾಜೀನಾಮೆ ಕೊಡುವುದೊಂದೇ ಅಲ್ಲ ನಾನು ಈ ರಾಜಕೀಯ ಕ್ಷೇತ್ರದಿಂದಲೇ ನಿವೃತ್ತಿಯಾಗುವುದಕ್ಕೆ ಸಿದ್ಧನಾಗಿದ್ದೆನೆಂದು ಸವಾಲನ್ನು ಹಾಕುವುದಕ್ಕೆ ನಾನು ಸಿದ್ಧವಾಗಿದ್ದೇನೆ ಎಂದು ಹೇಳುತ್ತೇನೆ. ಈ ದಿವಸ ಸರ್ಕಾರ ಖರ್ಚುಮಾಡಿರತಕ್ಕ ಹಣವೆಲ್ಲಾ ಪ್ರಾಮಾಣಿಕವಾಗಿ ಯಾರಿಗೆ ಸೇರಬೇಕೋ ಅವರಿಗೆ ಸೇರಿದೆ ಅನ್ನುವುದಕ್ಕೆ ಸರ್ಕಾರ ರುಜುವಾತು ಮಾಡುವುದಕ್ಕೆ ಸಿದ್ಧವಿದ್ದರೆ ನಾನೇ ಈ ಸಭೆಯಲ್ಲಿ ನಾನು ಈ ರೀತಿ ಮಾತನಾಡಿದ್ದಕ್ಕೆ ಕ್ಷಮೆಯನ್ನು ಬೇಡುತ್ತೇನೆ. ಇವರು ಅಲ್ಲಿ ಖರ್ಚು ಮಾಡಿದ ಹಣದಲ್ಲಿ ಸಾಕಷ್ಟು ಹಣ ಮಧ್ಯವರ್ತಿ ಜನರ ಅಂದರೆ ದಳ್ಳಾಳಿಗಳ ಕೈ ಸೇರುವುದಕ್ಕೆ ಅವಕಾಶವಿದೆ ಎಂದು ಶ್ರೀ ಆರ್ಮುಗಂ ಅವರ ವರದಿಯಲ್ಲೇ ಹೇಳಿದೆ. ಈ ದಿವಸ ಸರ್ಕಾರದವರು ಎಲ್ಲಾ ರಾಜಕೀಯ ಪಕ್ಷಗಳ ಸಹಕಾರವನ್ನೂ ಕೇಳುತ್ತಿದ್ದಾರೆ ಸಂತೋಷ. ಇದೇ ಸಭೆಯಲ್ಲಿ ಒಂದೆರಡು ದಿನಗಳ ಕೆಳಗೆ 'ಸ್ಟೇಟ್ ರಿಲೀಫ್ ಕೌನ್ಸಿಲ್' ಈ ಪ್ರದೇಶದಲ್ಲಿ ಎಷ್ಟರ ಮಟ್ಟಿಗೆ ಜನತೆಗೆ ನೆರವನ್ನು ನೀಡಿದೆ ಎನ್ನುವುದರ ಬಗ್ಗೆ ಚರ್ಚೆ ನಡೆಸುವುದಕ್ಕೆ ಪ್ರಾರಂಭವಾದಾಗ ಇದೇ ಸಭೆಯಲ್ಲಿ ಆದ ಆ ಕ್ರಿಯಾಲೋಪಗಳ ಸಂರಿಮಳೆ ಇಂದ ಅಧ್ಯಕ್ಷರು ಆ ವಿಚಾರದಲ್ಲಿ ಒಂದು ರೂಲಿಂಗನ್ನೇ ಕೊಟ್ಟು—ಆ ವಿಷಯವನ್ನು ಬೇರೆ ಒಂದು ಸಬ್‌ಸ್ಟಾಂಟೀವ್ ಮೋಷನ್ ರೂಪದಲ್ಲಿ ಸಭೆಯ ಮುಂದೆ ತನ್ನಿ, ಅವಕಾಶವಿದ್ದರೆ ಅದನ್ನು ಚರ್ಚೆಗೆ ಅಲೋ ಮಾಡಲಾಗುತ್ತದೆಂದು ಹೇಳಿದರು. ಆದರೆ ಆ ದಿವಸ ಶ್ರೀ ರಾಮಯ್ಯ ಅವರು ಒಂದು ವಿಷಯ ಬಹಳ ಕಳಕಳಿಯಿಂದ ಹೇಳಿದರು; ಆದರೆ ನಾನು ಅವರ ವ್ಯಕ್ತಿತ್ವದ ಬಗ್ಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ವೇಳೆ ಪಕ್ಷದ ಶಿಸ್ತಿಗೆ ಕಟ್ಟುಬಿದ್ದು ತಲೆ ಬಾಗಿ ನಮ್ಮ ಮನಸ್ಸಿಗೆ ಒಪ್ಪಿಗೆ ಇಲ್ಲದಿದ್ದ ವಿಷಯಕ್ಕೂ ನಮ್ಮ ಓಟನ್ನು ಕೊಡುತ್ತೇವೆ. ಆದರೆ ಈ ದಿವಸ ಏನು ಒಂದು ಶ್ರೀ ಆರ್ಮುಗಂ ಅವರ ವರದಿ ಸಭೆಯ ಮುಂದೆ ಇದೆ ಈ ವರದಿಯಲ್ಲಿ ಪುಟ ೮೭ರಲ್ಲಿ ಮಾನ್ಯ ಸದಸ್ಯರು

ದಯಪಾಲಿಸಿಟ್ಟು ನೋಡಬಹುದು, ಆ ಸ್ಟೇಟ್ ರಿಲೀಫ್ ಕೌನ್ಸಿಲ್ಲು ಆ ಪ್ರದೇಶದಲ್ಲಿ ಏನೇನೂ ಕೆಲಸ ಮಾಡಿಲ್ಲ ಎಂಬುದಾಗಿ ಹೇಳಿದೆ, ಅಂದರೆ ಈ ಕೌನ್ಸಿಲ್ಲು ಏನು ಕೆಲಸ ಮಾಡಿದೆ ಎಂಬುದರ ಬಗ್ಗೆ ಆ ವರದಿಯಲ್ಲಿ ಒಂದು ಅಕ್ಷರವನ್ನೂ ಕೂಡ ಹೇಳಿರುವುದಿಲ್ಲ. ಈ ವರದಿ ನನ್ನ ಕೈಗೆ ಸಿಕ್ಕಿದ್ದು ಮಧ್ಯ ರಾತ್ರಿ ೨ ಗಂಟೆಯಲ್ಲಿ. ನಾನು ನೆನ್ನೆಯ ದಿವಸ ಬಹಳ ಪ್ರಯತ್ನ ಪಟ್ಟೆ. ಆದಾಗೂ ಈ ವರದಿ ನನ್ನ ಕೈಗೆ ಸಿಕ್ಕಲಿಲ್ಲ. ಆದ್ದರಿಂದ ಇದನ್ನು ಪೂರ್ಣವಾಗಿ ಓದುವುದಕ್ಕೆ ಸಾಧ್ಯವಾಗಲಿಲ್ಲ. ಈ ದಿವಸ ರಾಜ್ಯದಲ್ಲಿ ಯಾವ ಒಂದು ವಾಲಂಟಿಯರ್ ಆರ್ಗನೈಜೇಷನ್ ನಮ್ಮ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ತಲೆ ಎತ್ತಿದೆ ಆ ಸಂಸ್ಥೆಯ ಪರವಾಗಿ ಈ ವರದಿಯಲ್ಲಿ ಒಂದು ಚಕಾರ ಕೂಡ ಹೇಳಿಲ್ಲ......

ಶ್ರೀ ಕೆ ಶ್ರೀ ರಾಮುಲು.—ಆ ದಿವಸ ತಾವು ಹೇಳಿದ ಧಾಟಿಯೇ ಬೇರೆ, ಈ ದಿವಸ ತಾವು ಕಲ್ಪನೆ ಮಾಡಿಕೊಂಡು ಹೇಳುತ್ತಿರುವ ಪದಗಳೇ ಬೇರೆ .....

ಶ್ರೀ ಎಚ್. ಡಿ. ದೇವೇಗೌಡ.—ನನಗೇನು ಅಂಥ ಅಗತ್ಯವಿದೆ, ಇಲ್ಲಿ ಕಲ್ಪನೆ ಮಾಡಿಕೊಂಡು ಹೇಳುವುದಕ್ಕೆ ? ನಾನು ಆ ದಿವಸ ಏನು ಮಾತುಗಳನ್ನು ಆಡಿದ್ದೇನೋ ಅದೇ ಮಾತುಗಳನ್ನು ಈ ಘಳಿಗೆಯಲ್ಲೂ ಮತ್ತೆ ಹೇಳುತ್ತೇನೆ. ಆದರೆ ವ್ಯಕ್ತಿಯ ಹೆಸರನ್ನು ಹಿಡಿದು ಮಾತನಾಡುವುದಕ್ಕೆ ಈ ಸಭೆಯ ನಿಯಮಾವಳಿಗಳಿಗೆ ತಲೆಬಾಗಿ ಅದನ್ನು ಹೇಳುವುದಕ್ಕೆ ಹೋಗಿಲ್ಲ ಅಷ್ಟೇ. ಆದರೆ ನಾನು ಆ ದಿವಸ ಹೇಳಿದ್ದ ವಿಷಯಗಳನಷ್ಟೇ ಅಲ್ಲದೆ ಈ ದಿವಸ ಇನ್ನೂ ಅನೇಕ ಕಾಗದಗಳನ್ನು ಮತ್ತು ಚೀಟಿಗಳನ್ನು ಅದೇ ವಿಚಾರದಲ್ಲಿ ಸಂಗ್ರಹಣೆ ಮಾಡಿದ್ದೇನೆ. ಆದರೆ ನನಗೆ ಯಾವ ಒಂದು ವ್ಯಕ್ತಿಗಾಗಲೀ ಅಥವಾ ಪಕ್ಷಕ್ಕಾಗಲಿ ಮಸೀ ಹಚ್ಚಬೇಕೆಂಬ ಅಭಿಲಾಷೆ ಇಲ್ಲ. ಆದರೆ ನಾನು ಸಾರಿ ಸಾರಿ ಹೇಳುತ್ತೇನೆ, ಅದು ಯಾವ ಪಾರ್ಟಿಯೇ ಇರಲಿ—ಅದರಲ್ಲಿ ಒಳ್ಳೆಯವರೂ ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಆದರೆ ಈ ದಿವಸ ಅಧಿಕಾರದಲ್ಲಿರತಕ್ಕ ಪಕ್ಷ ಅಲ್ಲಿ ನಡೆಯಬೇಕಾದ ಕೆಲಸ ಕಾರ್ಯಗಳನ್ನು ಮಾನ್ಯ ಎಚ್. ಎಂ. ಚನ್ನಬಸಪ್ಪನವರ ನೇತೃತ್ವದಲ್ಲಿ ನಡೆಸುವುದಕ್ಕೆ ಹೊರಟಿದೆ. ಶ್ರೀಮಾನ್ ಚನ್ನಬಸಪ್ಪನವರಿಗೆ ಮಾನ್ಯ ರೆವಿನ್ಯೂ ಸಚಿವರು ಹಣವನ್ನು ಒದಗಿಸತಕ್ಕವರಾದರೆ, ಅದನ್ನು ಖರ್ಚು ಮಾಡತಕ್ಕವರು ಶ್ರೀಮಾನ್ ಚನ್ನಬಸಪ್ಪನವರು. ಈ ರಿಲೀಫ್ ಕಾಮಗಾರಿಗಳ ಬಗ್ಗೆ ಕಳೆದ ೮ ತಿಂಗಳಿಂದ ಇಲ್ಲಿಯವರೆಗೂ ನಡೆದಿರ ತಕ್ಕದ್ದೇನು ಎಂಬುದನ್ನು ಪರಿಶೀಲಿಸೋಣ. ಇದೇ ವಿಚಾರದಲ್ಲೇ ನಾನು ಆಗಲೇ ಛಾಲೆಂಜ್ ಮಾಡಿ ಹೇಳಿದ್ದೇನೆ—ಈ ಬಾಬಿನಲ್ಲಿ ಖರ್ಚುಮಾಡಿರತಕ್ಕ ಪ್ರತಿಯೊಂದು ಕಾಸೂ ನ್ಯಾಯವಾಗಿ ಯಾರ ಕೈ ಸೇರ ಬೇಕಾಗಿತ್ತೋ ಅವರಿಗೆ ಸೇರಿದೆ, ಮಧ್ಯ ದಳ್ಳಾಳಿಗಳ ಕೈಸೇರಿಲ್ಲ ಎಂದು ರುಜುವಾತು ಮಾಡುವುದಾದರೆ ನಾನು ಮತ್ತೆ ಈ ಸಭೆಯೊಳಕ್ಕೆ ಕಾಲಿಡುವುದಿಲ್ಲ. ನನ್ನಲ್ಲಿ ಈ ದಿವಸ ಅಷ್ಟು ದಾಖಲೆಗಳಿವೆ. ಆದರೆ ಇವುಗಳನ್ನೆಲ್ಲಾ ಕೊಡಿ ನಾನು ವಿಚಾರ ಮಾಡಿಸುತ್ತೇನೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಕೇಳಬಹುದು. ಆದರೆ ನಾನು ಅದಕ್ಕೆ ತಯಾರಿಲ್ಲ. ಹಾಗೊಂದು ವೇಳೆ ಬೇಕೆಂದರೆ ಮಾನ್ಯ ಅಧ್ಯಕ್ಷರಿಗೆ ಅವರ ಆತ್ಮ ತೃಪ್ತಿಗಾಗಿ ಅವುಗಳನ್ನು ತೋರಿಸುತ್ತೇನೆ, ಅಷ್ಟೆ. ಈಗ ನನ್ನ ಬಳಿ ಇರತಕ್ಕ ದಾಖಲೆಗಳಲ್ಲಿ ಒಂದು ಮೈಲಿ ಒಂದೂವರೆ ಮೈಲಿಗೆಲ್ಲಾ ಒಂದು ಲಕ್ಷ ಮತ್ತು ಒಂದು ಲಕ್ಷ ೩೬ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರತಕ್ಕ ನಿದರ್ಶನಗಳಿರುತ್ತವೆ. ನಾನು ಈಗ ಈ ಕಾಗದ ಪತ್ರಗಳನ್ನು ಮಾನ್ಯ ರೆವಿನ್ಯೂ ಮಂತ್ರಿಗಳ ಕೈಗೆ ಕೊಟ್ಟರೆ ಇದರ ಫಲಿತಾಂಶವೇನಾಗುತ್ತೆ ಅನ್ನುವುದೂ ನನಗೆ ಗೊತ್ತಿದೆ. ಇದರಲ್ಲಿ ಕಾಣಿಸಿರತಕ್ಕ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡುತ್ತಾರೆ. ಆಗ ಆ ಸಸ್‌ಪೆನ್‌ಷನ್‌ನ ಮತ್ತೆ ರಿವೋಕ್ ಮಾಡುವುದಕ್ಕೆ ಊರನ್ನೆಲ್ಲಾ ಸುತ್ತಬೇಕು, ವಿರೋಧ ಪಕ್ಷದ ನಾಯಕರ ಕಾಲನ್ನು ಹಿಡಿಯಬೇಕು. ಆದರೆ ನಾನು ಯಾವ ವಶೀಲಿಬಾಜಿಗೂ ಹೋಗತಕ್ಕವನಲ್ಲ. ಆದರೆ ಇಲ್ಲಿ ಆಗಿರತಕ್ಕದ್ದೇನು ? ಕೋತಿ ಮೊಸರನ್ನವನ್ನು ತಿಂದು ಮೇಕೆಯ ಬಾಯಿಗೆ ಒರೆಸಿದಂತೆ ಆಗಿದೆ. ಆದರೆ ನಾನು ಇನ್ನಾದರೂ ಇವರಲ್ಲಿ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ—ಕೆಲವು ರಾಜಕೀಯ ಪಕ್ಷಗಳಿಗೆ ಬಣ್ಣ ಹಚ್ಚುವುದು, ಇನ್ನು ಕೆಲವು ರಾಜಕೀಯ ಭಿನ್ನಾಭಿಪ್ರಾಯಗಳ ಹಿನ್ನೆಲೆಯಾಗಿಟ್ಟುಕೊಂಡು ಇವರ ಕಾರ್ಯ ಚಟುವಟಿಕೆಗಳನ್ನು ಮುಂದು ವರಿವುದು ಬೇಡ ಎಂದು. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಹಿಂದೆ ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಆದರೆ ಅದರಿಂದ ನನ್ನ ಮನಸ್ಸಿಗೇನೂ ವ್ಯಥೆಯಾಗದಿದ್ದರೂ ಒಂದೊಂದಾವರ್ತಿ ವ್ಯಥೆಯಾಗುತ್ತೆ. ಆದರೆ ನಾನು ಅವರ ಮಾತಿಗೆ ನಗಬೇಕೋ ಅಥವಾ ಅದನ್ನು ಹಾಸ್ಯಾಸ್ಪದವಾಗಿ ಕಾಣ ಬೇಕೋ ತಿಳಿಯದಾಗಿದೆ. ಅವರೇನು ಹೇಳಿದರೆಂದರೆ-ಕಂಟ್ರಾಕ್ಟರಿಗೆ ಹಣ ಹರಿಯುವುದು ತಪ್ಪಿತು. ಅದೇ ಈ ಟೀಕೆಗಳಿಗೆಲ್ಲಾ ಕಾರಣ ಎಂದು. ಹಾಗೆ ಅವರು ಹೇಳುವುದಕ್ಕೆ ಇಲ್ಲಿ ಇದ್ದ ಕಂಟ್ರಾಕ್ಟರು ಯಾರು ? ಹಣ ಯಾರಿಗೆ ಹೋಗುತ್ತಿತ್ತು ? ಈ ದಿವಸ ಆ ಹಣ ಯಾರಿಗೆ ನಿಂತು ಹೋಗಿದೆ ? ಈ ವಿಚಾರಗಳ ಬಗ್ಗೆ ಮಾನ್ಯ ಸಚಿವರು ಒಂದು ಸ್ಪಷ್ಟವಾದ ವಿವರಣೆಯನ್ನು ಕೊಡಬೇಕಾಗಿದೆ. ಇವರು ಅಧಿಕಾರಕ್ಕೆ ಬಂದದ್ದು ನವೆಂಬರ್ ೨೩ನೇ ತಾರೀಖು. ಅಲ್ಲಿ ಕ್ಷಾಮ ಶುರುವಾಗಿ ೮ ತಿಂಗಳಾಗಿದೆ. ಅಲ್ಲಿ ಯಾವ ಕಂಟ್ರಾಕ್ಟರಿಗೆ ಹೇಗೆ ಹಣ ಹೋಗುತ್ತಿತ್ತು ? ಅದು ನಿಂತದ್ದು ಯಾವಾಗ ? ಅದಕ್ಕಾಗಿ ನಾವು ಇಲ್ಲಿ

(ಶ್ರೀ ಹೆಚ್. ಡಿ. ದೇವೇಗೌಡ)

ಟೀಕೆ ಮಾಡುತ್ತಿದ್ದೇವೆ. ಎಂದರೆ ಇದರ ಅರ್ಥವೇನು ? ಈ ದಿವಸ ವಿರೋಧಿ ಪಕ್ಷದವರ ಟೀಕೆಗಳು ಒಂದು ಕಡೆ ಇರಲಿ. ಆ ಕ್ಷಾಮಪೀಡಿತ ಪ್ರದೇಶಗಳ ಬಗ್ಗೆ ಒಬ್ಬರು ಪಾರ್ಲಿಯಮೆಂಟ್ ಸದಸ್ಯರೂ ಮತ್ತು ಮಾಜಿ ಸಚಿವರು ಆಗಿದ್ದವರು ಮತ್ತು ಹಾಲಿ ಮಂತ್ರಿ ಮಂಡಲದಲ್ಲಿರತಕ್ಕ ಶ್ರೀಮಾನ್ ಬಸವಲಿಂಗಪ್ಪ ನವರೂ ಹೇಳಿರತಕ್ಕದ್ದೂ ಅಪಾದನೆಗಳಲ್ಲವೆ? ಯಾರು ಇಲ್ಲಿ ಕಂಟ್ರಾಕ್ಟರ ಬಗ್ಗೆ ವಕೀಲಿ ನಡೆಸುತ್ತಿದ್ದಾರೆ.

1-30 P.M.

ಈ ರೀತಿ ಮಾತನಾಡತಕ್ಕ ಕಾಲದಲ್ಲಿ ಹುಸಿಯಾಗಿ ಮಾತನಾಡುವುದು ಯಾರಿಗೂ ಯೋಗ್ಯವಲ್ಲ. ಉಚಿತವಲ್ಲ. ಈ ಸಮಸ್ಯೆಯ ಬಗ್ಗೆ ರಾಜಕೀಯ ಪಕ್ಷಗಳು ತಂತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಕಾಲದಲ್ಲಿ ಕಂಟ್ರಾಕ್ಟರುಗಳಿಗೆ ಇನ್ನೂ ಹಣ ಹೋಗಿಲ್ಲವೆಂದು ಹೇಳಿ ಅತೃಪ್ತರಾದ ಕಂಟ್ರಾಕ್ಟರುಗಳು ರಾಜಕೀಯ ಪಕ್ಷಗಳನ್ನು ಉಪಯೋಗ ಮಾಡಿಕೊಂಡು ಹೋಗುತ್ತಿದ್ದಾರೆಂಬ ಅಪಾದನೆಯನ್ನು ಏಕೆ ಮಾಡಲಿಲ್ಲವೆಂದು ನಾನು ಧೈರ್ಯಸ್ಥೈರ್ಯಗಳಿಂದ ಕೇಳುತ್ತೇನೆ. ಆ ರೀತಿಯಾಗಿ ಅವರು ಮಾತನಾಡಬಹುದಾಗಿತ್ತು. ತಾವು ಈ ಕೆಲಸಗಳನ್ನು ಮಾಡಿರುವುದರಲ್ಲಿ ವಿಫಲಗೊಂಡಿರುವುದನ್ನು ಮುಚ್ಚುವುದಕ್ಕೆ ಈ ರೀತಿಯಾಗಿ ಆರೂಪಣೆಗಳನ್ನು ಮಾಡುತ್ತಿದ್ದಾರೆಂದು ನಾನು ಕಳಕಳಿಯಿಂದ ಹೇಳುತ್ತೇನೆ. ನವಂಬರ್ ೨೩ನೇ ಪ್ರಜಾವಾಣಿ ಪತ್ರಿಕೆಯಲ್ಲಿ ಈ ವಿಚಾರವಾಗಿ ಬಹಳ ಚೆನ್ನಾಗಿ ಬಂದಿದೆ. ಇವತ್ತು ರಾಜ್ಯದಲ್ಲಿ ಇರತಕ್ಕ ಸಮಸ್ಯೆಯನ್ನು ಬಗೆಹರಿಸುವ ಕಾಲದಲ್ಲಿ ಆರೋಪಣೆಗಳನ್ನು ಮಾಡಿ ಅವನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಆರೋಪಣೆಗಳನ್ನು ಬಗೆಹರಿಸುವುದಕ್ಕೆ ಬದಲಾಗಿ ಅವನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಅವುಗಳ ನೈಜಸ್ಥಿತಿಯನ್ನು ತಿಳಿದು ಕಂಟ್ರಾಕ್ಟರ್‌ಗಳ ಪರ ಅಪಾದನೆ ಮಾಡಲಾಗುತ್ತಿದೆಯೆಂದು ಹೇಳಿದ್ದು ಸರಿಯಲ್ಲ. ಅದು ಒಂದು ಕ್ಷುಲ್ಲಕವಾದ ಅಪಾದನೆ ಎಂಬುದಾಗಿ ಹೇಳುತ್ತೇನೆ. ಮಾನ್ಯ ಶ್ರೀ ಚನ್ನಬಸಪ್ಪನವರು ಈಗ ಇಲ್ಲಿಯೇ ಕೂತಿದ್ದಾರೆ. ಅವರು ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಾ ನಿರ್ಗತಿಕರಿಗೆ ಊಟದ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಮಾನ್ಯ ಶ್ರೀ ಆರ್ಮುಗಂ ಅವರು ಊಟದ ವ್ಯವಸ್ಥೆಯ ಬಗ್ಗೆ ಏನೂ ಹೇಳಲಿಲ್ಲ. ಸ್ಕೂಲು ಮಕ್ಕಳ ಬಗ್ಗೆ ಹೇಳಿದ್ದಾರೆ. ಅವರು ಓಲ್ಡ್ ಏಜ್ ಪೆನಷನ್ ಆಧಾರದ ಮೇಲೆ ಒಂದು ನಿರ್ಣಯವನ್ನು ಅಧಿಕಾರಿಗಳು ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆಯೆಂಬುದಾಗಿ ಅವರ ವರದಿಯಲ್ಲಿ ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಪ್ರವಾಸ ಮಾಡಿದ ಕಾಲದಲ್ಲಿ ನಾನು ಹೇಳಿದ ಮಾತನ್ನು ಕೇಳಿದವರು, ನನ್ನ ಜೊತೆಯಲ್ಲಿದ್ದವರು ಮಾನ್ಯ ಶ್ರೀ ಬಾಪು ಗೌಡರು. ನಾನು ಹೇಳಿದ್ದು ಪ್ರತಿಯೊಂದು ಗ್ರಾಮದಲ್ಲಿ ಡೆಸ್ಟಿಟ್ಯೂಟ್ಸ್ ಯಾರು ಇದ್ದಾರೆ ಅವರ ಒಂದು ಪಟ್ಟಿಯನ್ನು ತಯಾರುಮಾಡಿ, ಅಲ್ಲಿರತಕ್ಕ ಸ್ಕೂಲುಗಳಲ್ಲಿ ಅವರಿಗೆ ಊಟದ ವ್ಯವಸ್ಥೆ ಸರಿಯಾಗಿ ಏರ್ಪಾಡುಮಾಡಿ ಎಂಬುದಾಗಿ ಹೇಳಿದ್ದು, ಅದು ಕರೆಕ್ಟ್ ಪೊಜಿಷನ್.

ಶ್ರೀ ಬಾಪೂಗೌಡ ರಾಯಪ್ಪ.—ಶ್ರೀಮತಿ ಇ. ಇ. ವಾಜ್ ಅವರು ಎಲ್ಲೆಲ್ಲಿ ಕೂಲಿ ಕೆಲಸ ಸಿಗುತ್ತದೋ ಅಂತಹ ಕಡೆಗಳಲ್ಲಿ ನಿರ್ಗತಿಕರಿಗೆ ಕೆಲಸ ಕೊಡಬೇಕೆಂದು ಹೇಳಿದರು. ಅಲ್ಲಿ ಅನೇಕರು ಬೊಂಬಾಯಿ ಕಡೆ ವಲಸೆ ಹೋಗುವ ಪರಿಸ್ಥಿತಿಯನ್ನು ನೋಡಿದ್ದೇವೆ. ಜನರು ಉಪವಾಸದಲ್ಲಿ ಬಳಲಿ ವಲಸೆ ಹೋಗುತ್ತಿದ್ದುದರಿಂದ, ಆದಷ್ಟುಮಟ್ಟಿಗೆ ಪ್ರತಿಯೊಂದು ತಾಲ್ಲೂಕಿಗೆ ಹೋಗಿ, ಉಪವಾಸ ಮಾಡುತ್ತಿರುವವರಿಗೆ ಊಟದ ವ್ಯವಸೆ ಮಾಡುವುದಕ್ಕೆ ಸರ್ವ ಪ್ರಯತ್ನಮಾಡುತ್ತೇವೆಂದು ಅವರು ಹೇಳಿದ್ದು.

ಶ್ರೀ ಎಚ್. ಡಿ. ದೇವೇಗೌಡ.—ಪತ್ರಿಕೆಗಳಲ್ಲಿ ವರದಿಯಾಗಿರುವುದು ಅದು ಮಾನ್ಯ ಶ್ರೀ ಚನ್ನಬಸಪ್ಪನವರ ಹೇಳಿಕೆ ಎಂಬುದಾಗಿ ಹೇಳಿರುವುದನ್ನು ನೋಡಿ ನಾನು ಇಲ್ಲಿ ಹೇಳುತ್ತಿದ್ದೇನೆ. ಅವರಿಗೆ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ

ಶ್ರೀ ಎಚ್. ಎನ್. ನಂಜೇಗೌಡ.—ಅಲ್ಲಿ ಇನ್ನೂ ಅನೇಕ ಸದಸ್ಯರು ಇದ್ದರು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯಶ್ರೀ ಚನ್ನಬಸಪ್ಪನವರ ಹತ್ತಿರ ಮಾನ್ಯ ಶ್ರೀ ನಂಜೇಗೌಡರು ಟ್ರೈನಿಂಗ್ ತೆಗೆದುಕೊಂಡಿದ್ದಾರೆ. ಈ ಸಭೆಯಲ್ಲಿ ಅವರು ಭಾಗವಹಿಸಿದ್ದಾಗ ಹಿಂದಿನ ಸರ್ಕಾರದಲ್ಲಿ ಮಾಡಿರತಕ್ಕ ವ್ಯವಹಾರ ಎಲ್ಲವನ್ನೂ ಸಹ ನಾನು ತೆಗೆದುಕೊಂಡಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸಭೆಯಲ್ಲಿ ಹೇಳುವಾಗಲೂ ಅಷ್ಟೇ ಹಿಡಿತದಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಆ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡಿದೆನೆಂದರೆ, ಪತ್ರಿಕೆಗಳಲ್ಲಿ ವರದಿಯಾಗಿರುವುದು ಮಂತ್ರಿಗಳ ಭರವಸೆಗಳು, ಮಂತ್ರಿಗಳ ಹೇಳಿಕೆಗಳ ಕಾರ್ಯರೂಪಕ್ಕೆ ಬರುವುದರಲ್ಲಿ ಇವತ್ತು ಸರ್ಕಾರದ ಯಂತ್ರ ಸಾಕಷ್ಟು ರೀತಿಯಲ್ಲಿ, ವೇಗದಲ್ಲಿ ಚಲಿಸಿಲ್ಲವೆಂದು ನನ್ನ ವಾದ, ಏಕೆಂದರೆ ಮಂತ್ರಿಗಳು ಅಲ್ಲಿಗೆ ಹೋದಂಥ ಕಾಲದಲ್ಲಿ ಹೇಳಿಕೆಗಳನ್ನು ಕೊಡುವುದು ಅಲ್ಲಿಗೇ ಮುಕ್ತಾಯವಾಯಿತು ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಅಲ್ಲಿಂದ ಬಂದು ಇಲ್ಲಿ ವಿಧಾನಸೌಧವನ್ನು ಏರಿ ಅವರ ಕೋಣೆಗೆ ಹೋಗಿ ಕೂತಮೇಲೆ ಅವರು ಕೊಟ್ಟಂಥ ಹೇಳಿಕೆಗಳು ಕಾರ್ಯರೂಪಕ್ಕೆ ಬರುವುದಕ್ಕೆ ಏನೇನು ವ್ಯವಸ್ಥೆಗಳನ್ನು ಮಾಡಬೇಕಾಗಿತ್ತೋ ಅವನ್ನು ಮಾಡಲಿಲ್ಲ. ಮೊನ್ನೆ ಈ ಸಭೆಯಲ್ಲಿಯೇ ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಮಾನ್ಯ ಶ್ರೀ ಶಿವಣ್ಣನವರು ಸ್ಕೂಲ್ ಫೀಸ್ ವಿಷಯವಾಗಿ ಒಂದು ಪ್ರಶ್ನೆಯನ್ನು ಕೇಳಿದ್ದಕ್ಕೆ ಅವರು ಉತ್ತರ ಹೇಳುತ್ತಾ, ಯಾವುದೋ ಒಂದು ಆರ್ಡರಿನ ಬಗ್ಗೆ ಅದು ಸರ್ಕಾರದ ಆರ್ಡರ್ ಅಲ್ಲವೆಂದೂ ಸಹ ಸ್ಪಷ್ಟವಾಗಿ ಹೇಳಿದ್ದಾರೆ. ಒಂದು ಪುಸ್ತಕದಲ್ಲಿ ೪೬ನೇ ಪುಟದಿಂದ ಹಿಡಿದು ೫೬ನೇ ಪುಟದವರೆಗೆ ಮಂತ್ರಿಗಳು ಕೊಟ್ಟಿರುವ ಅಷ್ಯೂರೆನ್ಸ್ ಏನಿವೆಯೋ ಅವನ್ನು ಕೊಡುವಾಗ ಅವನ್ನು ಸರಿಯಾದ ಭಾಷೆಯಲ್ಲಿ ಹಾಕಿಲ್ಲ, ಅದರಲ್ಲಿ ಕೊಆರ್ಡಿನೇಷನ್ ಇಲ್ಲ ಎಂಬುದಾಗಿ ಹಾಕಿದ್ದಾರೆ. ಒಂದಕ್ಕೊಂದಕ್ಕೆ ಹೊಂದಾಣಿಕೆಯೇ ಇಲ್ಲ. ಎಷ್ಟೋ ಸಂದರ್ಭಗಳಲ್ಲಿ ಒಂದೊಂದು ಸಾರಿ ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳುವ ನಿರ್ಣಯಕ್ಕೂ ಮಾನ್ಯ ಮಂತ್ರಿಗಳು ಕೊಡುವ ಹೇಳಿಕೆಗಳಿಗೂ ಬಹಳ ವ್ಯತ್ಯಾಸವಿದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಶ್ರೀ ಆರ್ಮುಗಂ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಕೆ. ಎಫ್. ಪಾಟೀಲ್.—ಪೇಪರ್ ಹೇಳಿಕೆಯ ಮೇಲೆ ಜಿ.ಒ. ಗಳನ್ನು ನೋಡಲಿಕ್ಕೆ ಅವು ಸಿಕ್ಕಿವೆ ಎಂಬುದು ಸರಿಯೇ ?

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ಸಂಬಂಧಪಟ್ಟ ಗೌರ್ನಮೆಂಟ್ ಆರ್ಡರ್ ಕೊಟ್ಟಿರುವುದೂ ಸಹ ಈ ಒಂದು ಪ್ರಿಂಟೆಡ್ ಬುಕ್‌ನಲ್ಲಿದೆ.

ಶ್ರೀ ಕೆ. ಎಫ್. ಪಾಟೀಲ್.—ಶಾಸನಗಳನ್ನು ಮೊದಲು ಕೊಟ್ಟರೋ ಅಥವಾ ಆರ್ಡರ್‌ಗಳನ್ನು ಕೊಟ್ಟರೋ ?

ಶ್ರೀ ಎಚ್. ಡಿ. ದೇವೇಗೌಡ.—ಇವರು ಆಶ್ವಾಸನೆಯನ್ನು ಕೊಟ್ಟಮೇಲೆ ಸರ್ಕಾರದವರು ಆರ್ಡರ್ ಮಾಡಿದ್ದಾರೆಂದು ಮಾನ್ಯ ಸದಸ್ಯರ ಅಭಿಪ್ರಾಯವೆಂದು ಕಾಣುತ್ತದೆ. ಮಂತ್ರಿಗಳ ಭರವಸೆ ಈಗ ೧-೯-೧೯೭೨ರಿಂದ ಪ್ರಾರಂಭವಾಗಿದೆ. ಅದು ಎಂಡ್ ಆಗಿರುವುದು ೨೮-೧೧-೭೨ರವರೆಗೆ. ಇವರು ಕೊಟ್ಟಿರುವ ಒಂದೊಂದು ಹೇಳಿಕೆಯನ್ನು ಜಿ.ಒ.ಗಳೊಂದಿಗೆ ವೆರಿಫೈ ಮಾಡಿಕೊಂಡು ನೋಡಿದರೆ ಆಗ ಎಲ್ಲ ವಿಷಯಗಳೂ ಗೊತ್ತಾಗುತ್ತದೆ. ಕೆಲವರು ನನ್ನನ್ನು ರಿಲೀಫ್ ಕಮಿಟಿಗಳು ಈಗ ತಾಲ್ಲೂಕುಗಳಲ್ಲಿ ಕೆಲಸಮಾಡುತ್ತಾ ಇಲ್ಲವೇ ಎಂದು ಪ್ರಶ್ನೆಮಾಡಿದರು. ಅದರ ಬಗ್ಗೆ ನಾನು ಹೇಳಬೇಕಾದರೆ, ಸರ್ಕಾರ ಯಾವರೀತಿಯಲ್ಲಿ ನಿರ್ಣಯ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ರಿಲೀಫ್ ಕಮಿಟಿಗಳು ಕೆಲವು ಕಡೆಗಳಲ್ಲಿ ಸರಿಯಾಗಿ ಕೆಲಸ ಮಾಡುವುದಕ್ಕಾಗಲಿಲ್ಲ. ಹಿಂದೆ ರಾಜ್ಯಪಾಲರಾಗಿದ್ದ ಮಾನ್ಯ ಶ್ರೀ ಧರ್ಮವೀರ ಅವರ ಆಡಳಿತದಲ್ಲಿಯೇ ಬಹುಶಃ ಎಲ್ಲ ರಿಲೀಫ್ ಕಮಿಟಿಗಳನ್ನು ರದ್ದುಮಾಡಿದ್ದಾರೆಂದು ನನ್ನ ಭಾವನೆ ಆ ಬಗ್ಗೆ ಒಂದು ಸರ್ಕ್ಯುಲರನ್ನೂ ಸಹ ಹೊರಡಿಸಲಾಗಿದೆ ಎಂಬುದನ್ನೂ ಕೇಳಿದ್ದೇನೆ. ಅದಾದಮೇಲೆ ಹೊಸದಾಗಿ ರಿಲೀಫ್ ಕಮಿಟಿಗಳನ್ನು ಎಲ್ಲಾ ತಾಲ್ಲೂಕು ಗಳಲ್ಲಿಯೂ ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆಂದು ಕೇಳಿದ್ದೇನೆ. ಅದರ ಬಗ್ಗೆ ನನ್ನ ಆರೋಪಣೆ ಏನೂ ಇಲ್ಲ. ಕೆಲವು ಜಿಲ್ಲೆಗಳಲ್ಲಿ ಹಳೆಯ ರಿಲೀಫ್ ಕಮಿಟಿಗಳನ್ನು ಕೇಳಿ ನಿರ್ಣಯ ಮಾಡಿರಬಹುದು.

ಇನ್ನು ಕೆಲವು ಜಿಲ್ಲೆಗಳಲ್ಲಿ ಕೆಲವು ಮಂತ್ರಿಗಳು ಪ್ರವಾಸದಲ್ಲಿ ಹೋದಾಗ ಯಾವ್ಯಾವ ಅರ್ಜಿಗಳು ಬಂದಿವೆ. ಅವುಗಳ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಿದ್ದಾರೆ. ಹೀಗೆ ಅವರು ಮೂರು ತಿಂಗಳ ಹಿಂದೆ ಪ್ರವಾಸ ಮಾಡಿದಾಗ ಹಲವು ಹುಕುಂ ಗಳನ್ನು ಮಾಡಿದ್ದಾರೆ. ಆದರೆ ಸ್ಥಳದ

(ಶ್ರೀ ಎಚ್. ಡಿ. ದೇವೇಗೌಡ)

ಪರಿಸ್ಥಿತಿಯನ್ನು ಅವಲೋಕಿಸಿ. ಸ್ಥಳೀಯ ಸಂಸ್ಥೆಗಳ ಅಭಿಪ್ರಾಯವನ್ನು ತೆಗೆದು ಕೊಂಡು ಮಾಡಿದ್ದರೆ ಚೆನ್ನಾಗಿತ್ತು. ಇವತ್ತು ಕೆಲವು ಕಡೆ ರಿಲೀಫ್ ಕಮಿಟಿಗಳ ಹೆಸರೇ ಇಲ್ಲ. ಆದ್ದರಿಂದ ಇವರ ಕರ್ತವ್ಯ ವ್ಯಾಪ್ತಿಯೊಳಗೆ ಇದ್ದಂತಹ ಕಮಿಟಿಗಳು ಸಹ ಸರಿಯಾದ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ಮಾಡುವುದಕ್ಕಾಗಲಿಲ್ಲ. ಇವೊತ್ತಿನ ದಿವಸ ರಾಜ್ಯದಲ್ಲಿರತಕ್ಕಂತಹ ಪರಿಸ್ಥಿತಿಯ ಬಗ್ಗೆ ಮೇಲ್ಮನೆಯಲ್ಲಿ ನಡೆದ ಚರ್ಚೆಯ ವಿಚಾರ ಪತ್ರಿಕೆಯಲ್ಲಿ ನಾನು ಓದಿದ್ದೇನೆ. ನಮ್ಮ ವಿರೋಧ ಪಕ್ಷದ ನಾಯಕರು ಅಲ್ಲಿ ಇದನ್ನು ಒಂದು ದೈವೀ ಶಾಪ ಎಂದು ಹೇಳಿದ್ದರು. ಅದಕ್ಕೆ ಮಾನ್ಯ ಹುಚ್ಚಮಾಸ್ತಿ ಗೌಡರು "ನೀವು ಹತ್ತು ವರ್ಷ ಆಡಳಿತವನ್ನು ಮಾಡಿದಂತಹ ಪಾಪದ ಫಲ ಇದು, ಇದನ್ನು ರಾಜ್ಯದ ಜನತೆ ಊಟ ಮಾಡುತ್ತಿದೆ" ಎಂದು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿಯೂ ವರದಿಯಾಗಿದೆ. ನಾನು ಅದರ ಪ್ರೊಸೀಡಿಂಗ್ಸ್ ತರಿಸಿ ಓದಿಲ್ಲ. ಆ ಮೇಲೆ ನಾನಾದರೂ ತಿಳಿದುಕೊಂಡೆ, "ಎಂತಹ ಪಾಪದ ಫಲವಾಯಿತು ಈ ವೀರೇಂದ್ರ ಪಾಟೀಲರ ಸರ್ಕಾರ ೧೦ ವರ್ಷಗಳ ಕಾಲ ಆಡಳಿತ ಮಾಡಿ" ಎಂದು. ಅದರಲ್ಲೂ ಗುಲ್ಬರ್ಗ ಜಿಲ್ಲೆಯಲ್ಲಿ ಈ ರೀತಿಯಾಯಿತಿಯಲ್ಲವೆಂದು ಯೋಚನೆ ಮಾಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :– ಮಾನ್ಯ ಬಸವರಾಜ ಕಟ್ಟೀಮನಿ ಯವರು ಕಳೆದ ೨೫ ವರ್ಷಗಳಲ್ಲಿ ಉರಿದು ಉದುರಿ ಹೋದ ಸರ್ಕಾರಗಳು ಇವಕ್ಕೆ ಹೊಣೆಯಲ್ಲವೇ ಎಂದು ಪ್ರಸ್ತಾಪ ಮಾಡಿದಾಗ ನಾನು ಅದರ ಬಗ್ಗೆ ಪ್ರಸ್ತಾಪ ಮಾಡಿ ನನ್ನ ಅಭಿಪ್ರಾಯವನ್ನು ಹೇಳಬೇಕಾಯಿತು.

ಶ್ರೀ ಎಚ್. ಡಿ. ದೇವೇಗೌಡ :– ಅವರು ಸಾಹಿತಿ ಎಂದು ಕಾಣುತ್ತದೆ. ಅಲ್ಲದೆ ಇತ್ತೀಚೆಗೆ ಅವರ ಟರ್ಮ್ ಮುಗಿಯುತ್ತಾ ಬಂದಿದೆ ಎಂದು ಕಾಣುತ್ತದೆ. ಅದಕ್ಕೆ ಆ ರೀತಿ ಹೇಳುತ್ತಾರೆಂದು ಕಾಣುತ್ತದೆ. ಆದರೆ ರಾಜಾಸ್ಥಾನದಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ಆಂಧ್ರ ಮುಂತಾದ ರಾಜ್ಯಗಳಲ್ಲಿಯೂ ಈ ಕ್ಷಾಮ ಬರುವುದಕ್ಕೆ ಮುಂಚೆ ಆಡಳಿತದಲ್ಲಿ ಕಾಂಗ್ರೆಸ್ (ಒ) ಪಕ್ಷ ಇತ್ತೇ ಎಂದು ನಾನು ಕೇಳುತ್ತೇನೆ. ಇದು ಇಡೀ ರಾಷ್ಟ್ರದಲ್ಲಿ ಬೆಳೆಯುವುದಕ್ಕೆ ನಮ್ಮ ರಾಜ್ಯ ಮಟ್ಟದ ಆಡಳಿತದ ಪಾಪದ ಫಲವೇ ; ಅಥವಾ ರಾಷ್ಟ್ರ ಮಟ್ಟದ ನಾಯಕತ್ವದ ಕಾರಣವೇ ಎಂಬುದನ್ನು ನಾನು ಪ್ರಶ್ನೆ ಮಾಡುತ್ತೇನೆ.

ಅದೇ ರೀತಿ ಇವತ್ತು ಈ ಸಮಸ್ಯೆಗಳ ಬಗ್ಗೆ ಎಷ್ಟು ಪ್ರಯತ್ನ ಸರ್ಕಾರ ಮಾಡಿದೆ ಎಂಬುದರ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಇವತ್ತು ನಮ್ಮ ಆಪಾದನೆ ಇಷ್ಟೆ. ರಾಜ್ಯದಲ್ಲಿರತಕ್ಕಂತಹ ಬೃಹತ್ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರವು ಸರಿಯಾದ ರೀತಿಯಲ್ಲಿ ತನ್ನ ಚಾಣಾಕ್ಷತನವನ್ನು ತೋರಿಸಿಲ್ಲ. ಅದನ್ನು ನಮ್ಮ ಮಿತ್ರರಾದಂತಹ ಮಾನ್ಯ ಆರ್ಮುಗಂರವರು ಹೇಳಿದ್ದಾರೆ. ಹಣಕಾಸಿನ ವಿಚಾರದಲ್ಲಿ ಅವರು ಸುಮಾರು ೫೦ ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದ್ದಾರೆ. ಅವರು ಇವೊತ್ತಿನ ದಿವಸ ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಬಂದು ಆ ರೀತಿ ಹೇಳಿದ್ದಾರೆ. ಅವತ್ತು ಈ ಪರಿಸ್ಥಿತಿಯಲ್ಲಿ ಇರಲಿಲ್ಲ. ಅದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆಂಬುದನ್ನು ತಿಳಿಯಬೇಕಾಗಿದೆ. ಏಕೆಂದರೆ ತಾವು ಒಂದು ನೈಜ ಚಿತ್ರವನ್ನು ಕೇಂದ್ರ ಸರ್ಕಾರಕ್ಕೆ ತೋರಿಸಿ, ಸುಮಾರು ೧೦೦–೨೦೦ ಕೋಟಿ ರೂಪಾಯಿ ಕೇಳುವುದರ ಬದಲು, ಅದಕ್ಕಿಂತಲೂ ಕಡಿಮೆ ಕೇಳಿ ಕೇವಲ ೧೬ ಕೋಟಿ ಚಿಲ್ಲರೆ ಪಡಕೊಂಡಿದ್ದೀರಿ. ಆದರೆ ನವಂಬರ್ ೧೪ ರಂದು ರಾಜ್ಯಸಭೆಯಲ್ಲಿ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕಂತಹ ಉತ್ತರದಲ್ಲಿ ಏನು ಹೇಳಿದ್ದಾರೆಂಬುದನ್ನು ತಾವು ನೋಡಬಹುದು. ಸ್ಟೇಟ್ ಗವರ್ನ್‌ಮೆಂಟ್ಸ್ ಎಸ್ಟಿಮೇಟ್ಸ್ ಆಫ್ ಎಕ್ಸ್‌ಪೆಂಡಿಚರ್ ಬಗ್ಗೆ ಹೀಗೆ ಹೇಳಿದ್ದಾರೆ :–

ಆಂಧ್ರ ಪ್ರದೇಶ :	೭೬.೫೫	ಕೋಟಿ ರೂಪಾಯಿ
ಬಿಹಾರ	೩೮.೮೬	,,
ಗುಜರಾಥ್	೩೩.೦೦	,,
ಮೈಸೂರು	೧೬.೬೦	,,

ಬಹುಶಃ ನವಂಬರ್ ೧೪ ನೇ ತಾರೀಕಿಗೆ ರಾಜ್ಯದಲ್ಲಿರತಕ್ಕಂತಹ ಸಮಸ್ಯೆಯ ಪೂರ್ಣ ಅರಿವು ನಿಮಗೆ ಗೊತ್ತಿರಲಿಲ್ಲವೇ ? ನವಂಬರ್ ೧೫ ನೇ ತಾರೀಕಿಗೆ ಅಲ್ಲಿ ಏನು ಉತ್ತರ ಕೊಟ್ಟಿದ್ದಾರೆ, ಅದು ತಮ್ಮ ಕಡೆಯಿಂದ ಹೋದ ವರದಿಯ ಆಧಾರದ ಮೇಲೆ ಕೊಟ್ಟಿದ್ದಾರೆ. ಆವತ್ತು ೧೬.೬ ಕೋಟಿ ರೂಪಾಯಿ ಸಾಕಾಗುತ್ತದೆಂದು ಹೇಳಿದ್ದಾರೆ. ನಾವು ೨೭ನೇ ತಾರೀಕಿಗೆ ಇಲ್ಲಿ ಸೇರಿದಾಗ ನಮಗೆ ೨-೭ ಕೋಟಿ ರೂಪಾಯಿ ನಮಗೆ ಬೇಕಾಗುತ್ತದೆ ಎಂದು ಪುನಃ ಹೇಳಿದ್ದೀರಿ. ಅಂದರೆ ಮುಂದೆ ೭೮ ತಿಂಗಳಲ್ಲಿ ಅಗತಕ್ಕ ವೆಚ್ಚವನ್ನು ಸಹ ಕೂಡಿಸಿ ನಮಗೆ ೨೭ ಕೋಟಿ ರೂಪಾಯಿ ಬೇಕೆಂದು ಹೇಳಿದ್ದೀರಿ. ಇವತ್ತು

ಮಾನ್ಯ ಆರ್ಮುಗಂ ರವರು ಇದರ ಬಗ್ಗೆ ೫೦ ಕೋಟಿ ರೂಪಾಯಿ ಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ ನೀವು ರಾಜ್ಯದ ಇಂತಹ ಪ್ರದೇಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಷ್ಟು ಜನರಿಗೆ ಕೆಲಸವನ್ನು ಕೊಡಬೇಕು ; ಎಷ್ಟು ಜನರಿಗೆ ಗಂಜಿ ಕೇಂದ್ರಗಳನ್ನು ತೆರೆಯಬೇಕು ಮತ್ತು ಎಷ್ಟು ಕಡೆ ದನಗಳಿಗೆ ಮೇವು ಒದಗಿಸಬೇಕು—ಇತ್ಯಾದಿಗಳ ಬಗ್ಗೆ ಒಂದು ಕಾಂಪ್ರೆನ್ಸಿವ್ ಸ್ಕೀಮು ಮಾಡಿ ಅಂದಾಜು ಮಾಡಿದ್ದೀರಾ ಎಂದು ನಾನು ಕೇಳುತ್ತೇನೆ.

ಏತಕ್ಕೆಂದರೆ ಇವೊತ್ತು ಬೇರೆ ರಾಜ್ಯಗಳು ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾ ಇರುವಾಗ ಮೈಸೂರು ರಾಜ್ಯದವರು ಇಲ್ಲಿ ನಿಜವಾಗಿ ಇರತಕ್ಕ ಪರಿಸ್ಥಿತಿಯನ್ನು ಕುರಿತು ಮಾಡಿರುವ ವರದಿಯನ್ನು ಕೇಂದ್ರಕ್ಕೆ ಕೊಟ್ಟು ಅಲ್ಲಿಂದ ಹಣವನ್ನು ಪಡೆಯುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ಮತ್ತೊಂದು ಸ್ಟಡಿ ಟೀಮು ಬರುತ್ತದೆ ಅವರು ಬಂದು ನೋಡಿಕೊಂಡು ಹೋದಮೇಲೆ ನಾವು ರಿಪೋರ್ಟ್ ಕಳುಹಿಸಬೇಕಾಗುತ್ತದೆ ಎನ್ನುವ ಭಾವನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ. ಅದು ಇರಲಿ. ಆದರೂ ಸಹ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದವರು ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡಿಲ್ಲ ಎಂದು ಹೇಳಿದರೆ ತಪ್ಪು ಆಗುವುದಿಲ್ಲ. ಮೊನ್ನೆ ಮುಖ್ಯ ಮಂತ್ರಿಗಳು ದನಗಳನ್ನು ಉಳಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಏನು ಸಾಧ್ಯವಿದೆ ? ಮನುಷ್ಯನನ್ನೂ ಉಳಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ? ಅಲ್ಲಿಗೆ ಸರ್ಕಾರದ ವ್ಯವಹಾರ ಮುಗಿದೇ ಹೋಯಿತು. ಒಂದು ಕಡೆ ಬಾಂಗ್ಲಾದೇಶದ ಜನತೆಯನ್ನು ಉಳಿಸುವುದಕ್ಕೆ ಭಾರತ ಸರ್ಕಾರದವರು ಸುಮಾರು ೮೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ನಮ್ಮ ದೇಶದಲ್ಲಿ ೩೦-೩೫ ಲಕ್ಷ ಜನ ಹೊಟ್ಟೆಗೆ ಇಲ್ಲದೆ ಸಾಯುತ್ತಿದ್ದಾರೆ. ಸುಮಾರು ೧೦-೧೨ ಲಕ್ಷ ದನಗಳು ಕಷ್ಟಕ್ಕೆ ತುತ್ತಾಗಿವೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕಷ್ಟವಾಗಿದೆ ಎಂದು ಹೇಳಿದರು. ದನಗಳನ್ನು ಸಾಕುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಹೀಗಿರುವಾಗ ಪಶುಸಂಗೋಪನಾ ಶಾಖೆಯ ಮಂತ್ರಿಗಳು ಏತಕ್ಕೆ ಇರಬೇಕು ? ಅವರ ಕೈಯಲ್ಲಿ ಈ ಕೆಲಸ ಆಗುವುದಿಲ್ಲ ಎಂದರೆ ಅವರು ಏತಕ್ಕೆ ಮಂತ್ರಿಗಳಾಗಿರಬೇಕು ? ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ನಮ್ಮಿಂದ ದನಗಳನ್ನು ಸಾಕುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಈ ಒಂದು ಬರಗಾಲ ಪರಿಸ್ಥಿತಿಯಿಂದ ಜನ ಸತ್ತಿಲ್ಲ ಎನ್ನುವ ಬಗ್ಗೆ ಕೂಡ ಮಾನ್ಯ ಸದಸ್ಯರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಈಗ ಒಂದು ವೇಳೆ ಯಾರಾದರೂ ಹೊಟ್ಟೆಗಿಲ್ಲದೆ ಸತ್ತರೂ ಕೂಡ ಅಧಿಕಾರಿಗಳು ಅದನ್ನು ವರದಿ ಮಾಡಲು ನ್ಯಾಚುರಲ್ ಆಗಿ ಹೆದರುತ್ತಾರೆ. ಅವರು ಸರ್ಕಾರದವರ ಇಂಗಿತವನ್ನು ನೋಡಿ ರಿಪೋರ್ಟ್ ಕೊಡಬೇಕಾಗುತ್ತದೆ. ಮೊನ್ನೆ ಶ್ರೀಮಾನ್ ಆರ್ಮುಗಂ ಅವರು ಅಭಾವಪೀಡಿತ ಪ್ರದೇಶಕ್ಕೆ ಹೋದಾಗ ಒಬ್ಬ ಮನುಷ್ಯ ಯಾವ ಕೆಲಸವು ಇಲ್ಲದೆ ಆಹಾರದ ಅಭಾವದಿಂದ ತೊಂದರೆಯನ್ನು ಅನುಭವಿಸಿ ೮-೧೦ ದಿವಸ ಮನೆಯಲ್ಲಿ ಸುಮ್ಮನೆ ಕುಳಿತಿದ್ದು ಸತ್ತು ಹೋದಾಗ ಅವನಿಗೆ ವಯಸ್ಸಾಗಿತ್ತು. ಖಾಯಿಲೆಯಾಗಿತ್ತು ಅದಕ್ಕೆ ಸತ್ತುಹೋದ ಎಂದು ಅಧಿಕಾರಿಗಳು ಹೇಳಿದರು. ಅವನಿಗೆ ಆಹಾರವನ್ನು ತಿಂದು ಜೀರ್ಣಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಸತ್ತ ಎಂದರೆ ಅವನು ಉಪವಾಸದಿಂದ ಸತ್ತ ಎಂದು ಆಗುವುದಿಲ್ಲವೇ ಎಂದು ನಾನು ಕೇಳಬೇಕಾಗುತ್ತದೆ. ಕೆಲಸ ಇಲ್ಲದೆ ಎಷ್ಟೋ ಜನ ಊರುಬಿಟ್ಟು ಬೇರೆ ಕಡೆ ಹೋದರು ಎಂದು ಹೇಳಿದಾಗ ಯಾರು ಊರುಬಿಟ್ಟು ಹೋಗಲ್ಲ ಎಲ್ಲರಿಗೂ ಸಾಕಷ್ಟು ಕೆಲಸವನ್ನು ಕೊಡುತ್ತೇವೆ ಎಂದು ಮಂತ್ರಿಗಳು ಹೇಳಿದ್ದಾರೆ. ಆದರೆ ಶ್ರೀಮಾನ್ ಆರ್ಮುಗಂ ಅವರು ಬಹಳ ಶ್ರಮಪಟ್ಟು ತಿರುಗಿ ವಿಷಯವನ್ನು ಸಂಗ್ರಹಣೆ ಮಾಡಿದ್ದಾರೆ. ಅನೇಕ ಜನಗಳು ಮನೆಗಳಿಗೆ ಬೀಗಹಾಕಿಕೊಂಡು ಬೇರೆ ರಾಜ್ಯಗಳಿಗೆ ಹೋಗಿದ್ದಾರೆ ಎಂದು ಹೇಳಿದ್ದಾರೆ. ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆ ಜನಗಳಿಗೆ ನಮ್ಮ ರಾಜ್ಯದಲ್ಲಿ ಕೆಲಸವನ್ನು ಒದಗಿಸುವುದಕ್ಕೆ ಸಾಧ್ಯವಾಗದೆ ಅವರು ಬೇರೆ ರಾಜ್ಯಗಳಿಗೆ ಹೋಗಿದ್ದಾರೆ ಎನ್ನತಕ್ಕಂಥಾದ್ದನ್ನು ನಮ್ಮ ಸ್ನೇಹಿತರು ವರದಿಯಲ್ಲಿ ಹಾಕಿದ್ದಾರೆ. ಈ ಬಗ್ಗೆ ಸರ್ಕಾರದವರು ಹಿಂದೆಯೇ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದರೆ ಈ ಸಮಸ್ಯೆ ಬರುತ್ತಾ ಇರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಆ ಪ್ರದೇಶದಲ್ಲಿ ಸಂಚಾರ ಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದರೆ ಜನಗಳು ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ಏತಕ್ಕೆ ಹೋಗಬೇಕಾಗಿತ್ತು ? ಅಥವಾ ಅವರು ಆ ರೀತಿ ಹೋಗತಕ್ಕಂಥಾ ಅವಶ್ಯಕತೆ ಏನಿತ್ತು ? ಅವರಿಗೆ ಸರ್ಕಾರದವರು ಕೆಲಸವನ್ನು ಒದಗಿಸುವುದರಲ್ಲಿ ವಿಫಲರಾಗಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ನವಂಬರ್ ತಿಂಗಳಿನಲ್ಲಿ ಗುಲ್ಬರ್ಗಾ ರೈಲ್ವೆಸ್ಟೇಷನ್‌ನಿಂದ ಮಹಾರಾಷ್ಟ್ರಕ್ಕೆ ಪೂನಾಕ್ಕೆ, ಅಹಮದಾಬಾದಿಗೆ ಎಷ್ಟು ಟಿಕೇಟ್ ಖರ್ಚಾಗಿವೆ ಎಂಬುದನ್ನು ನೋಡಿದರೆ ತಮಗೆ ಎಷ್ಟು ಜನ ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ಹೋಗಿದ್ದಾರೆ ಎಂಬುದು ಗೊತ್ತಾಗುತ್ತದೆ.

ಆ ಮೇಲೆ ಶ್ರೀಮಾನ್ ಚೆನ್ನಬಸಪ್ಪನವರು ೧೫೧ ಕೆರೆಗಳ ಕೆಲಸವನ್ನು ತೆಗೆದು ಕೊಂಡಿದ್ದೇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಹೇಳುವುದಕ್ಕೆ ಹೋದರೆ ಎರಡು ಗಂಟೆಯಾಗುತ್ತದೆ. ಆದರೆ ಈ ಸಭೆಯ

(ಶ್ರೀ ಎಚ್. ಡಿ. ದೇವೇಗೌಡ)

ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ನಾನು ಅಪೇಕ್ಷೆ ಮಾಡುವುದಿಲ್ಲ. ಆದರೆ ಕೆಲವು ಕೆರೆಗಳ ನಿರ್ಮಾಣವನ್ನು ಯಾವರೀತಿ ಮಾಡಿದ್ದಾರೆ, ಹೇಗೆ ಮಾಡಿದ್ದಾರೆ ಎಂಬುದನ್ನು ಸ್ವಲ್ಪ ಹೇಳಬೇಕಾಗುತ್ತದೆ. ಈಗ ಮಡಕಶಿರ ಕೆರೆಯ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ.

SRI H. M. CHANNABASAPPA : I think it is too much. The Leader of the Opposition had written to me and I had promised to give the information. What is the meaning of the Leader of the Opposition saying in this manner ? I promised to give the information regarding Madakashira Tank. The collection of information is not yet completed. Then how can he accuse me that what I have not given is not correct.

ಶ್ರೀ ಎಚ್. ಡಿ. ದೇವೇಗೌಡ :— ಶ್ರೀಮಾನ್ ಚನ್ನಬಸಪ್ಪನವರು ಉತ್ತರವನ್ನು ಕೊಡುವುದರಲ್ಲಿ ಅಸಮರ್ಥರು ಎಂದು ನಾನು ಹೇಳುವುದಿಲ್ಲ. ಅವರಿಗೆ ಉತ್ತರವನ್ನು ಕೊಡುವ ಸಾಮರ್ಥ್ಯ ಇದೆ. ತಪ್ಪನ್ನು ಡಿಫೆಂಡ್ ಮಾಡುವ ಸಾಮರ್ಥ್ಯವು ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ :— ತಪ್ಪನ್ನು ಡಿಫೆಂಡ್ ಮಾಡುವುದು ನನಗೆ ಕಷ್ಟವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ :— ಆ ಜಾಗದಲ್ಲಿ ಕುಳಿತು ಕೊಳ್ಳಬೇಕಾದರೆ ಅದನ್ನು ಮಾಡಬೇಕಾಗುತ್ತದೆ.

2-00 P.M.

ಮಾನ್ಯ ಆಮ್ರುಗಂ ಅವರು ಕೊಟ್ಟಿರುವ ವರದಿಯನ್ನೆಲ್ಲಾ ನಾನು ಓದುವುದಕ್ಕೆ ಹೋಗುವುದಿಲ್ಲ. ಅದರಲ್ಲಿರತಕ್ಕಂಥ ಗಹನವಾದ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಮಾನ್ಯ ಸದಸ್ಯರು ಈಗಾಗಲೇ ಪ್ರಯತ್ನಮಾಡಿರುವುದರಿಂದ ನಾನು ಪ್ರತಿಯೊಂದನ್ನೂ ಕೋಟ್ ಮಾಡುವುದಕ್ಕೆ ಹೋಗುವುದಿಲ್ಲ. ಅವರು ತಮ್ಮ ಜನರಲ್ ರಿಮಾರ್ಕ್ಸ್‌ನಲ್ಲಿ ಅಲ್ಲಿನ ಜನರು ಜೀವಂತ ಹೆಣಗಳ ಹಾಗೆ ಇದ್ದಾರೆಂದು ಹೇಳಿದ್ದಾರೆ. ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿ ಕೊಯ್ನಾ ನದಿ ನೀರನ್ನು ಪಡೆಯುವುದಕ್ಕೆ ಪ್ರಯತ್ನಮಾಡಿ ಎಂದು ಹೇಳಿದ್ದಾರೆ. ಇದೇ ರೀತಿ ಹಿಂದೆ ಆ ನದೀ ನೀರನ್ನು ಪಡೆಯಲು ೬-೭ ಲಕ್ಷ ರೂಪಾಯಿಗಳನ್ನು ನಮ್ಮ ಸರ್ಕಾರದವರು ಖರ್ಚುಮಾಡಿ ಕೈಸುಟ್ಟುಕೊಂಡ ಪ್ರಸಂಗವಿದೆ. ಅವರು ನೀರನ್ನು ಬಿಟ್ಟರು. ಆದರೆ ಅವರು ಬಿಟ್ಟ ನೀರು ನಮ್ಮ ರಾಜ್ಯದವರೆಗೆ ಹರಿದು ಬರಲೇ ಇಲ್ಲ. ಆದ್ದರಿಂದ ಅದಕ್ಕೆ ಪ್ರಯತ್ನಮಾಡದೆ ನಮ್ಮ ರಾಜ್ಯದಲ್ಲಿರುವ ನೀರನ್ನೇ ಉಪಯೋಗಿಸಿಕೊಳ್ಳುವುದಕ್ಕೆ ಎಷ್ಟೇ ಹಣ ಖರ್ಚಾದರೂ ಸರಿಯೇ, ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹಣದ ಖರ್ಚಿನ ಬಗ್ಗೆ ಹಿಂದೆಮುಂದೆ ನೋಡುವುದು ಬೇಡ. ಪಿ ಡಬ್ಲ್ಯು. ಇಲಾಖೆಯ ಎಲ್ಲ ಟ್ರಕ್ಕನ್ನು ಉಪಯೋಗ ಮಾಡಿ ಕೊಂಡು ಆ ಭಾಗಕ್ಕೆ ನೀರನ್ನು ಒದಗಿಸಬೇಕು. ಅದು ಸಾಲದಿದ್ದರೆ ಡಿಫೆನ್ಸ್‌ಗೆ ಸೇರಿದ ಟ್ರಕ್ಸ್‌ನ್ನು ಪಡೆದು ಕೊಳ್ಳಬಹುದು. ಮುಂದಿನ ಮುಂಗಾರು ಮಳೆ ಬರುವವರೆಗೆ ಆ ಜನರಿಗೆ ನೀರಿನ ಕಾಟ ತಪ್ಪಿದ್ದಲ್ಲ. ಅಲ್ಲಿಯವರೆಗೆ ನೀರನ್ನು ಒದಗಿಸಬೇಕು. ಇದುವರೆಗೆ ತಮ್ಮ ಪ್ರಾಣವನ್ನು ಉಳಿಸಿಕೊಳ್ಳಲು ಹಳ್ಳಗಳಲ್ಲಿದ್ದ ಮಡ್ಡೀ ನೀರನ್ನೇ ಕುಡಿದಿದ್ದರಿಂದ ಕಾಲರಾ ಬೇರೆ ಹೆಚ್ಚಿದೆ. ಈ ಕಾರಣದಿಂದ ಒಳ್ಳೆಯ ನೀರನ್ನು ಒದಗಿಸದಿದ್ದರೆ ಮುಂದೆ ನಾವು ಹೆಣಗಳ ರಾಶಿಯನ್ನು ನೋಡಬೇಕಾಗುತ್ತದೆ. ಅದನ್ನು ತಡೆಗಟ್ಟಲು ಎಲ್ಲ ರೀತಿಯ ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಯುದ್ಧಸನ್ನದ್ಧ ರೀತಿಯಲ್ಲಿ ಈ ಕೆಲಸ ಕೈಕೊಳ್ಳಬೇಕು. ಇಲ್ಲದಿದ್ದರೆ ಆ ಜನರ ಚಿಂತಾಜನಕ ಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ.

ಇನ್ನು ಅಲ್ಲಿಯ ದನಗಳ ಬೆಲೆ ಈಗ ಏನಿದೆ ಎಂಬುದನ್ನು ವರದಿಯಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಂತಹ ಒಂದು ತೀರ್ಮಾನದ ಪ್ರಕಾರ ೧೨೦೦ ದನಗಳನ್ನು ಉತ್ತರಕನ್ನಡ ಜಿಲ್ಲೆಯ ಕಾಡಿಗೆ ಸಾಗಿಸಲಾಯಿತು ಎಂಬುದನ್ನು ನಿನ್ನೆ ಪತ್ರಿಕೆಯಲ್ಲಿ ನೋಡಿದೆ. ಈ ಒಂದು ಉಪಯೋಗವನ್ನು ಪಡೆದುಕೊಳ್ಳುವುದಿದ್ದರೆ ಪಡೆದುಕೊಳ್ಳಲಿ. ದನಗಳನ್ನು ಸಾಕುವ ವಿಚಾರದಲ್ಲಿ ಸರ್ಕಾರ ತನ್ನ ಅಸಮರ್ಥತೆಯನ್ನು ವ್ಯಕ್ತಪಡಿಸುವುದು ಒಳ್ಳೆಯದಲ್ಲ. ಈಗ ಮಂಡ್ಯ, ಶಿವಮೊಗ್ಗ, ಚಿಕ್ಕಮಗಳೂರು ಮುಂತಾದ ಜಿಲ್ಲೆಗಳ ಜನರು ಉಚಿತವಾಗಿ ಹುಲ್ಲನ್ನು ಕೊಡುವುದಾಗಿ ಮುಂದೆ ಬಂದಿದ್ದಾರೆ. ಅದನ್ನು ಸರ್ಕಾರದವರು ಪಡೆದು ಜಾಗ್ರತೆ ಆ ಭಾಗಕ್ಕೆ ಸಾಗಿಸಬೇಕು. ಈ ರೀತಿ ಸಾಗಿಸುವಾಗ ಕೆಲವೊಂದು

ಅನುಕೂಲಗಳನ್ನು ಮಾಡಿಕೊಳ್ಳುವ ದಳ್ಳಾಳಿಜನರು ಇದ್ದಾರೆ. ಲಾರಿಯ ಕೆಳಗೆ ಜೋಳದ ಮೂಟೆಗಳನ್ನು ಇಟ್ಟು, ಮೇಲೆ ೫೦–೬೦ ಕಂತೆ ಹುಲ್ಲನ್ನು ಇಟ್ಟು ಸಾಗಿಸಿ, ನಂತರ ೬೦೦–೭೦೦ ಕೆ.ಜಿ. ಹುಲ್ಲನ್ನು ಸಾಗಿಸಿದೆ ಎಂದು ಲೆಕ್ಕ ತೋರಿಸಿ ಬಾಡಿಗೆ ತೆಗೆದುಕೊಳ್ಳುವ ಜನರು ಹುಟ್ಟಿಕೊಂಡಿದ್ದಾರೆ. ಮತ್ತು ಹುಲ್ಲಿನ ಕೆಳಗೆ ಇಟ್ಟು ಸಾಗಿಸಿದ ಜೋಳವನ್ನು ಕಿಲೋ ಒಂದಕ್ಕೆ ಒಂದೂವರೆಯಿಂದ ಒಂದು ಅರವತ್ತಕ್ಕೆ ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ತಪ್ಪಿಸಬೇಕು. ಶವದ ಪೆಟ್ಟಿಗೆ ಮಾರಾಟದಲ್ಲಿಯೂ ಹಣ ಸಂಪಾದನೆ ಮಾಡುವವರಿದ್ದಾರೆ. ಇಂಥಾದಕ್ಕೆ ಅವಕಾಶ ಕೊಡಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರದವರೇನೋ ದಿನಕ್ಕೆ ೨೦ ಲಾರಿ ಹುಲ್ಲನ್ನು ಸಾಗಿಸುತ್ತಿದ್ದೇವೆ, ಈಗಾಗಲೇ ಸಾವಿರ ಲಾರಿ ಹುಲ್ಲನ್ನು ಕಳಿಸಲಾಗಿದೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ಹೋಗಿ ನೋಡಿದರೆ ೫ ಲಾರಿ ಹುಲ್ಲು ಸಹ ಇರುವುದಿಲ್ಲ. ಹುಲ್ಲನ್ನು ಹಂಚಿಕೆ ಮಾಡುವ ಕೇಂದ್ರಗಳು ಸಹ ಇರುವುದಿಲ್ಲ. ಬಿರ್ಲಾ ಅವರು ಕೊಟ್ಟ ಹುಲ್ಲನ್ನು ೩–೪ ಲಾರಿಯಲ್ಲಿ ತುಂಬಿ ಅದನ್ನು ಸಾಗಿಸುವುದಕ್ಕೆ ಮೊದಲು ಅದರ ಮುಂದೆ ಶ್ರೀ ಕೃಷ್ಣಾ ಅವರನ್ನು ನಿಲ್ಲಿಸಿ ಫೋಟೋವನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯವರು ತೆಗೆದಿದ್ದಾರೆ. ದೇಶದ ಜನರ ಮೇಲೆ ಮಂತ್ರಿಗಳಿಗೆ ಎಷ್ಟೊಂದು ಮಮತೆ ಇದೆ ಎಂದು ತೋರಿಸಿಕೊಳ್ಳುವುದಕ್ಕೆ ಈ ಫೋಟೋ ತೆಗೆಯುವ ಕೆಲಸ ನಡೆದಿದೆ. ಈ ಹೊಗಳು ಭಟ್ಟಂಗಿ ಕೆಲಸವನ್ನು ಈ ಇಲಾಖೆಯವರು ಮಾಡುವುದು ಬೇಡ. ತಮ್ಮ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂದು ತೋರಿಸಿಕೊಳ್ಳುವುದಕ್ಕೆ ಈ ರೀತಿ ಮಾಡುತ್ತಿರಬಹುದು. ಈ ರೀತಿಯೆಲ್ಲಾ ಮಾಡುವುದು ಬೇಡ ಎಂದು ನಾನು ಆ ಇಲಾಖೆಗೆ ತಿಳಿಸುತ್ತೇನೆ. ಮುಖ್ಯವಾಗಿ ಆ ಭಾಗದ ದನಗಳಿಗೆ ಮೇವನ್ನು ಕಳಿಸಿಕೊಟ್ಟರೆ ಸಾಕು. ಬರಗಾಲವನ್ನು ಎದುರಿಸುವ ಸಲುವಾಗಿ ಸರ್ಕಾರದವರು ನಮ್ಮೆಲ್ಲರ ಸಹಕಾರವನ್ನು ಕೇಳಿದ್ದಾರೆ. ನಾವು ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಸಹಕಾರ ಕೊಡುವುದರಲ್ಲಿ ಹಿಂದೆ ಹೋಗಬೇಕಾದ ಪ್ರಮೇಯವಿಲ್ಲ. ನಮ್ಮಗಳ ಸಹಾಯವನ್ನು ಅಪೇಕ್ಷೆ ಮಾಡುತ್ತೇವೆಂದು ಈಗ ತಾವು ಮುಂದೆ ಬಂದಿದ್ದೀರಿ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಲ್ಲ ಪಕ್ಷಗಳ ಮುಖಂಡರು ತಯಾರಾಗಿದ್ದಾರೆ, ನಿಮಗೆ ಬೆಂಬಲ ಕೊಡುತ್ತಾರೆ. ಆದರೆ ಇದನ್ನು ತಾವು ಮೊದಲಿನಿಂದಲೂ ರಾಜಕೀಯ ದೃಷ್ಟಿಯಿಂದ ನೋಡಿದ್ದು ತಪ್ಪಾಗಿದೆ. ಈಗ ತೆಗೆದುಕೊಂಡ ಕ್ರಮವನ್ನೇ ಮೊದಲಿನಿಂದಲೂ ತೆಗೆದುಕೊಂಡಿದ್ದರೆ ಪರಿಸ್ಥಿತಿ ಇಷ್ಟೊಂದು ಉಲ್ಬಣಗೊಳ್ಳುತ್ತಿರಲಿಲ್ಲ. ನಾವೇನೂ ನಮ್ಮ ಶಕ್ತಿಯನ್ನು ರಾಜಕೀಯವಾಗಿ ವೃದ್ಧಿ ಮಾಡಿಕೊಳ್ಳಬೇಕೆಂದು ಈ ವಿಷಯವನ್ನು ಹೇಳುತ್ತಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ : ಆ ರೀತಿ ಹೇಳುತ್ತೀರಿ, ಮತ್ತೆ ಅದನ್ನೇ ಮಾತನಾಡುತ್ತಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ : ತಮ್ಮ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆಂದು ತಾವು ಹೇಳುತ್ತೀರಿ. ಆ ವಿಚಾರದಲ್ಲಿ ನಾನು ಮತ್ತೆ ಹಳೆಯ ರಾಗವನ್ನು ಹಾಡಬೇಕಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಅದನ್ನು ಮತ್ತೆ ಪ್ರತಿಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಆ ಭಾಗದ ದನಗಳ ಸಂರಕ್ಷಣೆಯಾ ಬೇಕಾಗಿದೆ. ಅದಕ್ಕಾಗಿ ೧೩ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ವರದಿಯಲ್ಲಿ ಹೇಳಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ಆಮುರ್ಗಂ ಅವರು ತಮ್ಮ ವರದಿಯಲ್ಲಿ ರಿಲೀಫ್ ಮೇಜರ್ಸ್ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಯಾರು ಎಷ್ಟು ಕೆಲಸ ಮಾಡುತ್ತಾರೋ, ಅಂತಹವರಿಗೆ ಹಣ ತಲುಪುವ ಬಗ್ಗೆ ಸರ್ಕಾರ ದಿಟ್ಟ ನಿಲುವು ತೆಗೆದುಕೊಳ್ಳಬೇಕಾಗುತ್ತದೆಂದು ಅವರು ಇನ್ನೂ ಮುಂದೆ ಹೋಗಿ ಹೇಳಿದ್ದಾರೆ. ಫ್ಯಾಮಿನ ಕೋಡ ಅನಾಮಲಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಫ್ಯಾಮಿನ ಕೋಡನ್ನು ೬೦-೭೦ ವರ್ಷಗಳ ಹಿಂದೆ ಮಾಡಿದ್ದು. ಹೈದರಾಬಾದ್ ಮತ್ತು ಮುಂಬೈ ಕರ್ನಾಟಕದ ಏರಿಯಾಕ್ಕೆ ಸಂಬಂಧಪಟ್ಟ ಹಾಗೆ ಯಾವ ವರ್ಷದಲ್ಲಿ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಇದನ್ನು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ತಮ್ಮ ವರದಿಯಲ್ಲಿ ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ನಾನು ಬಿದರ್ ಜಿಲ್ಲೆಗೆ ಪ್ರವಾಸ ಹೋದಾಗ ಕಾರಂಜಿ ಯೋಜನೆಯಲ್ಲಿ ಎಷ್ಟು ಜನರು ಕೆಲಸ ಮಾಡುತ್ತಾರೆಂದು ಕೇಳಿದಾಗ ೬೦೦ ಜನರು ಕೆಲಸ ಮಾಡುತ್ತಾರೆಂದು ತಿಳಿದುಬಂತು. ಶ್ರೀಮಾನ್ ಆಮುರ್ಗಂ ಅವರ ವರದಿಯಲ್ಲಿ ೧೬೦೦ ಜನರು ಕೆಲಸ ಮಾಡುತ್ತಿದ್ದಾರೆಂದು ಹೇಳಲಾಗಿದೆ. ಅಲ್ಲಿ ಕೆಲಸ ಮಾಡುತ್ತಿರುವವರಿಗೆ ೪೦-೮೫ ಪೈಸೆ ಕೂಲಿ ಸಿಗುತ್ತಿದೆಯಂತೆ. ಇದರ ಬಗ್ಗೆ ಮಾನ್ಯ ಚೆನ್ನಬಸಪ್ಪನವರು ಉತ್ತರ ಕೊಡಬೇಕು. ತಮ್ಮ ಇಲಾಖೆಯಲ್ಲಿರುವ ಮಧ್ಯವರ್ತಿ ಜನರನ್ನು ಮಟ್ಟ ಹಾಕುವುದಾಗಿ ತಾವು ಹೇಳಿದ್ದೀರಿ.

ಶ್ರೀ ಎಚ್. ಎಂ. ಚೆನ್ನಬಸಪ್ಪ :— ಕಷ್ಟದಲ್ಲಿರುವವರನ್ನು ರಕ್ಷಿಸಬೇಕೆಂದಿದ್ದೇವೆಯೇ ಹೊರತು, ಯಾರನ್ನೂ ಮಟ್ಟ ಹಾಕುವ ಪ್ರಯತ್ನವಿಲ್ಲ. ಯಾರನ್ನೂ ಮಟ್ಟ ಹಾಕುವುದಕ್ಕೆ ಹೋಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ:— ಇದೇ ವರದಿಯಲ್ಲಿ ಮಧ್ಯಮ ಪ್ರಮಾಣದ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ಸಹ ಪ್ರಸ್ತಾಪ ಮಾಡಿದ್ದಾರೆ.

ಆಮೇಲೆ ಶ್ರೀಮಾನ್ ಆರುಮುಗಂರವರು ಅವರ ರಿಪೋರ್ಟಿನಲ್ಲಿ ಕೆಲವು ನೀರಾವರಿ ಯೋಜನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅಪ್ಪರು ಕೃಷ್ಣ ಪ್ರಾಜೆಕ್ಟನ್ನು ಅವರು ಇವರಲ್ಲಿ ಹೇಳುತ್ತಾ ಇಲ್ಲಿ ಹೆಚ್ಚು ವೇಗದಲ್ಲಿ ಕೆಲಸಗಳನ್ನು ಮಾಡಿದರೆ ಸಾಕಷ್ಟು ಜನರಿಗೆ ಕೆಲಸಗಳನ್ನು ಒದಗಿಸಿಕೊಡಬಹುದು ಎಂದು ಹೇಳಿದ್ದಾರೆ. ನಮ್ಮ ಸರಕಾರದ ಮೇಜರ್ ಇರಿಗೇಷನ್ ಇಲಾಖೆಯ ರಾಜ್ಯ ಮಂತ್ರಿಗಳು ಈಚೆಗೆ ದೆಹಲಿಗೆ ಪ್ರವಾಸ ಹೋಗಿ ಬಂದಿದ್ದಾರೆ ಮತ್ತು ಇಲ್ಲಿ ಬಹಳ ಆಶಾದಾಯಕವಾದ ಒಂದು ಹೇಳಿಕೆಯನ್ನೂ ಕೊಡುವವರಾಗಿದ್ದಾರೆ. ಅವರು ಅಪೇಕ್ಷೆ ಮಾಡುತ್ತಿರುವಂತೆ ಕೇಂದ್ರದಿಂದ ಸುಮಾರು ತೊಂಬತ್ತು ಕೋಟಿ ರೂಪಾಯಿಗಳಷ್ಟು ಬರಬಹುದೆಂದು ನಿರೀಕ್ಷೆ ಮಾಡುತ್ತಿದ್ದಾರೆ ಮತ್ತು ಇದರಿಂದ ಹೆಚ್ಚು ಜನಕ್ಕೆ ಕಾಮಗಾರಿ ಇಲಾಖೆಯಲ್ಲಿ ಒದಗಿಸಲು ಸಾಧ್ಯವಾಗುತ್ತದೆ. ಮಾನ್ಯ ಶ್ರೀ ಆರುಮುಗಂರವರು ಅಲ್ಲಿಗೆ ಹೋಗಿದ್ದಾಗ ಅಪ್ಪರು ಕೃಷ್ಣ ಯೋಜನೆಯಲ್ಲಿ ಕೆಲಸಕ್ಕೆಂದು ಹೋದ ಜನ ಕೆಲಸವಿಲ್ಲದೆ ವಾಪಸು ಬಂದರು ಎಂದೂ ಮತ್ತು ಶ್ರೀ ಆರುಮುಗಂರವರನ್ನು ಕೂಡ ಒಂದು ಕಡೆಯಲ್ಲಿ ಮುತ್ತಿಕೊಂಡು ಘೆರಾವೋ ಕೂಡ ಮಾಡಿದರೆಂದು ಪತ್ರಿಕೆಗಳಲ್ಲಿ ಬಂದಿತ್ತು ಮತ್ತು ಇದರ ಬಗ್ಗೆ ಶ್ರೀಮಾನ್ ಆರುಮುಗಂರವರೂ ಕೂಡ ಅವರ ವರದಿಯಲ್ಲಿ ಹೇಳಿದ್ದಾರೆ. ಅವರು ಇದರಲ್ಲಿ ಸಲಹೆ ಮಾಡಿರುವಂತೆ ಅಪ್ಪರು ಕೃಷ್ಣ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟ್ ಎಂದು ಕೇಂದ್ರ ಸರಕಾರದವರೇ ತೆಗೆದುಕೊಂಡು ಇದನ್ನು ಪೂರ್ಣ ಮಾಡಬೇಕೆಂದೂ ಸೂಚನೆ ಕೊಟ್ಟಿದ್ದಾರೆ. ಇದಕ್ಕಾಗಿ ಕೇಂದ್ರದಿಂದಲೇ ಹಣವನ್ನು ಪಡೆಯುವುದು ಅಗತ್ಯವಾಗಿದೆ. ನಾನು ಇದರ ಬಗ್ಗೆ ರಾಜಕೀಯ ಮಾಡಬೇಕು ಎಂದು ಇಲ್ಲಿ ಹೇಳುತ್ತಿಲ್ಲ. ಬಹುಶಃ ಮೈಸೂರು ದೇಶ ಕೇಂದ್ರ ಸರಕಾರದ ಮನಸ್ಸನ್ನು ಒಲಿಸಿಕೊಳ್ಳುವುದಕ್ಕಾಗಿ ನಮ್ಮ ಲೋಕಸಭೆಯಲ್ಲಿ ಇಂದು ೨೭ ಜನ ಮೈಸೂರಿನ ಸದಸ್ಯರೂ ನಿಮ್ಮವರೇ ಆಗಿದ್ದಾರೆ. ಹಿಂದೆ ಮೈಸೂರಿನಲ್ಲಿ ಇದ್ದ ಜನರು ಅನೀತಿಯುತರಾದ ಜನರು ಹಾಗೂ ಪಾಪದ ಕೆಲಸ ನಿರ್ಮಾಣಮಾಡುವರು ಎಂದು ಹೇಳುತ್ತಿದ್ದರು. ಇಂದು ನಿಮ್ಮಲ್ಲಿ ೨೭ ಜನರನ್ನು ಕೊಟ್ಟಂತಹ ಮೈಸೂರು ಜನತೆಗೆ ಕೀರ್ತಿ ಶಿಖರವಾಗಿರುವ ಪ್ರಧಾನಮಂತ್ರಿಗಳನ್ನು ಕರೆದು ಕೊಂಡು ಬಂದು ಇಲ್ಲಿ ಚಿನ್ನದಲ್ಲಿ ತೂಗುವಂತೆ ಮಾಡಿದರು. ಯಾವ ಪ್ರದೇಶದಲ್ಲಿ ಚಿನ್ನದಲ್ಲಿ ತೂಗಿದರೋ ಇಂದು ಅದೇ ಪ್ರದೇಶದ ಜನಗಳಲ್ಲಿ ಬರಗಾಲದಿಂದ ಲಬಲಬ ಎಂದು ಬಡಿದುಕೊಳ್ಳುತ್ತಿದ್ದಾರೆ. ಹಿಂದೆ ಮೈಸೂರಿನ ಜನ ಎಂದರೆ ಇದರಲ್ಲಿ ಶ್ರೀಮಂತರು ಹಾಗೂ ಬಡವರು ಎಲ್ಲರೂ ಇರುತ್ತಾರೆ. ಇದರಲ್ಲಿ ದಾನವನ್ನು ಕೊಟ್ಟಿರುವವರಲ್ಲಿ ಬಡವರೇ ಹೆಚ್ಚಾಗಿರುತ್ತಾರೆ. ಹೀಗಿರುವಾಗ ಕೇಂದ್ರ ಪ್ರಧಾನಮಂತ್ರಿಗಳಿಗೆ ನಮ್ಮ ರಾಜ್ಯದ ಜನತೆ ಬಗ್ಗೆ ಕರುಣೆ ಇಲ್ಲ ಇವರಿಗೆ ಏನು ಆತಂಕ ಅಥವಾ ತೊಂದರೆಗಳು ಇದೆಯೋ ನಮಗೆ ಗೊತ್ತಾಗುತ್ತಿಲ್ಲ. ಕೇಂದ್ರದವರು ಆಂಧ್ರದಲ್ಲಿರುವ ನಾಗಾರ್ಜುನ ಸಾಗರಕ್ಕಾಗಿ ವಿಶೇಷವಾದ ಸೌಲಭ್ಯವನ್ನು ಕೊಡುವುದಕ್ಕೆ ಅವರಿಗೆ ಸಾಧ್ಯವಾಯಿತು. ಇದೇ ರೀತಿ ಮೈಸೂರಿನಲ್ಲಿರುವ ಅಪ್ಪರು ಕೃಷ್ಣಾ ಯೋಜನೆಗೆ ಕೇಂದ್ರ ಸರಕಾರ ವಿಶೇಷ ಸೌಲಭ್ಯ ಕೊಡುವುದಕ್ಕೆ ಇರುವ ಕಷ್ಟವಾದರೂ ಏನು ? ನಮ್ಮ ರಾಜ್ಯದ ರಾಜ್ಯ ಮಂತ್ರಿಗಳಾಗಿರುವ ಶ್ರೀ ನಂಜೇ ಗೌಡರವರು ಈ ಕಡೆ ಕೂಳಿತಿದ್ದಾಗ ಇದರ ಬಗ್ಗೆ ಮಾತನಾಡುವಾಗ ಸಿಡಿದು ಎದ್ದು ಹೇಳುತ್ತಿದ್ದರು. ಈಗ ಅವರು ಆಡಳಿತದಲ್ಲಿರುವುದರಿಂದ ಅವರು ಕಷ್ಟಗದಲ್ಲಿ ಸಿಕ್ಕಿಬಿದಿದ್ದಾರೆ, ನಾವು ಏನೂ ಹೇಳುವಂತಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ:— ಯಾರೇ ಅಗಲೀ ರಾಜ್ಯದ ಹಿತರಕ್ಷಣೆಗೆ ತೊಂದರೆ ಬರುತ್ತಿದ್ದರೆ ಇದರಲ್ಲಿ ಸರಕಾರದ ಪ್ರತಿನಿಧಿಗಳೇ ಆಗಲೀ ಬೇರೆ ಯಾರೇ ಆಗಲೀ ಅದನ್ನು ರಕ್ಷಿಸುತ್ತಾರೆ. ಇದರ ಬಗ್ಗೆ ಸರಕಾರದ ಕಡೆಗೆ ಧೈರ್ಯದಿಂದ ಹೇಳಬಹುದು.

ಶ್ರೀ ಹೆಚ್. ಡಿ. ದೇವೇಗೌಡ:— ಇಷ್ಟುಮಟ್ಟಿನ ಧೈರ್ಯವಿದ್ದರೆ ನಮಗೂ ಸಂತೋಷ. ಆದರೆ ಇದರಲ್ಲೇನೋ ಒಂದು ರೀತಿಯಾದ ಅನುಮಾನ ಕಾಣುತ್ತದೆ. ನಮ್ಮ ಮಾನ್ಯ ಹಣಕಾಸಿನ ಸಚಿವರಾದ ಶ್ರೀಮಾನ್ ಘೋರ್ಪಡೆಯವರು ಇಲ್ಲಿ ಬಡ್ಜೆಟ್ಟು ಭಾಷಣ ಮಾಡುವಾಗ ಬಹಳ ಉತ್ತಮವಾದ ಶೈಲಿಯಲ್ಲಿ ಇಲ್ಲಿ ಹೇಳಿದ್ದಾರೆ, ಇದು ಅವರ ಬಡ್ಜೆಟ್ಟು ಸ್ಪೀಚ್‌ನಲ್ಲೇ ಇದೆ. ನಾವು ಬೇರೆ ಹೇಳಿದರೆ ಅದನ್ನು ಅವರು ಒಪ್ಪುವುದಿಲ್ಲ. ನಮ್ಮ ಸರಕಾರಕ್ಕೂ ಕೇಂದ್ರ ಸರಕಾರಕ್ಕೂ ಮಧುರ ಬಾಂಧವ್ಯವಿದೆ ರಾಜ್ಯಕ್ಕೆ ಬಹಳ ಸಾಮರ್ಥ್ಯ ಇದೆ ಮತ್ತು ಸೌಹಾರ್ದಯುತವಾದ ಸಂಬಂಧ ಈಗ ಕೇಂದ್ರ ಸರಕಾರಕ್ಕೂ ನಮ್ಮ ನಮ ಸರಕಾರಕ್ಕೂ ಇದೆ ಎಂದು ಹೇಳಿದ್ದಾರೆ. ಒಂದು ರೀತಿಯಾಗಿ ನ್ಯೂ ಎರಾ ಆರಂಭವಾಗಿದೆ. ಎಂದು ಹೇಳಿದರು ಹಿಂದೆ ಇದ್ದ ಸರಕಾರದಲ್ಲಿ ಸಾಮರ್ಥ್ಯವಿಲ್ಲದೇ ಇದ್ದ ಮುಖಂಡರು ಇದ್ದರು ಎಂದು ಹೇಳಿದ್ದರು. ಇವೊತ್ತು ಸಾಮರ್ಥ್ಯವಿರುವ ಜನ ಹೆಚ್ಚು ಸಹಾಯವನ್ನು ಸಾಮರ್ಥ್ಯವನು ಬೆಂಬಲ ಕೊಡತಕ್ಕ ಈ ಕಾಲದಲ್ಲಿ ಹಣ ತರುವುದಕ್ಕೆ ಏಕೆ ಆಸಕಿ ತೋರಿಸುತ್ತಿದ್ದೀರಿ ? ಇಂದು ನಮ್ಮ ರಾಜ್ಯದಲ್ಲಿ

ದುಡ್ಡು ಸಿಗುವುದಿಲ್ಲ. ಇನ್ನೈದು ವರ್ಷಗಳೊಳಗೆ ಅಪ್ಪರು ಕೃಷ್ಣ ಯೋಜನೆಯನ್ನು ಮುಗಿಸಬೇಕೆಂದು ಕೇಂದ್ರದ ಪರಿಷ್ಕಾರಿಗೆ ಒತ್ತಾಯ ಮಾಡಬೇಕಾದುದು ಅಗತ್ಯವಾಗಿದೆ. ಇದಕ್ಕಾಗಿ ಬೇಕಾದರೆ ಈ ಸಭೆಯಿಂದ ಒಂದು ನಿರ್ಣಯ ಮಾಡಿ ಒಮ್ಮತದಿಂದ ಕಳುಹಿಸಬೇಕೆಂದರೆ ಕಳಿಹಿಸೋಣ. ಅಪ್ಪರ್ ಕೃಷ್ಣಾ ಒಂದು ನ್ಯಾಷನಲ್ ಪ್ರಾಜೆಕ್ಟ್ ಎಂದು ಶ್ರೀ ಆರಮುಂಗಂರವರೂ ಕೂಡ ಅವರ ರಿಪೋರ್ಟಿನಲ್ಲಿ ಒಂದು ಕಡೆ ಒತ್ತಿ ಹೇಳಿದ್ದಾರೆ. ಇದು ಕೇಂದ್ರ ಸರಕಾರದ ಪೂರ್ಣ ಹೊಣೆಗಾರಿಕೆಗೆ ಸೇರಬೇಕೆಂದು ಅವರಿಗೆ ಒತ್ತಾಯ ಮಾಡಿ ಅವರ ಸಹಾಯ ಪಡೆದರೆ ಬಹುಶಃ ಈ ಯೋಜನೆ ಕೆಲಸಗಳನ್ನು ಮುಗಿಸಬಹುದು, ಇಲ್ಲದೇ ಬರೀ ರಾಜ್ಯ ಸರಕಾರವೇ ಮಾಡಬೇಕೆಂದು ಮಾಡಿದರೆ ಇನ್ನು ೨೫ ವರ್ಷಗಳಾದರೂ ಮುಗಿಯಲಾರದು ಇದಕ್ಕೆ ೨೫ ವರ್ಷಗಳೇ ಬೇಕಾಗುತ್ತೋ ಇಲ್ಲವೇ ೫೦ ವರ್ಷಗಳಾಗುತ್ತೋ ಹೇಳಲಾಗುವುದಿಲ್ಲ. ಒಂದು ವೇಳೆ ರಾಜ್ಯ ಸರಕಾರ ತನ್ನ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿ ಸಮರ್ಥರಾಗಿ ಕೇಂದ್ರದವರಿಗೆ ಮನದಟ್ಟು ಮಾಡಿ ಅವರಿಂದ ಸಹಾಯ ಪಡೆದರೆ ಇವನ್ನು ಮಾಡಲು ಸಾಧ್ಯ ಇಲ್ಲದಿದ್ದರೆ ಇದು ಆಗುವುದಿಲ್ಲ. ಯಾವ ಕನ್ನಡ ದೇಶದ ಜನ ಇಂದು ನಮ್ಮ ರಾಜ್ಯದಲ್ಲಿ ೨೭ ಜನರನ್ನು ಪಾರ್ಲಿಮೆಂಟಿಗೆ ಆರಿಸಿ ಕಳುಹಿಸಿತು ಎಂದರೆ ಶೇಕಡಾ ನೂರಕ್ಕೆ ನೂರರಷ್ಟು ಸ್ಥಾನಗಳನ್ನು ಪಡೆದು ಕೇಂದ್ರ ಮುಖಂಡತ್ವವನ್ನು ಮೆಚ್ಚಿದ ಜನ ಹಾಗೂ ರಾಜ್ಯದ ಉಡುಗೊರೆಯಾಗಿ ೨೭ ಜನರನ್ನು ಕೊಟ್ಟಿರುವಾಗ ಪುನಃ ಇದೇ ಕನ್ನಡ ಜನ ಹಿಂದೆ ಹೋಗಿ ಇದಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಲು ಹೋಗಬಹುದು. ಮತ್ತು ಖಂಡಿತ ಕೇಂದ್ರದವರ ಕಣ್ಣು ತೆರೆಸುವುದಕ್ಕಾಗಿ ಇದೇ ಜನ ಬುದ್ಧಿ ಕಲಿಸತಕ್ಕ ಕಾಲ ಬರುತ್ತದೆ. ಕನ್ನಡ ದೇಶದ ಜನರನ್ನು ಸದಾ ವಂಚಿಸುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಪ್ರಭಾವ ಮತ್ತು ನಮ್ಮ ಮಂತ್ರಿಗಳಾದ ಶ್ರೀ ಘೋರ್ಪಡೆಯವರು ಹೇಳಿರುವಂತೆ ಮುಂದಿನ ಬಜೆಟ್ ಸೆಷನ್‌ನಲ್ಲಿ ಏನೇನು ತರುತ್ತಾರೆ, ನೋಡೋಣ. ಮತ್ತು ಇದರಲ್ಲಿ ಏನು ಧೋರಣೆ ತೋರಿಸುತ್ತಾರೋ ನಮಗೆ ಗೊತ್ತಿಲ್ಲ. ಇಂದು ಈ ಸಮಸ್ಯೆ ಬಗ್ಗೆ ಕೇಂದ್ರದವರು ಅಸಡ್ಡೆ ಮನೋಭಾವ ತೋರಿಸುತ್ತಾ ಹೋದರೆ ನಮ್ಮ ದೇಶ ಹಾಳಾಗಿ ಹೋಗುತ್ತದೆ ಎನ್ನುವ ಎಚ್ಚರಿಕೆ ಮಾತುಗಳನ್ನು ಕೇಂದ್ರದವರಿಗೆ ಮನವರಿಕೆಯಾಗುವಂತೆ ಯತ್ನಮಾಡಬೇಕು, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಇಲ್ಲಿರುವುದರಿಂದ ಅವರ ಗಮನಕ್ಕೆ ಇಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ ಈ ಸಮಸ್ಯೆ ಇನ್ನು ಆರೇಳು ತಿಂಗಳ ಕಾಲದವರೆಗೆ ಹಾಗೇ ಇರುವುದಿಲ್ಲ. ಇದಕ್ಕಾಗಿ ಹೆಚ್ಚು ಹಣ ಒದಗಿಸಬೇಕಾಗುತ್ತದೆ. ಇವೊತ್ತು ನೀವು ರಾಜ್ಯದಲ್ಲಿ ಕೊಟ್ಟಿರುವ ಅಂಕೆ ಸಂಖ್ಯೆಗಳ ಮೇಲೆ ಸುಮಾರು ಐದು ಲಕ್ಷಕ್ಕೂ ಹೆಚ್ಚು ಹಣವನ್ನು ಕ್ಷಾಮದ ಪರಿಹಾರ ನಿಧಿಯಿಂದ ಕೊಟ್ಟಿರುವುದರಿಂದ ಸುಮಾರು ಐದು ಲಕ್ಷ ಜನರು ಅಥವಾ ಇದಕ್ಕೂ ಕಮ್ಮಿ ಜನರು ಕೆಲಸಗಳನ್ನು ಕೇಳಿದ್ದಾರೆ. ಗುಲ್ಬರ್ಗಾ ಜಿಲ್ಲೆ ಒಂದರಲ್ಲೇ ಸುಮಾರು ೬-೭ ಲಕ್ಷ ಜನರಿಗೆ ಕೆಲಸಗಳನ್ನು ಒದಗಿಸಬೇಕಾಗಿ ಬರುತ್ತದೆ. ಶ್ರೀಮಾನ್ ಆರುಮುಗಂ ಹೇಳಿರುವಂತೆ ಅವರೇ ನೋಡಲು ಹೋದಾಗ ಅದಕ್ಕಿಂತ ಮುಂದೆ ಕೇವಲ ೮೦ ಸಾವಿರ ಜನರಿಗೆ ಕೆಲಸ ಸಿಕ್ಕಿತ್ತು. ಶ್ರೀ ಆರುಮೂಗಂರವರು ಹೋದ ಮೇಲೆ ಇದು ಸ್ವಲ್ಪ ಹೆಚ್ಚು ಆಯಿತು ಎಂದರೆ ಸುಮಾರು ೧.೨೫ ಲಕ್ಷ ಜನರಿಗೆ ಕೆಲಸಗಳನ್ನು ಒದಗಿಸಿದ್ದಾರೆ. ಇದು ಅವರ ರಿಪೋರ್ಟಿನಲ್ಲೇ ಇದೆ, ಇದನ್ನು ನೋಡಿದರೆ ಇನ್ನೂ ಇಲ್ಲಿ ಕೆಲಸ ಮಾಡುವ ಜನರು ಬೇಕಾದಷ್ಟು ಇದ್ದಾರೆ. ನಮ್ಮ ಪಿಡಬ್ಲ್ಯೂಡಿ ಇಲಾಖೆಯಿಂದ ನಿರ್ದಿಷ್ಟವಾಗಿ ಇಂತಹ ಕೆಲಸಗಳನ್ನು ಮಾಡಬೇಕೆಂದು ಕೆಲಸ ಮಾಡಿದರೆ ಇನ್ನೂ ಏಳು ವರ್ಷಗಳ ಕಾಲ ಕೆಲಸಗಳು ಜನಕ್ಕೆ ಸಿಗಬಹುದು ಇದಕ್ಕಾಗಿ ಸುಮಾರು ೧೦-೧೨-೧೫ ಲಕ್ಷ ಜನರಿಗೆ ಕೆಲಸಗಳನ್ನು ಒದಗಿಸಬೇಕಾಗಿ ಬರಬಹುದು ಮತ್ತು ಅವರು ಜೀವನ ಜೀವನ ಮಾಡಲು ಸಹಾಯವಾಗಬಹುದು. ಇಲ್ಲಿ ಕೆಲವರು ೫೦ ಎಕರೆ ಜಮೀನು ಇಟ್ಟುಕೊಂಡಿರುವವರು ಕೂಡ ಕೂಲಿ ಕೆಲಸ ಮಾಡಲು ಬರುತ್ತಾರೆಂದು ಇದರಲ್ಲಿ ಹೇಳಿದ್ದಾರೆ. ಹೀಗೆ ಕೂಲಿಕೆಲಸಗಳನ್ನು ಕೊಡುವುದರಲ್ಲಿ ಸರಕಾರ ಹಿಂಮುಂದು ನೋಡುವುದು ಬೇಡ.

ಸರ್ಕಾರದವರು ಪಿ.ಡಬ್ಲ್ಯು.ಡಿ ರೇಟ್ ಏನು ಹಾಕಿದ್ದಾರೆ ಅದರ ಪ್ರಕಾರ, ಗಂಡ ಹೆಂಡತಿ ಎಲ್ಲಿ ಕೆಲಸ ಮಾಡಿದರೂ ಕೂಡ, ಭೂಮಿಯಲ್ಲಿ ತೇವವಿಲ್ಲದೆ ಇರುವುದರಿಂದ ಕೂಲಿ ಗಿಟ್ಟುವುದಿಲ್ಲವೆಂದು ಹೇಳಿದ್ದಾರೆ. ಮಾನವೀಯತೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿ ಆ ಜನರಿಗೆ ಕೂಲಿ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕಾಗುತ್ತದೆ ಮಹಾರಾಷ್ಟ್ರ ಸೊಲಾಪುರ ಕಡೆ ಬಾರ್ಡರ್ ವಿಲೇಜಸಿನಲ್ಲಿ ರಿಲೀಫ್ ಕೆಲಸ ಮಾಡುತ್ತಿರುವವರಿಗೆ ಸ್ಥಳದಲ್ಲಿಯೇ ಆಹಾರ ಧಾನ್ಯಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದಾರೆಂದು ಕೇಳಿದ್ದೇನೆ. ಕೂಲಿ ಕೊಡುವುದರ ಬದಲು ಆಹಾರ ಧಾನ್ಯಗಳನ್ನು ಕೊಡುವುದಕ್ಕೆ ವ್ಯವಸ್ಥೆಯನ್ನು ನಾವು ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಕೆಲವು ಫೇರ್ ಪ್ರೈಸ್ ಡಿಪೋಗಳಿಗೆ ಹೋದರೆ ಒಳಗಡೆ ಸಾಮಾನುಗಳೇ ಇಲ್ಲ ಎಂದು ಕೂಡ ವರದಿಯಲ್ಲಿ ಹೇಳಿದ್ದಾರೆ. ಆದರ ಜೊತೆಗೆ ಅಧಿಕಾರಿಗಳು ಕೂಡ ನಾವು ಏನು ಮಾಡುವುದು, ಡಿಮಾಂಡ್ ಮಾಡಿದರೂ ಸಿಕ್ಕುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆಂದು ಕೂಡ ವರದಿಯಲ್ಲಿ ಹೇಳಿದ್ದಾರೆ.

ಶ್ರೀಮತಿ ಇ. ಇ. ವಾಜ್ : ನಾನು ಖುದ್ದಾಗಿ ವಿಚಾರಿಸಿದಾಗ ಆಹಾರಧಾನ್ಯಗಳು ಸಿಕ್ಕುತ್ತಿವೆ, ಕೊಂಡುಕೊಳ್ಳುವುದಕ್ಕೆ ಹಣದ ಕೊರತೆ ಇದೆ ಎಂದು ನಾನು ವಿಚಾರಿಸಿದ ಪ್ರತಿಯೊಬ್ಬರು ಹೇಳಿದ್ದಾರೆ.

ಶ್ರೀ ಜೆ. ಎಲ್ ಕಬಾಡಿ : ಮಾನ್ಯ ಮಂತ್ರಿಗಳು ಎಷ್ಟು ಅಂಗಡಿಗಳಿಗೆ ಹೋಗಿ ಎಷ್ಟು ಜನರಿಗೆ ಹಂಚಿದ್ದನ್ನು ನೋಡಿದ್ದಾರೆ ?

ಶ್ರೀ ಮತಿ ಇ. ಇ. ವಾಜ್ : ನಾನು ಅಂಗಡಿಗಳಿಗೆ ಹೋಗದೆ ಇದ್ದರೂ ಹಳ್ಳಿಗಳಿಗೆ ಹೋಗಿದ್ದಾಗ ಜನರ ಹತ್ತಿರ ಖುದ್ದಾಗಿ ಕೇಳಿ ತಿಳಿದುಕೊಂಡಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ : ಮಂತ್ರಿಗಳ ಪಕ್ಕದಲ್ಲಿ ಓಡಾಡುವ ಜನ ಸಂತೃಪ್ತರಾಗಿರುವ ಜನ. ರಾಜಕೀಯ ಮುಖಂಡರು ಮಂತ್ರಿಗಳ ಪಕ್ಕದಲ್ಲಿ ಓಡಾಡುತ್ತಾರೆ ಬಡವರು ಓಡಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ಆರ್ಮುಗಂ ಅವರು ಪ್ರವಾಸ ಮಾಡಿದಾಗ ಅಲ್ಲಿನ ಜನಗಳು ತಿನ್ನುವ ಆಹಾರದ ಬಗ್ಗೆ ಕೂಡ ವಿಚಾರ ಮಾಡಿದ್ದಾರೆ, ಅವರ ಕಷ್ಟ ಏನು ಎನ್ನುವುದನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಕೆಲವು ಊರುಗಳಿಗೆ ಸಕ್ಕರೆ, ಗೋಧಿ ಬಂದಿಲ್ಲ ಎಂದು ಹೇಳಿದ್ದಾರೆ. ಮಾಧ್ಯವರ್ತಿ ಭಟ್ಟಂಗಿಗಳ ಕೈವಾಡ ಇದರಲ್ಲಿ ಇರುತ್ತದೆ. ಒಂದು ತಾಲ್ಲೂಕಿನಲ್ಲಿ ೩೨೦ ಚೀಲ ಸಕ್ಕರೆ ನುಂಗಿ ಹಾಕಿದರು ಎಂದು ನನಗೆ ದೂರುಬಂದಿದೆ. ತಹಸೀಲ್ದಾರರು ಮತ್ತು ಒಬ್ಬ ಲೀಡರ್ ಸೇರಿ ತಿಂದು ಹಾಕಿದರು ಎಂದು ಕೇಳಿದ್ದೇನೆ. ಯಾವ ಸ್ಥಳ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳಿಗೆ ಬೇಕಾದರೆ ವಿವರವನ್ನು ಕೊಡುತ್ತೇನೆ. ಅವರು ಹೋಗಿ ವಿಚಾರ ಮಾಡಿಕೊಂಡು ಬಂದು ನಾನು ಹೇಳುವುದು ಸರಿ ಇದ್ದರೆ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಹೀಗೆ ಸಕ್ಕರೆ, ಗೋಧಿ ಅಲ್ಲಿ ಮಾರಾಟವಾಗುತ್ತಿಲ್ಲ ಎಂದು ಜನ ಹೇಳುತ್ತಾರೆ ಎನ್ನುವುದನ್ನು ಕೂಡ ವರದಿಯಲ್ಲಿ ಹಾಕಿದ್ದಾರೆ. ತಾಲ್ಲೂಕು ಆಫೀಸಿನಲ್ಲಿ ಲೆಕ್ಕವಿದೆ; ಆದರೆ ತೆಗೆದುಕೊಂಡು ಹೋದ ಪದಾರ್ಥಗಳನ್ನು ಮಧ್ಯದಲ್ಲಿ ಮಾರಿಕೊಳ್ಳುವ ಕೆಲಸ ನಡೆಯುತ್ತಿದೆ. ಅನೇಕ ಸಂಘ ಸಂಸ್ಥೆಗಳನ್ನು ರಾಜಕೀಯ ದೃಷ್ಟಿಯಿಂದ ದೂರವಿಟ್ಟಿದ್ದಾರೆ. ಬರೀ ಯುವಕ ಮಂಡಲ, ಮತ್ತೊಂದು ಮಂಡಲ ಎಂದು ಮಾಡಿದ್ದಾರೆ. ಯಾವರೀತಿಯಾದರೂ ಹಂಚಲಿ ಸಂಸ್ಥಾ ಕಾಂಗ್ರೆಸ್ ಆಗಲಿ, ಆಡಳಿತ ಕಾಂಗ್ರೆಸ್ಸಿಗೆ ವಿರೋಧವಾಗಿರತಕ್ಕ ರಾಜಕೀಯ ಪಕ್ಷಗಳ ಹಿಡಿತದಲ್ಲಿರುವ ಸಂಘ ಸಂಸ್ಥೆಗಳಿಗೆ ಆ ಜವಾಬ್ದಾರಿಯನ್ನು ಕೊಡುವುದು ಬೇಡ, ಅವರಿಗೆ ಆ ಕೆಲಸ ಬೇಡ ಆದರೆ ಸರ್ಕಾರದವರು ಹಂಚಿಸತಕ್ಕ ಮಾರ್ಗದಲ್ಲಾದರೂ ಯೋಗ್ಯವಾದ ರೀತಿ, ಹಂಚಿಕೆ, ವಿಲೇವಾರಿ ಆಗಲಿ ಎಂದು ಹೇಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ : ಹಾಗೇವಾಡಿಯಲ್ಲಿ ಆಡಳಿತ ಕಾಂಗ್ರೆಸ್ ಆಫೀಸಿನಲ್ಲಿ ಫೇರ್ ಪ್ರೈಸ್ ಷಾಪ್ ನಡೆದಿದೆ ಎನ್ನುವುದು ಗೊತ್ತಿದೆಯೇ ?

ಶ್ರೀ ಎಚ್. ಡಿ. ದೇವೇಗೌಡ : ಒಬ್ಬರ ಮುಖಕ್ಕೆ ಇನ್ನೊಬ್ಬರು ಟಾರ್ ಹಚ್ಚುವ ಕೆಲಸ ಬೇಡ ಎಂದು ನಾನು ಹೇಳಿದೆ. ಹಿಂದೆ ಅನೇಕ ಜನ ದಿವಾನರುಗಳಾಗಿದ್ದವರು, ಫಸ್ಟ್ ಕೌನ್ಸಿಲರ್, ಸೆಕೆಂಡ್ ಕೌನ್ಸಿಲರ್ ಆಗಿದ್ದವರು ಕೆಲವರು ಅವ್ಯವಹಾರ ಮಾಡಿದವರಿದ್ದರು. ಅವರ ಮಕ್ಕಳಲ್ಲಿ ಸೊಂಟ ಮುರಿದುಕೊಂಡು ತಿರುಗುವವರಿದ್ದಾರೆ ಸಾರ್ವಜನಿಕ ಹಣವನ್ನು ತಿಂದು ಬದುಕುವುದು ಕಷ್ಟ ಒಂದೆರಡು ತಲೆಮಾರು ಇದ್ದರೂ ಕೂಡ ಮೂರನೆ ತಲೆಮಾರಿಗೆ ಉಳಿಯುವುದಿಲ್ಲ. ಹತ್ತಾರು ಜನರ ಬೆವರು ಸುರಿಸಿದ ಹಣ, ಹತ್ತಾರುಜನರನ್ನು ಮೋಸ ಮತ್ತು ದ್ರೋಹ ಮಾಡಿ, ಸರ್ಕಾರಕ್ಕೆ ಮೋಸ ಮಾಡಿ ಸಾರ್ವಜನಿಕರಿಗೆ ದ್ರೋಹ ಮಾಡಿ ಹಣ ಗಳಿಸಿದ್ದ ಪಕ್ಷದಲ್ಲಿ ಅವರ ವಂಶೀಕರು ಅದರ ಫಲವನ್ನು ಅನುಭವಿಸಬೇಕಾಗುತ್ತದೆ. ಈ ಕಡೆ ಮತ್ತು ಆ ಕಡೆ ಇರತಕ್ಕವರೆಲ್ಲರಿಗೂ ಆ ಮಾತು ಅನ್ವಯವಾಗುತ್ತದೆ. ಮಂತ್ರಿಗಳು ಇಲ್ಲಿದ್ದಾರೆ ಅಲ್ಲಿ ನಡೆಯುವುದೆಲ್ಲ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಅವರ ಜಾಗದಲ್ಲಿ ಯಾರೇ ಇದ್ದರೂ. ಮೋಸ ಮಾಡುವವರನ್ನು ಹಿಡಿಯುವುದಕ್ಕಾಗುವುದಿಲ್ಲ. ಅವರವರ ಮನಸ್ಸಿಗೆ ಅರಿತುಕೊಂಡು ಕೆಲಸ ಮಾಡಬೇಕಾಗುತ್ತದೆ. ಹೀಗಿರುವುದರಿಂದ ನಮ್ಮ ಸ್ವಾರ್ಥಕ್ಕೆ ಲಾಭ ಸಂಪಾದನೆ ಮಾಡುವ ಕೆಲಸ ಬೇಡ ಎಂದು ಹೇಳಬೇಕಾಗುತ್ತದೆ. ಬೇರೆ ಪಕ್ಷಗಳ ಕೈಯಲ್ಲಿರುವ ಸಂಸ್ಥೆಗಳಿಗೆ ಕೊಡುವುದು ಬೇಡ ಎನ್ನುವ ನಿರ್ಣಯ ತೆಗೆದುಕೊಂಡದ್ದು ಮಾತ್ರ ಸರಿಯಲ್ಲವೆಂದು ಹೇಳುತ್ತೇನೆ. ಯಾವ ಏಜೆನ್ಸಿ ಮುಖಾಂತರ ಮಾಡಿಸುತ್ತೀರಿ ಆ ಏಜೆನ್ಸಿ ಚೆನ್ನಾಗಿ ಕಾರ್ಯ ನಡೆಸಿದರೆ ಬಹಳ ಸಂತೋಷ. ಅವರು ಯಾವ ಪಕ್ಷದವರೇ ಆಗಿರಲಿ ಆಹಾರ ಧಾನ್ಯಗಳನ್ನು ಹಂಚುವ ಏಜೆನ್ಸಿ ಏನಿದೆಅದನ್ನು ಹೆಚ್ಚು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಕಂಟ್ರಾಕ್ಟರುಗಳಿಗೆ ಆಹಾರಧಾನ್ಯದ ಹಂಚಿಕೆಯ ಕೆಲಸವನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಒಂದು ಹೊತ್ತುಅನ್ನಕ್ಕೇ ಇಲ್ಲದೆ ಇರುವಾಗ ಅವರು ಚಾ ಕುಡಿಯುವುದೆಲ್ಲಿದೆ. ಸಕ್ಕರೆಯನ್ನು ಅವರು ನೋಡಿಯೇ ಇರುವುದಿಲ್ಲ. ಸಕ್ಕರೆ ನಾಟಿ ಬಂದರೆ ಅದನ್ನು ಮಾರಿ ಲಾಭ ಮಾಡಿಕೊಳ್ಳುವುದು ಸ್ವಾಭಾವಿಕ. ಅದರ ಬಗ್ಗೆ ಹೆಚ್ಚ ಗಮನ ಕೊಡಬೇಕೆಂದು ಹೇಳುತ್ತೇನೆ.

ಫ್ಯಾಮಿನ್ ಕೋಡಿನಲ್ಲಿ ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕದ ಭಾಗದಲ್ಲಿ ಯಾವರೀತಿ ಇದೆ ಮತ್ತು ಹಳೇ ಮೈಸೂರು ಭಾಗದಲ್ಲಿ ಯಾವರೀತಿ ಇದೆ ಎನ್ನುವುದನ್ನೆಲ್ಲ ಹೇಳಿದ್ದಾರೆ. ಅದನ್ನು ಸಾಧ್ಯವಾದಷ್ಟುಗೂ ತಿದ್ದುವುದಕ್ಕೆ, ತಿದ್ದುಪಡಿ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಆಸ್ಟರಿಟ್ ಮೇಷರ್ ಬಗ್ಗೆ ಹೇಳಿದ್ದಾರೆ. ದೇಶದಲ್ಲಿ ಇಂಥ ಪರಿಸ್ಥಿತಿ ಇರುವಾಗ ಯಾರೇ ಆಗಲೀ ಹಣ ಖರ್ಚು ಮಾಡುವಾಗ ಯಾವುದೇ ಸಾರ್ವಜನಿಕ ಸಮಾರಂಭ ಮಾಡುವಾಗ ಬಹಳ ಎಚ್ಚರಿಕೆಯಿಂದ ಇರಬೇಕು ಎನ್ನುವ ಮಾತನ್ನು ಹೇಳಿದ್ದಾರೆ? ನಾನು ಅದನ್ನು ಪುಷ್ಟೀಕರಿಸುತ್ತೇನೆ. ಜನರಿಗೆ ಹೊಟ್ಟೆಗೆ ಇಲ್ಲದೆ ಇರುವ ಕಾಲದಲ್ಲಿ ಜನ ಸಾಯುತ್ತ ಇರತಕ್ಕ ಕಾಲದಲ್ಲಿ ಯಾವುದೇ ಲೋಲುಪ್ತತೆಯ ವ್ಯವಹಾರ ಮಾಡುವುದು ಯೋಗ್ಯವಲ್ಲ ಎಂದು ಅವರು ಹೇಳಿದ್ದಾರೆ. ವರದಿಯ 82-83 ಪುಟಗಳಲ್ಲಿ ಅಮೆನಿಟೀಸ್ ಟು ಷೆಡ್ಯೂಲ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ ಟ್ರೈಬ್ಸ್ ವಿಚಾರ ಹೇಳಿದ್ದಾರೆ. ಅವರ ಸ್ಥಿತಿ ಎಷ್ಟು ಚಿಂತಾಜನಕವಾಗಿದೆ ಎನ್ನುವುದನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ.

ಕೊನೆಯದಾಗಿ ಈ ಹೊತ್ತು ಈ ಒಂದು ನೈಸರ್ಗಿಕವಾದ ಕಷ್ಟವೇನಿದೆ. ನಮ್ಮ ರಾಜ್ಯಕ್ಕೆ ಒದಗತಕ್ಕ ದೈವದತ್ತವಾದ ಕಷ್ಟವೇನಿದೆ, ಅದು ಎರಡು ರೀತಿಯದಾಗಿದೆ. ಒಂದುಕಡೆ ಅನಾವೃಷ್ಟಿಯಿಂದ ಈ ಪರಿಸ್ಥಿತಿ ತಲೆದೋರಿದೆ. ಇನ್ನೊಂದು ಕಡೆ ಅತಿವೃಷ್ಟಿಯ ದೆಸೆಯಿಂದ ರಾಜ್ಯದಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳಿಗೂ ಹೆಚ್ಚು ನಷ್ಟವುಂಟಾಗಿರುವ ಪರಿಸ್ಥಿತಿಯಾಗಿದೆ ಎನ್ನುವುದನ್ನು ನಾವು ನೋಡಿದ್ದೇವೆ.

ನಾನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಈ ಒಂದು ಸಮಸ್ಯೆಯನ್ನು ಬಿಡಿಸ ತಕ್ಕಂಥಾ ಕಾಲದಲ್ಲಿ ಮಾನ್ಯ ಮಂತ್ರಿಗಳಿಗೆ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ಸೆಪ್ಟಂಬರ್ ೨೯ ನೇ ತಾರೀಖಿನ ಪೇಪರಿನಲ್ಲಿ ಬಂದಿರುವ ಒಂದು ವಿಷಯವನ್ನು ಮಾನ್ಯ ಶ್ರೀಮಾನ್ ಹುಚ್ಚಮಾಸ್ತಿಗೌಡರ ಗಮನಕ್ಕೆ ತರಬೇಕಾಗಿದೆ. ಅದು ಈ ರೀತಿ ಇದೆ:— ''ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದ ಧಾನ್ಯ ವಾಪಸ್ ಎಂದು ಹೆಡ್ಡಿಂಗ್ ಇದೆ. ಮುಂದೆ ಏನು ಹೇಳಿದೆ ಎಂದರೆ., ನಾಗಮಂಗಲದ ಇಬ್ಬರ ವರ್ತಕರಿಂದ ಅಧಿಕಾರಿಗಳು ವಶಪಡಿಸಿಕೊಂಡಿದ್ದ ಒಟ್ಟು .೩೫ ಕ್ವಿಂಟಾಲ್ ಭತ್ತ ವನ್ನು ಕೈಗಾರಿಕಾ ಸಚಿವ ಶ್ರೀ ಎಸ್. ಎಂ. ಕೃಷ್ಣ ಅವರ ಸೂಚನೆಯಂತೆ ಸದರಿ ವರ್ತಕರಿಗೆ ವಾಪಸು ನೀಡ ಲಾಗಿದೆ. ೧೦-೧೫ ಪಲ್ಲಾ ಧಾನ್ಯವಿಟ್ಟುಕೊಂಡು ವ್ಯಾಪಾರ ಮಾಡುವ ಸಣ್ಣಪುಟ್ಟ ವರ್ತಕರಿಗೆ ಅಕ್ರಮ ದಾಸ್ತಾನು ಕುರಿತ ಸರ್ಕಾರದ ಆಜ್ಞೆ ಅನ್ವಯಿಸುವುದಿಲ್ಲವೆಂದು ಸಚಿವರು ತಿಳಿಸಿದ್ದಾಗಿ ವರದಿಯಾಗಿದೆ. ಈ ರೀತಿ ಇದೆ. ಆದುದರಿಂದ ನಾನು ಹೇಳುವುದು ಏನೆಂದರೆ ಮಂತ್ರಿಗಳು ಇಂಥಾದ್ದಕ್ಕೆಲ್ಲಾ ಪ್ರವೇಶ ಮಾಡ ಬಾರದು ಎಂದು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ರೀತಿ ಮಾಡುವುದು ಒಳ್ಳೆಯದಲ್ಲ ಅವರು ಯಾವ ರಾಜಕೀಯ ಪಕ್ಷದಿಂದ ಹುಟ್ಟಿಕೊಂಡೇ ಬರಲಿ ಇಂಥ ಒಂದು ವ್ಯವಹಾರವನ್ನು ಮಾಡ ತಕ್ಕಂಥ ಜನರಿಗೆ ನೀವು ದಾಕ್ಷಿಣ್ಯ ತೋರಿಸಬಾರದು ಆ ರೀತಿ ಮಾಡಿದರೆ ಈ ಮಾನ್ಯ ಸಭೆಗೆ ತಾವು ವಿವರಣೆ ಕೊಡಬೇಕಾಗುತ್ತದೆ. ಮತ್ತು ಮನಸ್ಸಿಗೆ ಬಂದಂತೆ ಭಾಷಣ ಮಾಡುವುದು ಬೇಡ. ಭಾಷಣ ಮಾಡವುದು ಕಡಿಮೆ ಮಾಡಿ, ಗೌರವ ಹೆಚ್ಚುತ್ತದೆ, ನಿಮ್ಮ ಪ್ರತಿಷ್ಠೆಯೂ ಹಚ್ಚುತ್ತದೆ ಎಂದು ಹೇಳಬಯಸುತ್ತೇನೆ. ಈವೊತ್ತು ಸರ್ಕಾರ ಇದಕ್ಕೆ ಸಂಭಂದಪಟ್ಟಂತೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರೋ ಆ ಬಗ್ಗೆ ಕ್ಯಾಬಿನೆಟ್‌ನಿರ್ಣಯ ತೆಗೆದುಕೊಂಡಮೇಲೆಹೇಳಿ ಬೇಡಅನ್ನುವುದಿಲ್ಲ ಆದರೆಹೇಳಿಕೊಡುವುದುಒಂದುಮಾರ್ಗ ಅದನ್ನು ಕಾರ್ಯಾಚರಣೆಗೆ ತರುವುದು ಇನ್ನೊಂದು ಮಾರ್ಗವಾದರೆ ಆಗ ಜನತೆಗೆ ಜಿಗುಪ್ಸೆಯಾಗುತ್ತದೆ. ಈವೊತ್ತು ಮೈಸೂರು ರಾಜ್ಯದ ಒಂದು ಜಿಲ್ಲೆಯಲ್ಲಿ ಏನು ಅತಿವೃಷ್ಟಿಯಿಂದ ಅನಾಹುತವಾಯಿತು, ಎಂದು ನಾನು ಕೇಳಿದ್ದೇನೆ. ಶಿವನಸಮುದ್ರದ ಇಬ್ಬದಿಯ ದಡಗಳಲ್ಲೂ ಸುಮಾರು ೮೫ ರಿಂದ ೧೦೦ ಹೆಣದವರಿಗೆ ತೇಲಾಡುತ್ತಿದ್ದುದನ್ನು ಪ್ರತ್ಯಕ್ಷವಾಗಿ ನೋಡಿದಂಥಾವರೊಬ್ಬರು ನನಗೆ ಪ್ರಸ್ತಾಪ ಮಾಡಿದ್ದಾರೆ. ಮತ್ತು ಸರ್ಕಾರ ಈ ವಿಚಾರದಲ್ಲಿ ಕೊಟ್ಟಂಥ ಅಂಕಿ ಅಂಶ ಸರಿಯಾಗಿಲ್ಲ ಎಂದು ಹೇಳಿದ್ದಾರೆ ನಾನು ಅಂತೂ ಪ್ರವಾಸ ಮಾಡಲಿಲ್ಲ, ವಿಚಾರ ಕೇಳಿದ್ದೇನೆ. 'ಇಂತಹ ಒಂದು ಘಟನೆ ಬಗ್ಗೆ ನಾವು ನಾಚಿಕೆ ಪಡಬೇಕಾಗುತ್ತದೆ. ಜನತೆ ನೊಂದಿದ್ದಾರೆ. ಆದ್ದರಿಂದ ಇದಕ್ಕ ಹೊಣೆಗಾರರು ಯಾರೇ ಇರಲಿ ಈ ಬಗ್ಗೆ ಒಂದು ಜ್ಯುಡಿಷಿಯಲ್ ಪ್ರೋಬ್ ಮಾಡಬೇಕು, ಏತಕ್ಕೆಂದರೆ ಒಂದು ಅತಿ ವೃಷ್ಟಿ, ಅನಾವೃಷ್ಟಿ ಕಷ್ಟಕ್ಕೆ ಜನಗಳು ಈಡಾಗಿರುವುದರಿಂದ ಇದರ ಬಗ್ಗೆ ಬಹಿರಂಗ ವಿಚಾರಣೆ ಆಗಬೇಕು ಎಂದು ಹೇಳುತ್ತೇನೆ. ಅಲ್ಲಿಯ ಅಧಿಕಾರಿಗಳು ಈ ಬಗೆ ಮುಂಜಾಗರೂಕತೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕ ಹಿಂಜರಿದಿದ್ದಾರೆ. ಆದ್ದರಿಂದ ಈ ಅನಾಹುತದಿಂದ ೨ ಕೋಟಿ ರೂಪಾಯೀ ನಷ್ಟವಾಗಿದೆ ಎಂದು ಕೇಳಿದ ಮೇಲೆ ಇದರ ಬಗ್ಗೆ ಜ್ಯುಡಿಷಿಯಲ್ ಪ್ರೋಬ್ ಮಾಡಬೇಕು ಎಂದು ಮತ್ತೊಮ್ಮೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

(ಶ್ರೀ ಎಚ್. ಡಿ. ದೇವೇಗೌಡ)

ಇನ್ನು ಬರಗಾಲ ಪೀಡಿತ ಪ್ರದೇಶದಲ್ಲಿ ಮಕ್ಕಳ ಶಿಕ್ಷಣ ಶುಲ್ಕ ಮಾಫಿ ಮಾಡುವ ವಿಷಯದ ಬಗ್ಗೆ ಶ್ರೀಮಾನ್ ಆರ್ಮುಗಂರವರು ಹೇಳಿದ್ದಾರೆ. ಮತ್ತು ಈ ಬಗ್ಗೆ ತಹಸಿಲ್ದಾರರವರಿಂದ ಸರ್ಟಿಫಿಕೇಟ್ ಪಡೆಯಬೇಕಾದರೆ ಏನು ಅಡಚಣೆ ಇದೆ ಎನ್ನುವ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ೧೮-೨೦-೩೦ ರೂಪಾಯಿ ಏನು ಖರ್ಚುಮಾಡಬೇಕೊ ಅದರ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಮತ್ತು ಈ ಬಗ್ಗೆ ಏಡೆಡ್ ಸ್ಕೂಲ್‌ಗೂ ಕೂಡ ಈ ಒಂದು ಸೌಲಭ್ಯವನ್ನು ಕೊಡುವುದಕ್ಕೆ ಮನಸ್ಸು ಮಾಡಬೇಕು ಎಂದು ಅವರ ರಿಪೋರ್ಟಿನಲ್ಲಿ ಹೇಳಿದ್ದಾರೆ ನಾನು ಎಲ್ಲರಿಗೂ ಆ ಸೌಲಭ್ಯವನ್ನು ಕೊಡಬೇಕು ಎಂದು ವಾದ ಮಾಡುವುದಿಲ್ಲ.. ಎಲ್ಲಿ ಚೆನ್ನಾಗಿ ಬೆಳೆ ಆಗಿದೆ ಅಲ್ಲಿಗೆ ಈ ಸೌಲಭ್ಯವನ್ನು ಕೊಡುವುದು ಬೇಡ ಈವೊತ್ತು ಬಿಜಾಪುರ ತಾಲ್ಲೂಕು ೨-೩ ತಾಲ್ಲೂಕುಗಳು ಬೆಳಗಾಂ ರಾಯಚೂರು ಜಿಲ್ಲೆಯ ೨-೩ ತಾಲ್ಲೂಕುಗಳು ಇದರಿಂದ ಎಫೆಕ್ಟ್ ಆಗಿವೆ.. ಎಂದು ಕೇಳಿದ್ದೇನೆ. ಈಗ ತಾವು ಮಾಸಿಕ ವರಮಾನ ೩೦೦ ರೂಪಾಯಿ ಇರಬೇಕು ಎಂದು ಏನು ಒಂದು ಲಿಮಿಟೇಷನ್ ಮಾಡಿದ್ದಿರೋ ಆ ಸಂಖ್ಯೆಯಲ್ಲಿ ಸಿಕ್ಕುವ ಜನ ಕಡಿಮೆ. ಅಲ್ಲದೆ ಇದಕ್ಕಾಗಿ ತಹಶೀಲ್ದಾರರವರಿಂದ ಸರ್ಟಿಫಿಕೆ.ಟ್ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಅವರಿಂದ ಸರ್ಟಿಫಿಕೇಟ್ ಪಡೆಯಬೇಕಾದರೆ ಕಲವು ಅಡಚಣೆ ಇದೆ. ಆದ್ದರಿಂದ ಸಾಮೂಹಿಕವಾಗಿ ಅದು ಪ್ರೈವೇಟ್ ಇನ್ಸ್ಟಿಟ್ಯೂಷನ್ ಆಗಿರಲಿ, ಗೌರ್ನಮೆಂಟ್ ಇನ್ಸ್ಟಿಟ್ಯೂಷನ್ ಆಗಿರಲಿ ಆ ಮಕ್ಕಳಿಗೆ ರಿಯಾಯಿತಿ ಕೊಡುವುದಕ್ಕ ಇನ್ನೊಂದು ತಿರುವು ನಿರ್ಣಯ ಮಾಡಬೇಕು ಎಂದು ಹೇಳುತ್ತೇನೆ. ಈ ತಿಂಗಳು ೧೫ನೇ ತಾರೀಖು ಅಲ್ಲಿ ಸೆಕಂಡ್‌ಟರ್ಮ್ ಫೀಸ್ ಕಟ್ಟುವುದಕ್ಕ ಮತ್ತು ಎಕ್ಸಾಮಿನೇಷನ್ ಫೀಸ್ ಕಟ್ಟುವುದಕ್ಕ ಕೊನೆತಾರೀಖು ಎಂದು ಕೇಳಿದ್ದೇನೆ. ಆದ್ದರಿಂದ ಇವನ್ನು ಕಟ್ಟದೇ ಇರುವಂಥ ಮಕ್ಕಳಿಗೆ ಈಗ ಇರತಕ್ಕಂಥ ಟೈಮನ್ನು ಎಕ್ಸ್‌ಟೆಂಡ್ ಮಾಡಿ, ಈ ಒಂದು ಹಣವನ್ನು ಓಳ ಫ್ಯಾಮಿನ್‌ನಿಂದ ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಯಾವುದೇ ಉದಾಸೀನ ತೋರಿಸುವುದು ಬೇಡ. ಬಹುಶಃ ಈವೊತ್ತು ಬಂದಿರತಕ್ಕ ಈವೊಂದು ಪರಿಸ್ಥಿತಿಯನ್ನು ಬರಗಾಲ ಎಂದು ಕರೆಯಬೇಕೋ, ದೋಗಿಬರಹ ಎಂದು ಕರೆಯಬೇಕೋ ಗೊತ್ತಿಲ್ಲ.

ಶ್ರೀ ಜಿ. ಎಲ್. ಕಬಾಡಿ:— ಈ ಪರಿಸ್ಥಿತಿಗೆ ದೋಗಿಬರಹ ಎಂದು ಕರೆಯಬಹುದು.

ಶ್ರೀ ಹೆಚ್. ಡಿ. ದೇವೇಗೌಡ.— ದೋಗಿಬರಹ ಎಂತಲೇ ಇಟ್ಟುಕೊಳ್ಳೋಣ. ಅದಕ್ಕಿಂತಲೂ ಒಂದು ಹೆಚ್ಚಿನ ಘಟನೆ ಈವೊತ್ತಿನ ದಿವಸ ನಡೆದಿದೆ ಎಂದು ಹೇಳಬಹುದು. ಆದುದರಿಂದ ಆ ಪ್ರದೇಶದ ಮಕ್ಕಳಿಗೆ ನಾವು ಏನು ಸೌಭ್ಯವನ್ನು ಕೊಡಬೇಕೊ ಅದನ್ನು ಕೊಡುವುದಕ್ಕೆ ಹಿಂದೆ ಮುಂದು ನೋಡಬಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ

ಇನ್ನು ಲಿಫ್ಟ್ ಇರ್ರಿಗೇಷನ್ ಸ್ಕೀಂ ವಿಚಾರ ಈಗ ಸರ್ಕಾರದವರು ವಿದ್ಯುತ್ ಲೈನ್ ಎಳೆಯುವುದಕ್ಕೆ ಹುಕುಂ ಮಾಡಿದ್ದಾರೆ ಅವರ ಭಾಷಣದಲ್ಲಿ ಡಿಸೆಂಬರ್‌ನಲ್ಲಿ ಈ ಕೆಲಸ ಶುರು ಮಾಡಿಸಿ ಬಿಟ್ಟು ಜನವರಿಯಲ್ಲಿ ನೀರನ್ನು ಕೊಡುತ್ತೇನೆ ಎಂದು ಹೇಳಿದರು.

ಶ್ರೀ ಬಾಪೂಗೌಡ ರಾಯಪ್ಪ.— ಇನ್ನೂ ಕೆಲಸ ಪ್ರಾರಂಭವಾಗಿಲ್ಲ

ಶ್ರೀ ಹೆಚ್. ಡಿ. ದೇವೇಗೌಡ.— ಈ ರೀತಿ ಇದ್ದರೆ ಜನವರಿ ಹೊತ್ತಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಶ್ರೀ ಮಾನ್ ಚೆನ್ನಬಸಪ್ಪನವರು ಈ ಮಾತನ್ನು ಹೇಳಿ ರಎಡೂವರೆ ತಿಂಗಳಾಯಿತು ಆಮೇಲೆ ಇನ್ನೊಂದು ಮಾತು ಹೇಳಿದರು, ಪ್ರತಿ ಒಂದೊಂದು ಊರಿಗೆ ೧೦-೧೦ ಬಾವಿಗಳನು ಕೊಡಬೇಕೆಂದು ಕ್ಯಾಬಿನೆಟ್ ತೀರ್ಮಾನವಾಗಿದೆ ಎಂದು. ಅದು ಪತ್ರಿಕೆಯಲ್ಲಿ ಬಂದಿದೆ. ಆದುದರಿಂದ ಇದರ ಬಗ್ಗೆ ನಾನು ಕೇಳುವುದು ಈವೊತ್ತಿನವರೆಗೆ ಎಷ್ಟು ಊರುಗಳಿಗೆ ಎಷ್ಟೆಷ್ಟು ಬಾವಿಗಳನ್ನು ಕೊಟ್ಟಿದ್ದಾರೆ ಅದಕ್ಕಾಗಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಅವರು ಹೇಳಿದಂತೆ ಕಾರ್ಯಾಚರಣೆ ಮಾಡಿದ್ದಾರೆಯೋ ಎನ್ನುವ ಪೂರ್ಣ ವಿವರಣೆ ಕೊಡಬೇಕು ಎಂದು ಕೇಳುತ್ತೇವೆ.

ಇನ್ನು ಕೊನೆಯದಾಗಿ ಒಂದು ಮಾತು ಹೇಳುವುದಾದರೆ ಹುಮ್ನಾಬಾದಿನಲ್ಲಿ ಡಾ. ಅಂಬೇಡ್ಕರ್‌ರವರ ಪ್ರತಿಮೆಯನ್ನು ಅನಾವರಣ ಮಾಡುವ ಸಂದರ್ಭದಲ್ಲಿ ಕೆಲವು ಪುಡಾರಿಗಳು, ಮಧ್ಯವರ್ತಿ ಜನಗಳು ತಕಾವಿ ಲೋನ್ಸ್ ಬಗ್ಗೆ ದುಡ್ಡು ಹೊಡೆಯುತ್ತಾರೆ ಇದನ್ನು ತಪ್ಪಿಸಬೇಕು ಎಂದು ಹೇಳಿದರು. ಫಾಡಲ್ ಲೋನ್ಸ್ ಅಂತೂ ಫ್ರೀ ಆಗಿ ಕೊಡಿ. ಆದರೆ ಫುಡ್‌ಗ್ರೈನ್ಸ್ ಕೊಡತಕ್ಕಂಥ ಸಂದರ್ಭದಲ್ಲಿ ಮಧ್ಯವರ್ತಿ ಜನ ಏನು ಇದ್ದಾರೋ ಅವರ ಹವ್ಯಾಸ ಇದರಲ್ಲಿ ಇಲ್ಲದ ರೀತಿಯಲ್ಲಿ ಇರಬೇಕು. ಮೈಸೂರು ಸ್ಟೇಟ್ ರಿಲೀಫ್ ಕೌನ್ಸಿಲ್‌ನಿಂದ ಬೀದರ್ ಮತ್ತು ಗುಲ್ಬರ್ಗಾಕ್ಕೆ ಒಬ್ಬರನ್ನು ನಾಮಕರಣ ಮಾಡಿದ್ದಾರೆ. ಅದು

ಪತ್ರಿಕೆಯಲ್ಲೂ ಬಂದಿದೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ತಪ್ಪು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಇದರ ಬಗ್ಗೆ ನಾನು ಪುನರುಚ್ಚಾರಣೆ ಮಾಡಬೇಕಾದರೆ ಅವರ ಮನೆ ಅಳಿಯಂದಿರನ್ನು ರಾಜಕೀಯದಲ್ಲಿ ಬೆಳಸಬೇಕಾದರೆ ಈ ಸ್ಟೇಟ್ ರಿಲೀಫ್ ಕೌನ್ಸಿಲ್‌ನಲ್ಲಿ ತರುವುದು ಬೇಡ, ಬೇರೆ ಇನ್ನಾವುದರಲ್ಲಿ ಯಾದರೂ ತನ್ನಿ. ಈ ಹಿಂದೆ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ಅಳಿಯಂದಿರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ ಎಂದು ಕೆಟ್ಟ ಹೆಸರು ತಂದರು. ಅದೇ ರೀತಿಯಲ್ಲಿ ಅರಸ್‌ರವರ ಅಳಿಯಂದಿರನ್ನು ಸೇರಿಸಿಕೊಂಡು ಅವರಿಗೆ ಕೆಟ್ಟ ಹೆಸರು ತರುವುದು ಬೇಡ. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿಯಲ್ಲಿ ಅವರ ಅಳಿಯಂದಿರನ್ನು ಸೇರಿಸಿ ರಾಜಕೀಯ ಬೆಳಸಿದರು ಎಂದು ಶ್ರೀಮಾನ್ ಹೆಚ್. ಸಿದ್ದವೀರಪ್ಪನವರು ಅವರ ಮೇಲೆ ಆಪಾದನೆ ಮಾಡಿ ಈ ಸಭೆಯಲ್ಲಿ ಭಾಷಣ ಮಾಡಿದ್ದು ಜ್ಞಾಪಕವಿಲ್ಲವೆ ?

ಶ್ರೀ ಹೆಚ್. ಸಿದ್ದವೀರಪ್ಪ.— ನಾನು ಆಪಾದನೆ ಮಾಡಿದ್ದು ಜ್ಞಾಪಕವಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.— ಈವಾಗ ತಾವು ಮರೆತಿರಬಹುದು. ಈಗ ಸ್ಟೇಟ್‌ರಿಲೀಫ್ ಕೌನ್ಸಿಲ್‌ಗೆ ಅರಸ್‌ರವರ ಅಳಿಯಂದಿರನ್ನು ನಾಮಿನೇಟ್ ಮಾಡಿದ್ದಾರೆ. ಅದು ಪತ್ರಿಕೆಯಲ್ಲೂ ಬಂದಿದೆ. ಅವರನ್ನು ದೂರ ಇಟ್ಟರೆ ಒಳ್ಳೆಯದು, ಆ ರೀತಿ ಮಾಡಿದರೆ ಅವರಿಗೂ ಹಿತ ದೇಶಕ್ಕೂ ಹಿತ.

ಶ್ರೀ ಹೆಚ್. ಎನ್. ನಂಜೇಗೌಡ.— ಶ್ರೀಮಾನ್ ನಿಜಲಿಂಗಪ್ಪನವರ ವ್ಯವಹಾರವೇ ಬೇರೆ. ತಾವು ಅದಕ್ಕೂ, ಇದಕ್ಕೂ ಹೋಲಿಸುವುದು ಸರಿಯಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.— ನಿಮ್ಮ ವ್ಯವಹಾರಗಳೂ ಕೂಡ ಬಹಳ ನಾಜೂಕಾಗಿದೆ. ಆ ಬಗ್ಗೆಯೂ ಬೇಕಾದರೆ ಹೇಳುತ್ತೇನೆ. ಆ ಮೇಲೆ ಇದೇ ಒಂದು ಸಂದರ್ಭದಲ್ಲಿ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಕೆಲಸಗಳನ್ನು ನಿಲ್ಲಿಸಿದ್ದಾರೆ. ಇವೊತ್ತು ಗುಲ್ಬರ್ಗ, ಬೀದರ್, ಬೆಳಗಾಂ ಕೆಲವು ಭಾಗ ರಾಯಚೂರ್ ಕೆಲವು ಭಾಗ ಬಿಜಾಪುರ ಕೆಲವು ಭಾಗಗಳಲ್ಲಿ ಎಷ್ಟು ತೀವ್ರತೆಯ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅಷ್ಟು ತೀವ್ರತೆಯ ಕಷ್ಟವನ್ನು ಬೇರೆ ಕಡೆ ಅನುಭವಿಸುತ್ತಾ ಇಲ್ಲ. ಹಾಗೆ ಹೇಳಿದ ಮಾತ್ರಕ್ಕೆ ಎಲ್ಲಾಕಡೆ ಕೆಲಸ ಬಂದ್ ಮಾಡಬಹುದು ಎಂದು ಹೇಳುವುದನ್ನು ಒಪ್ಪುವುದಿಲ್ಲ. ಉದಾಹರಣೆಗೆ ತುಮಕೂರು ಜಿಲ್ಲೆ, ಹಾಸನ ಜಿಲ್ಲೆ, ಕೋಲಾರ ಜಿಲ್ಲೆ ಪ್ರವಾಸ ಮಾಡಿಕೊಂಡು ಬಂದಿದ್ದೇನೆ. ಮುಂಗಾರು ಬೆಳೆ ಹೋಯಿತು. ಹಿಂಗಾರಿ ಬೆಳೆ ಹಾಕಿದ ಮೇಲೆ ಹಾಸನ ಜಿಲ್ಲೆ ವಿಷಯ ಹೇಳಬೇಕಾದರೆ ೨–೩ ಕೋಟಿ ರೂಪಾಯಿ ಆಲೂಗಡ್ಡೆ ಬೆಳೆ ನಾಶವಾಯಿತು. ಇದರ ಬಗ್ಗೆ ಸರ್ಕಾರಕ್ಕೂ ವರದಿ ಬಂದಿದೆ. ಇದರ ಮಧ್ಯೆ ಏನು ಹಿಂಗಾರು ಬೆಳೆ ಹಾಕಿದ್ದರು ಅದು ಕೂಡ ಬತ್ತಿ ಹೋಗಿದೆ. ಕಟಾವು ಮಾಡಿಲ್ಲ ನೋಡಿಕೊಂಡು ಬನ್ನಿ. ಕೆರೆ ಕೆಳಗೆ ಹಾಕಿದ ಬತ್ತ ಬಿಟ್ಟರೆ ಹಿಂಗಾರು ಡ್ರೈ ಕ್ರಾಪ್ಸ್ ಹೋಗಿದೆ. ಆದುದರಿಂದ ಇವೊತ್ತು ನೀವು ಹಣ ಒಂದು ಕೊಟ್ಟಿದ್ದೀರಿ, ಇನ್ನೊಂದು ಕಡೆ ಖರ್ಚು ಮಾಡಬೇಡಿ ಎಂದು ಸರ್ಕ್ಯುಲರ್ ಆರ್ಡರ್ ಕೊಡುವುದು ಫೋನಿನಲ್ಲಿ ಎಂ. ಎಲ್. ಎ. ಗಳ ಒತ್ತಡ ತಡೆಯಲಾರದೆ ಸರ್ಕ್ಯುಲರ್ ಆರ್ಡರ್ ಕಳುಹಿಸಿದ್ದೇವೆ ಕೆಲಸ ಮಾಡುವುದನ್ನು ನಿಲ್ಲಿಸಿ ಎಂದು ಹೇಳುವುದು ಆದಾಗಬಾರದು. ನೀವು ಮಾಡಿದ್ದೀರೋ ಅಥವಾ ಬೇರೆಯವರು ಮಾಡಿದ್ದಾರೋ ಅದರ ಬಗ್ಗೆ ವ್ಯಾಖ್ಯಾನ ಬೇಡ. ಸರ್ಕಾರ ಈ ಒಂದು ಪ್ರದೇಶಗಳಲ್ಲಿ ಕೂಡ ಕೆಲಸಗಳನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಿ ಎಷ್ಟು ಕೆಲಸಬೇಕೋ ಅಷ್ಟು ಕೆಲಸ ಒದಗಿಸುವುದಕ್ಕೆ ಈ ಒಂದು ಪ್ರಾಂತ್ಯದಲ್ಲಿ ಪ್ರಯತ್ನ ಮಾಡಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಕಳವಳ ಉಂಟಾಗಿದೆ ಯಾರೋ ಕಂಟ್ರಾಕ್ಟರ್ ಪರವಾಗಿ ಪ್ಲೀಡ್ ಮಾಡುತ್ತೇನೆ ಎಂದು ಇಲ್ಲಿ ಯಾವುದೋ ಬಿಲ್ ಬಂದಿಲ್ಲ ಎಂದು ಹೇಳುತ್ತೇನೆ. ಕಂಟ್ರಾಕ್ಟರ್ ಪರವಾಗಿ ವಕಾಲತ್ತು ವಹಿಸಿಕೊಂಡು ಹೇಳುವುದಕ್ಕೆ ತಯಾರಿಲ್ಲ. ಆ ಪ್ರದೇಶಗಳಿಗೂ ಕೂಡ ಕೆಲಸಗಳನ್ನು ಒದಗಿಸುವುದಕ್ಕೆ ಸರ್ಕಾರ ಔದಾಸೀನ್ಯ ತೋರಿಸಬಾರದು ಎಂದು ಹೇಳುತ್ತೇನೆ. ನಾನು ಇವೊತ್ತು ಸರ್ಕಾರದಿಂದ ಇದಕ್ಕೆ ಉತ್ತರವನ್ನು ಅಪೇಕ್ಷೆ ಮಾಡುತ್ತೇನೆ. ಬಿಜಾಪುರ, ಬೆಳಗಾಂ ೨ ತಾಲ್ಲೂಕುಗಳು, ಗುಲ್ಬರ್ಗ ಮತ್ತು ಬೀದರ್ ಇವನ್ನು ಬರಗಾಲ ಪ್ರದೇಶ ಎಂದು ಘೋಷಣೆ ಮಾಡಬೇಕು ಇದಕ್ಕೆ ಕಾನೂನು ಕಟ್ಟಲೆ ಬೇಕಿಲ್ಲ. ಇರುವ ಪರಿಸ್ಥಿತಿಯನ್ನು ಇದ್ದಹಾಗೆ ಹೇಳುವುದಕ್ಕೆ ಹಿಂದೆ ಮುಂದೆ ನೋಡುವ ಆವಶ್ಯಕತೆ ಇಲ್ಲ. ಸರ್ಕಾರ ದೊಡ್ಡ ನಿಲುವು ತಳೆದು ಇವು ಬರಗಾಲ ಪ್ರದೇಶ ಎಂದು ಘೋಷಣೆ ಮಾಡಬೇಕು. ಜನ ಸತ್ತಿದ್ದರೆ, ಸತ್ತಿದ್ದಾರೆ ಎಂದು ಹೇಳಿದರೆ ಬಹುಶಃ ಇಂಟರ್‌ನ್ಯಾಷನಲ್ ಫೀಲ್ಡ್‌ನಲ್ಲಿ ನಮ್ಮ ರಾಷ್ಟ್ರದ ರೆಪ್ಯುಟೇಷನ್ ತಗ್ಗುತ್ತದೆ. ಎಂದು ಮನಸ್ಸಿನಲ್ಲಿ ಕಳವಳಬೇಡ. ಆದುದರಿಂದ ಬರಗಾಲ ಪ್ರದೇಶಗಳೆಂದು ಡಿಕ್ಲೇರ್ ಮಾಡಿ. ೨ನೆಯದು ಎಷ್ಟು ಜನಬಂದರೂ ಕೆಲಸ ಒದಗಿಸಬೇಕು. ಮೂರನೆಯದು ಡೆಸ್ಟಿಟ್ಯೂಟ್ಸ್‌ಗೆ ಎಂಟು ಕೆ. ಜಿ. ಆಹಾರ ಧಾನ್ಯವನ್ನು ಹಂಚಬೇಕು. ಓಲ್ಡ್‌ಏಜ್ ಪೆನ್ಷನ್‌ನಲ್ಲಿ ಅನಾಮಲಿ ಇದೆ ಎಲ್ಲಾ ನಿರ್ಗತಿಕರಿಗೂ ಆಹಾರಧಾನ್ಯವನ್ನು ಪುಕ್ಕಟೆಯಾಗಿ ಒದಗಿಸುವುದಕ್ಕೆ ಸರ್ಕಾರ ತೀವ್ರವಾದ ಕಾರ್ಯಕ್ರಮವನ್ನು ಹಾಕಿ

ಶ್ರೀ ಎಚ್. ಡಿ. ದೇವೇಗೌಡ

ಕೊಂಡು ಒದಗಿಸಬೇಕು. ನಾಲ್ಕನೆಯದಾಗಿ ಫೇರ್‌ಪ್ರೈಸ್ ಡಿಪೋಗಳಲ್ಲಿ ನ್ಯಾಯವಾದ ಬೆಲೆಯಲ್ಲಿ ಕೊಳ್ಳತಕ್ಕ ಪ್ರತಿಯೊಬ್ಬರಿಗೂ ಅವಕಾಶ ಮಾಡಿಕೊಡಬೇಕು. ಅವರು ಶ್ರೀಮಂತರೇ ಇರಲಿ, ಬಡವರೇ ಇರಲಿ, ಯಾವ ವ್ಯತ್ಯಾಸ ಮಾಡಬಾರದು. ೨೦೦ ಎಕರೆ ಇದ್ದರೂ ಅವರು ಆಹಾರಧಾನ್ಯವನ್ನು ಕೊಳ್ಳಲೇಬೇಕು. ಆದುದರಿಂದ ಎಲ್ಲಾ ಕಡೆ ಪೇರ್‌ಪ್ರೈಸ್ ಡಿಪೋ ಹಾಕಿ ನ್ಯಾಯವಾದ ಬೆಲೆಯಲ್ಲಿ ಆಹಾರ ಧಾನ್ಯವನ್ನು ಒದಗಿಸುವುದಕ್ಕೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇನ್ನು ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಮಾಡಬೇಕು. ಎಷ್ಟೇ ಟ್ರಕ್ಸ್‌ಗಳು ಬೇಕಾದರೂ ಒದಗಿಸತಕ್ಕ ಕೆಲಸಮಾಡಬೇಕು. ಇವೊತ್ತು ಈಗಾಗಲೆ ಕಾಲರಾ ಬೇನೆ ಶುರುವಾಗಿದೆ. ಆರೋಗ್ಯಮಂತ್ರಿಗಳು ಇಲ್ಲಿ ಕೂತಿದ್ದಾರೆ ಎಲ್ಲಾ ರೀತಿಯ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಬೇಕು. ಆಮೇಲೆ ದನಗಳಿಗೆ ಮೇವುಗಳನ್ನು ಒದಗಿಸಬೇಕು. ಇದರಲ್ಲಿ ಹಣದ ಪ್ರಶ್ನೆ ಬರಬಾರದು. ಮೇಜರ್ ಪ್ರಾಜೆಕ್ಟ್‌ಗಳಲ್ಲಿ ಕೃಷ್ಣ ಪ್ರಾಜೆಕ್ಟ್, ಕಾರಂಜ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕು. ಕಾರಂಜಾ ಒಂದರಲ್ಲೇ ೨೦ ಸಾವಿರ ಜನ ಕೆಲಸ ಮಾಡಬಹುದು ಈಗ ಅಲ್ಲಿ ೧[illegible]೦೦–೧೩೦೦ ಜನ ಇದ್ದಾರೆ. ಅಪ್ಪರ್ ಕೃಷ್ಣ ಚಾನಲ್‌ನೊಳಗೆ ಸುಮಾರು ೫ ಲಕ್ಷ ಜನರಿಗೆ ಕೆಲಸ ಕೊಡಬಹುದು. ನೀವು ಹಿರಿಯೂರು ಡಲ್ಲಿಗೆ ಹೋಗಿ ಹಣವನ್ನು ಕೊಡಿ ಎಂದು ಹೇಳುವುದಕ್ಕೆ ಆಗುವುದಿಲ್ಲವೇ ? ಮುಂಬ್ರ ಮತ್ತು ಎಣ್ಣೆತೊರೆ ಪ್ರಾಜೆಕ್ಟ್‌ಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಲಿಫ್ಟ್ ಇರಿಗೇಷನ್ ಸ್ಕೀಮುಗಳ ಮುಖಾಂತರ ಬೇಸಿಗೆ ಬೆಳೆಗೆ ನೀರು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಈ ಒಂದು ಸಮಸ್ಯೆಯನ್ನು ನಾನು ನಿಮ್ಮ ಮುಂದೆ ಇಟ್ಟಿದ್ದೇನೆ. ಇದನ್ನು ಒಂದು ತಿಂಗಳು ಟೈಮಿನೊಳಗೆ ಮಾಡದೆ ಹೋದರೆ ಸತ್ಯಾಗ್ರಹ ಮತ್ತು ಚಳುವಳಿ ಮಾಡಬೇಕಾಗುತ್ತದೆ. ಆಗ ತಾವು ರಾಜಕೀಯವಾಗಿ ಮಾತನಾಡುತ್ತಿದ್ದೇವೆ ಎಂದು ಶುರುಮಾಡಬೇಡಿ. ಇವೊತ್ತು ಇಷ್ಟೆಲ್ಲಾ ಈ ಸಭೆಯಲ್ಲಿ ಪ್ರತಿಪಾದನೆ ಮಾಡಿದ್ದೇನೆ. ನೀವು ಕೆಲಸ ಮಾಡಿದರೆ ನಾವು ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತೇವೆ. ಹೊಟ್ಟೆಗೆ ಹಿಟ್ಟು ಇಲ್ಲದೆ ಸಾಯುತ್ತಿರುವ ಜನತೆ ಪರವಾಗಿ ನಿಮಗೆ ಅಭಿನಂಧಿಸುತ್ತೇವೆ. ಈ ಕೆಲಸ ಮಾಡತಕ್ಕಂಥದ್ದರಲ್ಲಿ ಹಿಂದೆ ಹೋದರೆ ನಿಮ್ಮ ಕಣ್ಣನ್ನು ತೆರೆಸುವುದಕ್ಕೆ ಬಹುಶಃ ಚಳುವಳಿ ಮಾಡಬೇಕಾಗುತ್ತದೆ

ಶ್ರೀ ಎಚ್. ಸಿದ್ದವೀರಪ್ಪ : ದೇವರ ಕಣ್ಣನ್ನು ತೆರೆಸಿರಿ.

ಶ್ರೀ ಎಚ್. ಡಿ. ದೇವೇಗೌಡ : ದೇವರ ಕಣ್ಣನ್ನು ತೆರೆಸುವ ಪುಣ್ಯದ ಕೆಲಸ ನಾನು ಎಂದೂ ಮಾಡಿಲ್ಲ ತೆರೆಸಲಿಕ್ಕೆ ಆ ಸಾಲಿನಲ್ಲಿ ಕೂತಿರುವವರು ಪುಣ್ಯದ ಕೆಲಸ ಮಾಡಿಬಂದು ಅಧಿಕಾರಕ್ಕೆ ಬಂದಿದ್ದೀರಿ, ಆದುದರಿಂದ ನೀವು ಏನಾದರೂ ಪ್ರಯತ್ನ ಮಾಡಿ ದೇವರ ಕಣ್ಣನ್ನು ತೆರೆಸಿ ಮತ್ತು ನಿಮ್ಮ ಕಣ್ಣನ್ನು ತೆರೆದು ಕೆಲಸ ಮಾಡಿ. ಇಲ್ಲದಿದ್ದರೆ ರಾಜ್ಯಾದ್ಯಂತ ಚಳುವಳಿ ಮಾಡಬೇಕಾಗುತ್ತದೆ. ನೀವು ಯಾವ ಪೋಲೀಸ್ ಫೋರ್ಸ್ ಹಾಕಿದರೂ ಏನೂ ಆಗುವುದಿಲ್ಲ. ಗುಲ್ಬರ್ಗಾದಲ್ಲಿ ದೊಡ್ಡ ಜೈಲು ಇದೆ ಅಲ್ಲಿ ನಮ್ಮನ್ನು ಕೂಡಿಸಿದರೆ ಆರಾಮವಾಗಿ ಊಟ ಸಿಕ್ಕುತ್ತದೆ. ಈ ಒಂದು ಕೆಲಸದಲ್ಲಿ ಹಿಂದೆ ಮಾಡಿದಂತಹ ಅನಾದರಣೆ, ಹಿಂದೆ ಮಾಡಿದಂತಹ ರಾಜಕಾರಣ ಬೇಡವೆಂದು ಹೇಳುತ್ತೇನೆ. ಅನಾದರಣೆ ಪದ ಉಪಯೋಗಿಸುತ್ತೇನೆ. ದಸರಾ ಕಾರ್ಯಕ್ರಮ ನಿಲ್ಲಿಸುತ್ತೇವೆ ಎಂದು ಹೇಳಿದರು. ಪುಷ್ಪ ಕಿರೀಟವನ್ನು ಹಾಕಿಕೊಂಡು ನರಸೀಪುರದಲ್ಲಿ ಮೆರವಣಿಗೆ ಮಾಡಿ ದೇವೇಗೌಡರ ಮೇಲೆ ರಾಜಕೀಯ ಮಾಡಿದ್ದಾರೆ. ಅದು ಈಗ ಬೇಡ. ಕೊನೆಯದಾಗಿ ಸರ್ಕಾರಕ್ಕೆ ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತೇನೆ ಈ ವಿಷಯದಲ್ಲಿ ಸರ್ಕಾರ ಎಚ್ಚರಿಕೆ ತಪ್ಪಿದರೆ ರಾಜ್ಯದಲ್ಲಿ ಒಂದು ದೊಡ್ಡ ಚಳುವಳಿ ನಡೆಯಬೇಕಾಗುತ್ತದೆ. ಅದರ ಫಲವನ್ನು ನೀವು ಊಟ ಮಾಡಬೇಕಾಗುತ್ತದೆ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ಭಂಗಿ (ಜಮಖಂಡಿ) : ಮಾನ್ಯ ಅಧ್ಯಕ್ಷಿಣೀಯವರೇ, ಇವತ್ತಿನ ದಿವಸ ಶ್ರೀಮಾನ್ ಆಮರ್ಂಗಮ ಅವರು ಈ ತಿಂಗಳ ಏಳನೇ ತಾರೀಖಿನಿಂದ ಪ್ರಾರಂಭ ಮಾಡಿ ಕೇವಲ ಏಳು ದಿವಸಗಳಗೆ ನಾಲ್ಕು ಜಿಲ್ಲೆಗಳಲ್ಲಿ ಸುತ್ತಾಡಿ ತಮ್ಮ ವರದಿಯನ್ನು ಸಲ್ಲಿಸಿದ್ದಾರೆ. ಆ ಬಗ್ಗೆ ಅವರು ಅಭಿನಂದನೆಗೆ ಪಾತ್ರರು ಇದ್ದಾರೆ. ಅವರು ತಮ್ಮ ವರದಿಯಲ್ಲಿ ೧೦ ವಿಭಾಗಗಳನ್ನು ಮಾಡಿ ಬೇರೆಬೇರೆ ಜಿಲ್ಲೆಗಳ ಬಗ್ಗೆ ಬೇಗ ಬೇರೆ ಚರ್ಚೆಮಾಡಿದ್ದಾರೆ. ಅವರು ನಾಲ್ಕನೇ ವಿಭಾಗದಲ್ಲಿ ೨೫ನೇ ಪುಟದಿಂದ ಪ್ರಾರಂಭಮಾಡಿ ೩೩ ಪುಟಗಳ ವರೆಗೆ ಬಿಜಾಪುರ ಜಿಲ್ಲೆಯ ಬಗ್ಗೆ ಚರ್ಚೆ ಮಾಡಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಜಮಖಂಡಿ ತಾಲ್ಲೂಕಿನ ಬಗ್ಗೆ ೧೧೮ನೇ ಪುಟದಲ್ಲಿ ಆವ್ರೇಜ್ ರೇನ್‌ಫಾಲ್ (ಮಳೆಯ) ಬಗ್ಗೆ ವಿವೇವಚನೆ ಮಾಡಿದ್ದಾರೆ. ಜಮಖಂಡಿ ತಾಲ್ಲೂಕಿನಲ್ಲಿ ಕೇವಲ ೪೫.೯ ಸೆಂಟ್ ಅಷ್ಟು ಮಳೆಯಾಗಿದೆ. ಈ ಪ್ರಕಾರವಾಗಿ ವಿವರಕೊಟ್ಟಿದ್ದಾರೆ ಅದು ಸರಿಯಿದೆ. ನಾಲ್ಕು ಜಿಲ್ಲೆಗಳ ವಿಚಾರವನ್ನು ತುಲನಾತ್ಮಕದೃಷ್ಟಿಯಿಂದ ನೋಡಿದರೆ ಜಮಖಂಡಿ ತಾಲ್ಲೂಕಿನಲ್ಲಿ ಅತ್ಯಲ್ಪ ಮಳೆ ನಾಲ್ಕು ತಿಂಗಳಲ್ಲಿ ಆಗಿದೆ ಆದಾಗ್ಯೂ ಕೂಡ ದುರ್ದೈವದಿಂದ ಜಮಖಂಡಿ ತಾಲ್ಲೂಕಿಗೆ ಇವರು ಭೇಟಿಕೊಟ್ಟಿಲ್ಲ. ಜಮಖಂಡಿ ತಾಲ್ಲೂಕಿನ ನೀರಾವರಿ ಬಗ್ಗೆ ಯಾವ ಮಾಹಿತಿಯನ್ನು ತೆಗೆದುಕೊಂಡಿಲ್ಲ. ಬಿಜಾ

ಪುರದಲ್ಲಿ ಉಳಿದುಕೊಂಡು ಬಿಜಾಪುರದ ೬೦೦ ನೇಕಾರರ ಕುಟುಂಬಗಳ ಬಗ್ಗೆ ಮತ್ತು ಅವರಿಗೆ ಸರ್ಕಾರದ ಕಡೆ ಯಿಂದ ಸಹಾಯ ತರುವ ಬಗ್ಗೆ ವಿವೇಚನೆ ಮಾಡಿದ್ದಾರೆ. ಬನಹಟ್ಟಿ, ರಬಕವಿ, ರಾಮಪುರ ಇಳಕಲ್ ನೇಕಾರರ ಬಗ್ಗೆ ಯಾವ ವಿವರವನ್ನು ಕೊಟ್ಟಿಲ್ಲ. ಅವರು ಬಿಜಾಪುರದಲ್ಲಿರುವ ನೇಕಾರರ ಬಗ್ಗೆ ಒಂದು ಪ್ಯಾರಾದಲ್ಲಿ ವಿವೇಚನೆ ಮಾಡಿದ್ದಾರೆ. ೨೭ನೇ ಪುಟದಲ್ಲಿ

> Page 27: At Bijapur, I held discussion with the non-officials. The weavers represented that about 600 families of weavers were dependent on band-looms and that the condition of the weavers was very bad. The sale of hand-loom products, which was mostly in Maharastra had been reduced in view of the scarcity conditions prevailing in Maharashtra also. While the rate of yarn had increased they were unable to increase the rate of the finished prodacts correspondingly because there were no buyers. It was represented that six societies out of seven had been closed and that many weavers had become beggars. A demand was, therefore, made for supply of yarn to the weavers and that Government should purchase the finished goods. They also desired grant of a long term loan of Rs. 1,000 for each loom.

ಎಂದು ಹೇಳಿದೆ. ಆದರೆ ಬನಹಟ್ಟಿ, ರಬಕವಿಯಲ್ಲಿ ಸಾವಿರಕ್ಕಿಂತ ಹೆಚ್ಚು ನೇಕಾರರು ಇದ್ದಾರೆ. ಅವರ ಬಗ್ಗೆ ಕನಿಕರ ಪರಿಸ್ಥಿತಿ ಎಷ್ಟು ಹೇಳಿದರೂ ಅಷ್ಟು ಕಡಿಮೆ ಆಗುತ್ತದೆ. ನೇಕಾರರ ಗೋಳು ಕೇಳಲು ಪರಮೇಶ್ವರನೂ ಸಮರ್ಥಿಸಿದ್ದಾನೆ. ನೇಕಾರರು ಅನ್ನ ಸತ್ಯಾಗ್ರಹ ಮಾಡಿ, ಬನಹಟ್ಟಿಗೆ ಎರಡು ನೂಲಿನ ಡಿಪೋಗಳನ್ನು ಪ್ರಾರಂಭ ಮಾಡಿಸಿದ್ದಾರೆ. ಅವರು ತಿಂಗಳಿಗೆ ಎರಡು ದಿವಸಕ್ಕೆ ಸಾಕಾಗುವಷ್ಟು ನೂಲನ್ನು ಒದಗಿಸಿದಾರೆ. ಈ ಬಗ್ಗೆ ಸರ್ಕಾರದವರು ಕೂಡಲೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದೇವೆ. ಈ ಬಗ್ಗೆ ಉದ್ಯೋಗ ಮಂತ್ರಿಗಳು ಗಮನಕೊಟ್ಟು ಟೆಕ್ಸ್‌ಟೈಲ್ ಕಮಿಷನರ್ ಅವರಿಗೆ ಒತ್ತಾಯ ಮಾಡಿ ಸಾಕಷ್ಟು ನೂಲು ಓಪನ್ ಮಾರ್ಕೆಟ್ಟಿನಲ್ಲಿ ಸಬ್ಸಿಡೈಸ್ ರೇಟಿನಲ್ಲಿ ಅವರಿಗೆ ಒದಗಿಸುವುದು ಅವರ ಕರ್ತವ್ಯ. ಇಲ್ಲದೆ ಹೋದರೆ ಬಿಜಾಪುರ ಜಿಲ್ಲೆಯ ನೇಕಾರ ಜನಾಂಗವೇ ನಾಶವಾಗುವ ಸಂದರ್ಭ ಇದೆ. ನೇಕಾರರ ಬಗ್ಗೆ ಸ್ವಲ್ಪದರಲ್ಲಿ ಹೇಳುವುದಾದರೆ ಸರ್ಕಾರದವರು ಎಚ್ಚೆತ್ತು ಬಡ ನೇಕಾರ ಕೂಲಿಗಾರರಿಗೆ ಅಗ್ಗದ ನೂಲನ್ನು ಕೊಟ್ಟು ತಯಾರು ಮಾಡಿದ ಬಟ್ಟೆಯನ್ನು ತಿರುಗಿ ತೆಗೆದುಕೊಳ್ಳುವ ದೃಷ್ಟಿಯಿಂದ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ಮೇಲೆ ಬೇರೆ ಬೇರೆ ಮಂತ್ರಿಗಳು ಬಿಜಾಪುರ ಜಿಲ್ಲೆಯಲ್ಲಿ ಕ್ಷಾಮದ ಬಗ್ಗೆ ವಚನಗಳನ್ನು ಕೊಟ್ಟರು. ಆ ವಚನಗಳನ್ನು ಪಾಲಿಸಲಿಲ್ಲ ಎಂದು ಈ ಪ್ರಕಾರವಾಗಿ ವಿರೋಧಪಕ್ಷದ ನಾಯಕರು ಕೆಲವು ಮಾತುಗಳನ್ನು ಹೇಳಿದರು. ಶ್ರೀ ಆಮ್ಲಗಂ ಅವರ ರಿಪೋರ್ಟಿನಲ್ಲಿ ೫ ನೇ ಪುಟದಲ್ಲಿ

> "...The apprehension of the people is that the magnitude of the problem, the exact amount required to meet the situation and the period within which relief should be given commensurate with the gravity of the situation has not been assessed. Promise to provide employment, irrigation wells, drinking water facilities, release of founds supply of foodgrains, lift irrigation schemes, etc., have been given .."

ಈ ಪ್ರಕಾರವಾಗಿ ಮಂತ್ರಿಗಳು ವಚನ ಕೊಟ್ಟಿದ್ದು ನಿಜ. ಆ ವಚನಗಳನ್ನು ಯಾವ ರೀತಿಯಿಂದಲೂ ಇಂದಿನವರೆಗೆ ಪೂರೈಸಲಿಲ್ಲ ಎಂಬ ವಿಷಯ ಸರಿಯಲ್ಲ. ಸರ್ಕಾರದವರು ೧೧ ಕೋಟಿ ರೂಪಾಯಿಗಳನ್ನು ಈ ನಾಲ್ಕು ಜಿಲ್ಲೆಗಳಿಗೋಸ್ಕರ ಇಲ್ಲಿಯವರೆಗೆ ಖರ್ಚು ಮಾಡಿದ್ದಾರೆ. ಅದು ಕಂದಾಯ ಮಂತ್ರಿಗಳು ಇಟ್ಟ ರಿಪೋರ್ಟಿನಲ್ಲಿ ಸ್ಪಷ್ಟವಾಗಿ ಇದೆ. ಸರ್ಕಾರದವರು ಅಲ್ಲಿಯ ಜನರಿಗೆ ಎಂಪ್ಲಾಯ್‌ಮೆಂಟ್ ಎಂದರೆ, ಕೂಲಿಗಾರ ಜನರಿಗೆ ಸಾಕಷ್ಟು ಕೂಲಿಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ಫಿನಾನ್ಸ್ ರಿಪೋರ್ಟಿನ ೯೦ನೇ

(ಶ್ರೀ ಪಿ. ಎಂ. ಭಂಗಿ)

ಪುಟದಲ್ಲಿ ೧೧೦ಕ್ಕೆ ೫ ಪರ್ಸೆಂಟ್ ಜನಗಳಿಗೆ ಕೂಲಿಯನ್ನು ಒದಗಿಸಿಕೊಟ್ಟಿದ್ದಾರೆ. ಈ ಪ್ರಕಾರವಾಗಿ ಆವರ್ಗಂ ಅವರು ತಮ್ಮ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ೩೦ ಪರ್ಸೆಂಟ್ ಕೂಲಿ ಕೊಡಬೇಕು ಎನ್ನುವ ಅಭಿಪ್ರಾಯ ಇದೆ. ಕೂಲಿ ಕೊಡಲಿಕ್ಕೆ ನನ್ನ ಅಭ್ಯಂತರವಿಲ್ಲ. ಈ ದೃಷ್ಟಿಯಿಂದ ಮಾಡಿದ ಸಲಹೆಗಳು ಯೋಗ್ಯ ಇದೆಯೆಂದು ನಾನು ಭಾವಿಸುತ್ತೇನೆ.

Mr. Deputy Speaker in the Chair

ಶ್ರೀ ಕಾಗೋಡು ತಿಮ್ಮಪ್ಪ :—ತಾವು ಜನಕ್ಕೆ ಉದ್ಯೋಗ ಕೊಟ್ಟಿದ್ದಾರೆ, ಹಣ ಖರ್ಚಾಗಿದೆ ಎಂದು ಹೇಳಿದ್ದೀರಿ, ತಮ್ಮ ದೃಷ್ಟಿಯಿಂದ ಎಷ್ಟು ಜನಕ್ಕೆ ಉದ್ಯೋಗ ಕೊಟ್ಟಿದ್ದಾರೆ ? ಉದ್ಯೋಗಕ್ಕಾಗಿ ಖರ್ಚು ಮಾಡಿರತಕ್ಕ ಹಣ ವ್ಯವಸ್ಥಿತವಾಗಿ ಸಾಕಷ್ಟು ಪ್ರಮಾಣದಲ್ಲಿ ಆಗಿದೆ ಎಂದು ಹೇಳುತ್ತೀರಾ ?

ಶ್ರೀ ಪಿ. ಎಂ. ಭಂಗಿ :— ಸರ್ಕಾರದವರು ಎಂಪ್ಲಾಯ್‌ಮೆಂಟನ್ನು ಒದಗಿಸಿದ್ದಾರೆ. ಇರಿಗೇಷನ್ ಬಾವಿಗಳ ಬಗ್ಗೆ ಸರ್ಕಾರದವರು ಎಷ್ಟು ಬೇಕೋ ಅಷ್ಟು ಖರ್ಚು ಮಾಡಿದೆ. ಆದಾಗ್ಯೂ ಕೂಡ ಇರಿಗೇಷನ್ ಬಾವಿಗಳ ಬಗ್ಗೆ ನಮ್ಮ ತಾಲ್ಲೂಕಿನ ನೆರೆಹೊರೆಯ ತಾಲ್ಲೂಕಿನಲ್ಲಿ ಕೆಲಸಗಳು ಪ್ರಾರಂಭವಾಗಿವೆ. ಡ್ರಿಂಕಿಂಗ್ ವಾಟರ್ ವೆಲ್ಸ್ ತೆಗೆಯುವ ದೃಷ್ಟಿಯಿಂದ ನಮ್ಮ ತಾಲ್ಲೂಕಿನಲ್ಲಿ ರಿಗ್ಸ್‌ಗಳನ್ನು ಕೊಟ್ಟಿದ್ದಾರೆ, ಭಾವಿ ತೆಗೆಯುವ ಕೆಲಸ ಪ್ರಾರಂಭವಾಗಿದೆ. ರಿಲೀಫ್ ಆಫ್ ಫಂಡ್ಸ್ ಸರ್ಕಾರದವರು ಸ್ಕೇರ್ಸಿಟಿ ವಿಷಯದ ಬಗ್ಗೆ ಖರ್ಚು ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಸಪ್ಲೈ ಆಫ್ ಫುಡ್‌ಗ್ರೇನ್ಸ್ ನಮ್ಮ ತಾಲ್ಲೂಕಿನ ಮಟ್ಟಿಗೆ ಮಾತನಾಡಬೇಕಾದರೆ, ಸಾಕಷ್ಟು ಫುಡ್ ಗ್ರೇನ್ಸ್, ಗೋಧಿ ಅಕ್ಕಿಯನ್ನು ಸರ್ಕಾರದವರು ಕೊಟ್ಟಿದ್ದಾರೆ. ಗೋಡೌನ್‌ಗಳಲ್ಲಿ ಜಮಖಂಡಿ, ಬನಹಟ್ಟಿ, ರಬಕವಿ ಜನಗಳಿಗೆ ಫುಡ್ ಗ್ರೇನ್ಸ್ ಒದಗಿಸುವುದಕ್ಕೆ ಸಾಕಷ್ಟು ವ್ಯವಸ್ಥೆ ಮಾಡಿದ್ದಾರೆ. ಆದರೆ ಜನಗಳ ಕೈಯಲ್ಲಿ ಹಣ ಇಲ್ಲ. ಈ ದೃಷ್ಟಿಯಿಂದ ಇನ್ನೂ ಹೆಚ್ಚಾಗಿ ಸರ್ಕಾರದವರು ಕೂಲಿ ಕೆಲಸ ಕೊಟ್ಟು ಹಣ ಒದಗಿಸಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

3-00 P.M.

ಲಿಫ್ಟ್ ಇರಿಗೇಷನ್ ಸ್ಕೀಂ ಬಗ್ಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂ ಒಂದು ತಿಂಗಳಲ್ಲಿ ಪ್ರಾರಂಭವಾಗುವುದು, ಕಡಕೋಳ ಎಂಬ ಹಳ್ಳಿಯಲ್ಲಿ ಅದರಿಂದ ಸಾವಿರಾರು ಎಕರೆಗೆ ನೀರೊದಗುವುದು. ಉಳಿದ ಕಡೆ ಕೃಷ್ಣ ಬಲದಂಡೆಯಲ್ಲೂ ಲಿಫ್ಟ್ ಇರಿಗೇಷನ್ ಸ್ಕೀಂ ಮಾಡಬೇಕೆಂದು ಸೂಚಿಸಿದ್ದೇವೆ. ಸರಕಾರ ಇದನ್ನು ಗಮನಿಸಬೇಕು. ಜಮಖಂಡಿ ತಾಲ್ಲೂಕಿನಲ್ಲಿ ೪ ಸ್ಕೀಮುಗಳನ್ನು ಮಂಜೂರು ಮಾಡಿದ್ದಾರೆ. ಅದೇ ಪ್ರಕಾರ ಡಿಸೆಂಬರ್ ಕೊನೆಯಲ್ಲಿ ಈ ಸ್ಕೀಂ ಪ್ರಾರಂಭಿಸಬೇಕಾಗುತ್ತದೆ. ಬೊಂಬಾಯಿ ಮುಂತಾದ ಕಡೆಗಳಲ್ಲಿ ಪಂಪುಸೆಟ್ಟುಗಳು ಸಿಕ್ಕದೆಹೋದ ಸಂದರ್ಭವನ್ನು ಗಮನಕ್ಕೆ ತಂದು ಈ ಸ್ಕೀಮಿನ ವಿಚಾರದಲ್ಲಿ ಪಿ.ಡಬ್ಲ್ಯು. ಮಂತ್ರಿಗಳಿಗೆ ಸಲಹೆ ನೀಡಿದ್ದಾರೆ. ಈ ಬಗ್ಗೆ ಸ್ಥಳ ಪರೀಕ್ಷೆಯಾಗಿದೆ, ಸರ್ವೆಯಾಗಿದೆ. ಮುಂದೆ ಪಿ.ಡಬ್ಲ್ಯು. ಇಲಾಖೆ ಮೂಲಕ ಫೌಂಡೇಷನ್ ಹಾಕಿ ನೀರಿಗೆ ವ್ಯವಸ್ಥೆ ಮಾಡಲಾಗುವುದು. ಮುಂದೆ ಉಳಿದ ಕಡೆಗಳಲ್ಲಿ ೬ ಪಂಪುಸೆಟ್ಟು ಮತ್ತು ಮೋಟಾರುಗಳನ್ನು ಇನಸ್ಟಾಲ್ ಮಾಡಿ ಇರಿಗೇಷನ್ನಿಗೆ ಮತ್ತು ಜನರಿಗೆ ಕುಡಿಯುವ ನೀರಿಗೆ ಸೌಲಭ್ಯ ಸರಕಾರದವರು ಮಾಡುವವರಿದ್ದಾರೆ. ಬೇರೆ ಬೇರೆ ಮಂತ್ರಿಗಳು ಬೇರೆ ಬೇರೆ ಜಿಲ್ಲೆಗಳಿಗೆ ಭೇಟಿ ನೀಡಿ ಬೇರೆ ಬೇರೆ ವಚನ ಕೊಟ್ಟಿದ್ದಾರೆ, ಅದನ್ನು ನಡೆಸಿಲ್ಲ ಎಂಬುದು ಸತ್ಯಕ್ಕೆ ದೂರವಾದ ಮಾತು. ಆ ದೃಷ್ಟಿಯಿಂದ ಹೇಳಬಯಸುವುದು ಸರಕಾರ ಸಾಕಷ್ಟು ಇಂದಿನವರೆಗೆ ಮಾಡುತ್ತಿದೆ, ಇನ್ನುಮುಂದೆ ಸಹ ಮಾಡುವುದಿದೆ ; ಸಾಕಷ್ಟು ಕಾರ್ಯ ಮಾಡಿ ಜನರಿಗೆ ಅನುಕೂಲ ಮಾಡುವುದಿದೆ. ಆವರ್ಗಂರವರೂ ಸಹ ಇದನ್ನು ತಮ್ಮ ವರದಿಯಲ್ಲಿ ಸೂಚಿಸಿದ್ದಾರೆ. ಅವರು ಮುಂಬಯಿ ಮುಂತಾದ ಕಡೆಗಳಲ್ಲಿರುವಂತೆ ಮೈಸೂರಿನಲ್ಲೂ ಫ್ಯಾಮಿನ ಕೋಡ್ ಜಾರಿಗೆ ತರಬೇಕೆಂದು ಹೇಳಿರುವುದು ಯೋಗ್ಯವಾಗಿದೆ. ಇದೇ ಪ್ರಕಾರ ಕ್ಷಾಮ ಪ್ರದೇಶದಲ್ಲಿ ಮುದುಕರಿಗೆ, ಡಿಸಏಬಲ್ಡ್ ಜನರಿಗೆ ಗಂಜಿ ಕೇಂದ್ರ ತೆರೆಯಬೇಕೆಂದು ತಿಳಿಸಿದಂತೆ ತೆರದು ಗಂಜಿಯನ್ನು ಮುಫತ್ತಾಗಿ ಕೊಡಲು ಏರ್ಪಾಡು ಮಾಡಲು ಸರ್ಕ್ಯುಲರ್ ಕಳಿಸಿದ್ದಾರೆ. ಅದರ ಪ್ರಕಾರ ಶೇಕಡ ೫೦ ಜನರಿಗೆ ಕೊಟ್ಟು ಉಳಿದಿರುವುದನ್ನು ಸಹ ಹಂಚಬೇಕು ಎಂದು ಆರ್ಡರು ಮಾಡಿದ್ದಾರೆ. ಜನರು ವಾಲಂಟರಿಯಾಗಿ ಅದಕ್ಕಾಗಿ ಮುಂದೆ ಬಂದು ಸರಕಾರದ ಸೌಲಭ್ಯ ಪಡೆಯಬೇಕು, ಇದರ ಬಗ್ಗೆ ಆವರ್ಗಂರವರ ಸೂಚನೆ ಸರಿಯಾಗಿದೆ. ಅವರು ತಮ್ಮ ವರದಿಯ ೮೭-೮೮ನೇ ಪುಟಗಳಲ್ಲಿ ಕೊಟ್ಟಿರುವ ೧೦ ಸಲಹೆಗಳು ಯೋಗ್ಯವಾಗಿವೆ, ಅವನ್ನು ಕಾರ್ಯಾಚರಣೆಗೆ ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

೭೭ನೇ ಪುಟದಲ್ಲಿ ಹಾಜರಿ ಸಿಸ್ಟಂ ಜಾರಿಗೆ ತರಬೇಕೆಂದು ವರದಿ ಇದೆ. ಇದು ಯೋಗ್ಯವಾದುದು. ದೇಶಕಾಲದಲ್ಲಿ ಜನತೆಗೆ ಜೀವನ ಮಾಡಲು ಸಾಮರ್ಥ್ಯವಿಲ್ಲ, ಅಳತೆ ತೆಗೆದುಕೊಂಡು ಕೂಲಿ ಕೊಟ್ಟರೆ ದಿನಕ್ಕೆ ಒಂದು ರೂಪಾಯಿಕೂಡ ಬೀಳುವುದಿಲ್ಲ. ಇದು ಸರಿಯಲ್ಲ ಎಂದು ಅವರು ವರದಿಯಲ್ಲಿ ಹೇಳಿರುವುದು ಯುಕ್ತವಾಗಿದೆ. ಕೆಲಸ ಎಷ್ಟು ಗಂಟೆ ಮಾಡುವವರು ಎಂಬುದನ್ನು ಲೆಕ್ಕ ಹಾಕಿ ನಾಮಿನಲ್ ರೋಲ್ ಇಟ್ಟು ಕೂಲಿ ಕೊಡಬೇಕೆಂದು ತಿಳಿಸಿರುವಂತೆ ವ್ಯವಸ್ಥೆ ಮಾಡಬೇಕು.

ಕಾಲೇಜು ಫೀ ವಿಷಯದಲ್ಲಿ ಆರ್ಮುಗಂರವರು ಸಲಹೆ ಮಾಡಿದ್ದಾರೆ. ಅದು ಯೋಗ್ಯವಾಗಿದೆ. ಆ ಪ್ರಕಾರವಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ಫೀ ವಿಷಯದಲ್ಲಿ ರಿಯಾಯಿತಿ ಕೊಡಬೇಕೆಂದು ಬೇಡುತ್ತೇನೆ.

ಕುಡಿಯುವ ನೀರಿನ ವಿಷಯದಲ್ಲಿ ಸರಕಾರ ತಕ್ಕ ವ್ಯವಸ್ಥೆ ಮಾಡಲು ಪ್ರಯತ್ನ ಮಾಡಿದೆ. ಆದರೆ ಆ ಪ್ರಯತ್ನ ಇನ್ನೂವರೆಗೆ ಸಾಕಷ್ಟಾಗಿಲ್ಲ. ಇಂದು ಕೃಷ್ಣಾ ಹೊಳೆ ನೀರು ಹರಿಯುವುದು ಬಂದಾಗಿದೆ, ಜಮಖಂಡಿ, ರಬಕವಿ, ಬನಹಟ್ಟಿ ಮುಂತಾದ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಅಭಾವವಿದೆ. ಅಲ್ಲಿ ಜನವರಿಯಿಂದ ಕುಡಿಯುವ ನೀರಿನ ಅಭಾವ ಬಹಳವಾಗುವುದು. ಇದನ್ನು ಗಮನಿಸಿ ಈ ಭಾಗದಲ್ಲಿ ಇರುವ ಜಮಖಂಡಿ, ಬನಹಟ್ಟಿ, ರಬಕವಿ ಮುಂತಾದ ಗ್ರಾಮಗಳಲ್ಲಿ ರಿಗ್ಸ್‌ನಿಂದ ಬಾವಿ ತೆಗೆಸಿ ಕುಡಿಯುವ ನೀರಿನ ಏರ್ಪಾಡನ್ನು ಕೂಡಲೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಸರಕಾರದವರು ತಮಗೆ ಶಕ್ಯವಿರುವ ಪ್ರಯತ್ನವನ್ನೆಲ್ಲಾ ಮಾಡಿದ್ದಾರೆ, ಇನ್ನೂ ಹೆಚ್ಚು ಪ್ರಯತ್ನ ಮಾಡುವುದು ಅವಶ್ಯವಿದೆ. ಸ್ಟಡಿ ಟೀಂ ಎರಡನೆಯದು ಕೇಂದ್ರ ಸರಕಾರದ ಕಡೆಯಿಂದ ಬರುವುದಿದೆ. ಅದು ಬರಗಾಲ ಪೀಡಿತ ಪ್ರದೇಶಗಳನ್ನು ಭೇಟಿ ಮಾಡುವುದು. ಈಗ ನಮ್ಮ ಮುಂದಿರುವ ವರದಿಯಲ್ಲಿ ಸಲಹೆ ಮಾಡಿರುವ ಪ್ರಕಾರ ಕೇಂದ್ರ ಸರಕಾರ ಈಗ ಕೊಟ್ಟಿರುವ ಹಣ ಸಾಲುವುದಿಲ್ಲ, ಇನ್ನೂ ಮಾಡಬೇಕಾದ ಬಹಳ ಕೆಲಸವಿದೆ, ಎರಡನೆಯ ಟೀಂ ಬಂದ ಕಾಲದಲ್ಲಿ ಸರಕಾರದವರು ಆರ್ಮುಗಂರವರ ಸಲಹೆ ಪ್ರಕಾರ ೫೦ ಕೋಟಿ ರೂಪಾಯಿಗಳನ್ನಾದರೂ ಬೇಡಬೇಕು ಎಂದು ಸಲಹೆ ಮಾಡುತ್ತೇನೆ. ಕ್ಷಾಮ ಪೀಡಿತವಾದ ೪ ಜಿಲ್ಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ಬಿಜಾಪುರ ಜಿಲ್ಲೆಯಲ್ಲಿ ಇಂಡಿ, ಸಿಂದಗಿ, ಜಮಖಂಡಿ ಮುಂತಾದ ತಾಲ್ಲೂಕುಗಳಲ್ಲಿ ಹೆಚ್ಚು ಗಮನ ಕೊಟ್ಟು ಹೆಚ್ಚು ಪರಿಹಾರ ಒದಗಿಸಬೇಕು ಎಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ). —ಮಾನ್ಯ ಅಧ್ಯಕ್ಷರೇ, ಬರಗಾಲ ಪರಿಸ್ಥಿತಿಯನ್ನು ಖುದ್ದು ಪರಿಶೀಲನೆ ನಡೆಸಿದಮೇಲೆ ಈ ಸದನದಲ್ಲಿ ಒಂದು ಚರ್ಚೆಯಾಗಬೇಕೆಂಬ ಉದ್ದೇಶದಿಂದ ವಿರೋಧ ಪಕ್ಷದ ಎಲ್ಲಾ ಸದಸ್ಯರೂ ಆಗ್ರಹ ಮಾಡಿದ ಮೇಲೆ ಒಂದು ತೀರ್ಮಾನಮಾಡಿ ಮಾನ್ಯ ಸದಸ್ಯರಾದ ಆರ್ಮುಗಂ ರವರನ್ನು ಏಕ ಸದಸ್ಯ ಆಯೋಗವಾಗಿ ಕಳಿಸಿ ಅವರಿಂದ ವರದಿ ಬಂದು ಚರ್ಚೆ ಮಾಡುತ್ತಿದ್ದೇವೆ. ಶ್ರೀಮಾನ್ ಆರ್ಮುಗಂರವರ ವರದಿ ಪ್ರಕಾರ ಅಲ್ಲಿರುವ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. ಅಷ್ಟೇ ಅಲ್ಲ, ಇದಕ್ಕೆ ಮುಂಚೆ ನಾವು ಕೂಡ ಗುಲ್ಬರ್ಗ, ಬಿದರೆ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ನೋಡಿದ್ದೇವೆ. ನೋಡಿ ಬಂದು ನಾವು ಕೂಡ ನಮ್ಮ ಅಭಿಪ್ರಾಯವನ್ನು ಹೇಳಿದ್ದೇವೆ. ನಮ್ಮ ಅಭಿಪ್ರಾಯವನ್ನು ಶ್ರೀಮಾನ ಆರ್ಮುಗಂರವರು ಎತ್ತಿಹಿಡಿದಿದ್ದಾರೆ. ಅವರು ದೀರ್ಘವಾಗಿ ಪ್ರವಾಸ ಮಾಡಿ ಹೆಚ್ಚು ವಿವರ ಸಂಗ್ರಹಿಸಿ ಆ ಆಧಾರದ ಮೇಲೆ ಅತ್ಯಂತ ಉಪಯುಕ್ತವಾದ ಸಲಹೆ ನೀಡಿದ್ದಾರೆ. ಅಷ್ಟೇ ಅಲ್ಲ, ಈ ಸಮಸ್ಯೆಯ ಒಳಹೊಕ್ಕು ನೋಡಿದಂಥ ಜವಾಬ್ದಾರಿ ಆರ್ಮುಗಂರವರಿಗೆ ಸೇರುವುದು. ಅವರಿಗೆ ಸಿಕ್ಕಿದ ಅಲ್ಪ ಸಮಯದಲ್ಲಿ ವಿಶೇಷವಾಗಿ ಅಧ್ಯಯನ ಮಾಡಿ ಇದಕ್ಕೆ ಪರಿಹಾರವನ್ನು ಕೂಡ ಸಮರ್ಪಕವಾಗಿ ಅವರು ಸೂಚಿಸಿದ್ದಾರೆ. ಇದನ್ನು ಆಧಾರವಾಗಿಟ್ಟುಕೊಂಡು ಯಾವುದೇ ಪಕ್ಷಪಂಗಡದ ಬೇಧವಿಲ್ಲದೆ, ಒಂದು ವಿಶಿಷ್ಟವಾದ ಕಾರ್ಯಕ್ರಮವನ್ನು ರೂಪಿಸುವುದು ಎಲ್ಲಾ ಜನರ ಕರ್ತವ್ಯವಾಗಿದೆ. ನಮ್ಮ ಎಲ್ಲಾ ಸಂಪನ್ಮೂಲಗಳನ್ನೂ ಕ್ರೋಢೀಕರಿಸಿ ಅದರ ಜೊತೆಗೆ ಕೇಂದ್ರ ಸರ್ಕಾರದಿಂದ ದೊರೆಯತಕ್ಕ ಸಹಾಯವನ್ನೂ ಸೇರಿಸಿಕೊಂಡು ಈ ಕೆಲಸವನ್ನು ಒಂದು ವಾರ್ ಫೂಟಿಂಗ್ ಮೇಲೆ ನಡೆಸಿದರೆ ಆಗ ನಾವೇನಾದರೂ ಅಲ್ಲಿ ಸಾಯಬಹುದಾದ ಜನರನ್ನು ಹಾಗೂ ಜಾನುವಾರುಗಳನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗಬಹುದೆಂದು ನನಗೆ ಅನಿಸುತ್ತಿದೆ. ಅಲ್ಲಿರತಕ್ಕ ಜಾನುವಾರುಗಳಲ್ಲಿ ಈಗಾಗಲೇ ಅರ್ಧಭಾಗ ನಶಿಸಿಹೋಗಿರುತ್ತವೆ. ಇನ್ನುಳಿದ ಅರ್ಧ ಭಾಗವನ್ನಾದರೂ ನಾವು ರಕ್ಷಣೆ ಮಾಡಬಹುದೆಂದು ನನಗೆ ಅನಿಸುತ್ತಿದೆ. ಹಾಗೆ ಮಾಡದೆ ನಾವು ಸುಮ್ಮನೆ ಈ ಭರವಸೆಗಳನ್ನೇ ಕೊಡುತ್ತಾ ಹೊರಟರೆ ನಾವು ಅಲ್ಲಿ ಜನರನ್ನು ಖಂಡಿತ ಉಳಿಸುವುದಕ್ಕಾಗುವುದಿಲ್ಲ ; ಪಶುಸಂಪತ್ತನ್ನೂ ಕೂಡ ಉಳಿಸುವುದಕ್ಕಾಗುವುದಿಲ್ಲ. ಆದರೆ ಇಲ್ಲಿ ಒಂದು ಬಹಳ ಅತ್ಯಂತ ವಿಷಾದಕರವಾದ ಸಂಗತಿ ಏನೆಂದರೆ ಅಲ್ಲಿ ಈ ಅಭಾವ ಪರಿಸ್ಥಿತಿ ಇನ್ನೂ ಎಷ್ಟು ದಿನಗಳವರೆಗೆ ಇರಬಹುದು ? ಅಲ್ಲಿ ಪ್ರತ್ಯಕ್ಷವಾಗಿ ತೊಂದರೆಗೆ ಒಳಗಾಗಿರತಕ್ಕ ಜನ ಸಂಖ್ಯೆ ಎಷ್ಟು ? ಅಲ್ಲಿ ಎಷ್ಟು ಜನರಿಗೆ ತ್ವರಿತವಾಗಿ ಕೆಲಸಗಳನ್ನು ಒದಗಿಸಬೇಕಾಗಿದೆ ? ಎಷ್ಟು ಜಾನುವಾರುಗಳಿಗೆ,

(ಶ್ರೀ ಕಾಗೋಡು ತಿಮ್ಮಪ್ಪ)

ಎಲ್ಲಿಯತನಕ ಮೇವನ್ನು ಒದಗಿಸಬೇಕಾಗುತ್ತದೆ ಅನ್ನತಕ್ಕ ಈ ಒಂದನ್ನೂ ಸರ್ಕಾರದವರು ಇಲ್ಲಿಯವರೆಗಾದರೂ ಲೆಕ್ಕ ಹಾಕದೆ ಇರುವುದು ಅತ್ಯಂತ ಶೋಚನೀಯವಾದ ವಿಚಾರ. ನಾವು ಹಿಂದೆ ಅಲ್ಲಿ ಕೆಲವು ಜಿಲ್ಲೆಗಳನ್ನು ನೋಡುವುದಕ್ಕೆ ಹೋಗಿದ್ದ ಕಾಲದಲ್ಲಿ ಅಲ್ಲಿ ಜಿಲ್ಲಾಧಿಕಾರಿಗಳನ್ನು ಕೇಳಿದಾಗ ಅವರು ಬರುವ ಮಾರ್ಚಿಯ ತನಕ ಈ ಅನುಕೂಲಗಳನ್ನು ಒದಗಿಸಿದರೆ ಸಾಕು. ಆಮೇಲೆ ಅಲ್ಲಿಗೆ ಆ ಸ್ವರ್ಗವೇ ಇಳಿದು ಬರುತ್ತದೆ ಅನ್ನತಕ್ಕ ರೀತಿಯಲ್ಲಿ ಮಾತನಾಡಿದರು. ಆದರೆ ಈ ದಿವಸ ಅಲ್ಲಿ ಖಾರೀಫ್ ಬೆಳೆಯೂ ಇಲ್ಲ, ರಾಬೀ ಬೆಳೆಯೂ ಇಲ್ಲ. ಒಂದುವೇಳೆ ಮುಂದೆ ಮಳೆ ಬರುವ ಜೂನ್—ಜುಲೈ ತಿಂಗಳಲ್ಲಿ ಬಂದರೂ ಅವರು ಭೂಮಿಯಲ್ಲಿ ಬೆಳೆಯನ್ನು ಇಡಬಹುದು. ಆದರೆ ಆ ಬೆಳೆ ಅವರ ಕೈ ಸೇರಬೇಕಾದರೆ ಮತ್ತೆ ನವಂಬರಿಗೇ. ಅಲ್ಲಿಯತನಕ ನಾವು ಆ ಜನರಿಗೆ ಆಹಾರ ಮತ್ತು ಕೆಲಸಗಳನ್ನು ಒದಗಿಸದಿದ್ದರೆ ಅವರಿಗೆ ಬೇರೆ ಗತ್ಯಂತರವೇ ಇಲ್ಲ. ಆದರೆ ಮುಂದಿನ ಜೂನ್—ಜುಲೈ ತಿಂಗಳಲ್ಲಿ ಮಳೆಯಾದರೆ ಅಲ್ಲಲ್ಲೇ ಕಾಡುಗಳಲ್ಲಿ ಜಾನುವಾರುಗಳಿಗೆ ಸ್ವಲ್ಪ ಹುಲ್ಲು ಬೀಳಬಹುದು. ಆದುದರಿಂದ ಅವುಗಳಿಗೆ ಬರುವ ಜೂನ್ ಜುಲೈ ತಿಂಗಳವರೆಗಾದರೂ ಮೇವನ್ನು ಒದಗಿಸಲೇ ಬೇಕು. ಜನರಿಗೆ ಇನ್ನೂ ೮–೯ ತಿಂಗಳ ಕಾಲ ಉದ್ಯೋಗ ಹಾಗೂ ಹೊಟ್ಟೆಗೆ ಅನ್ನ ಎರಡನ್ನೂ ಒದಗಿಸಬೇಕಾಗಿದೆ. ಇಷ್ಟೂ ಸರ್ಕಾರದವರ ಆದ್ಯ ಕರ್ತವ್ಯ. ಅದನ್ನು ದೂರದೃಷ್ಟಿಯಿಂದ ಆಸ್ಸ್ ಮಾಡತಕ್ಕ ಮನಸ್ಸು ಸರ್ಕಾರದವರಿಗೆ ಬಾರದಿದ್ದುದು ಬಹಳ ವಿಷಾದಕರ. ಇಷ್ಟೊಂದು ಸರ್ಕಾರಕ್ಕೆ ಅಸಡ್ಡೆ–ಅಲಕ್ಷ್ಯ ಇರಬಾರದು, ಇಂಥ ಸರ್ಕಾರ ಜನರಿಗೆ ಏನು ಭರವಸೆ ಕೊಡಬಲ್ಲದು ? ಈ ಸಮಸ್ಯೆಯನ್ನು ಅರಿತಿರತಕ್ಕ ಜನರು ಇತ್ತ ಕಡೆಯಲ್ಲೂ ಇದ್ದಾರೆ, ಅತ್ತ ಕಡೆಯಲ್ಲೂ ಇದ್ದಾರೆ. ಆದರೆ ಅತ್ತ ಕಡೆ ಇರತಕ್ಕವರು ಪಾರ್ಟಿ ಶಿಸ್ತಿಗೆ ಕಟ್ಟು ಬಿದ್ದು ಮಾತನಾಡುತ್ತಿಲ್ಲ. ಈ ವಿಚಾರದಲ್ಲಿ ಶ್ರೀ ಆರ್ಮುಗಂ ಅವರು ತಮ್ಮ ವರದಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಈ ದಿವಸ ಅಲ್ಲಿ ಏನೊಂದು ಭೀಕರ ಪರಿಸ್ಥಿತಿ ಉಂಟಾಗಿದೆ ಅದು ಏಕಾ ಏಕಿ ಒಂದೆರಡು ದಿನಗಳಲ್ಲಿ ಉಂಟಾದ್ದಲ್ಲ. ಆ ಭಾಗದಲ್ಲಿ ಮಳೆ ಕಾಲ ಕಾಲಕ್ಕೆ ಸರಿಯಾಗಿ ಬೀಳುತ್ತಿಲ್ಲ ಎಂಬುದು ಸರ್ಕಾರದವರಿಗೆ ಬಹಳ ವರ್ಷಗಳಿಂದಲೂ ತಿಳಿದಿರತಕ್ಕಂಥ ವಿಷಯ. ಅಲ್ಲದೆ ಬೆಳಗಾಂ, ಗುಲ್ಬರ್ಗ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ನೀರಾವರಿ ಪ್ರಮಾಣ ಬಹಳ ಕಡಮೆ ಇದೆ. ಆ ಭಾಗದಲ್ಲಿ ಭೂಮಿಯ ಆಳದಲ್ಲಿರತಕ್ಕ ನೀರನ್ನು ತೆಗೆದು ಬೆಳೆಗೆ ಉಪಯೋಗ ಮಾಡತಕ್ಕ ಕೆಲಸದಲ್ಲಿ ಸರ್ಕಾರದವರು ಹಿಂದಿನಿಂದಲೂ ಬಹಳ ಅಶ್ರದ್ಧೆ ಮಾಡಿಕೊಂಡೇ ಬಂದಿದ್ದಾರೆ. ಈ ವಿಚಾರವನ್ನೂ ಕೂಡ ಶ್ರೀ ಆರ್ಮುಗಂ ಅವರು ತಮ್ಮ ವರದಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಹಿಂದೆ ಆ ಪ್ರದೇಶ ಹೈದ್ರಾಬಾದ್ ಸರ್ಕಾರದಲ್ಲಿದ್ದಾಗ ಆ ಸರ್ಕಾರ ಅಲ್ಲಿ ಎಲ್ಲೆಲ್ಲಿ ಜಲ ಪ್ರಮಾಣ ಎಷ್ಟೆಷ್ಟಿದೆ ಎಂಬುದನ್ನು ಕಂಡು ಹಿಡಿಯುವುದಕ್ಕಾಗಿ ಜಿಯಲಾಜಿಕಲ್ ಇಲಾಖೆಯ ಒಂದು ತಜ್ಞರ ಸಮಿತಿಯನ್ನು ಲಿಂಗಸೂಗೂರಿನಲ್ಲಿ ಇಟ್ಟಿದ್ದರಂತೆ. ಆದರೆ ಆ ಪ್ರದೇಶ ಇತ್ತೀಚೆಗೆ ಮೈಸೂರು ರಾಜ್ಯಕ್ಕೆ ಸೇರಿದ ಮೇಲೆ ಆ ತಜ್ಞರ ಸಮಿತಿಯನ್ನೂ ಕೂಡ ತೆಗೆದು ಹಾಕಿದೆ. ಇಂಥ ಒಂದು ಅಶ್ರದ್ಧೆಯ ಮನೋಭಾವ ಇರಬಾರದು. ಇದರಿಂದಲೇ ಈ ದಿವಸ ಅಲ್ಲಿಯ ಪರಿಸ್ಥಿತಿ ಇಷ್ಟು ಗಂಭೀರವಾಗುವುದಕ್ಕೆ ಕಾರಣವಾಗಿದೆ. ಅಲ್ಲದೆ ಅಲ್ಲಿ ಆ ನೀರಾವರಿ ಕೆಲಸಗಳೂ ಕೂಡ ಅಂದರೆ ಅಪ್ಪರ್ ಕೃಷ್ಣಾ, ಮಲಪ್ರಭಾ ಮತ್ತು ನಾರಾಯಣಪುರ ಪ್ರಾಜೆಕ್ಟುಗಳ ಕೆಲಸಕ್ಕೆ ಹಿಂದಿದ್ದ ಶ್ರೀ ವೀರೇಂದ್ರಪಾಟೀಲರ ಸರ್ಕಾರ ಕೂಡ ಹೆಚ್ಚಿನ ನಿಗಾ ಕೊಟ್ಟಿಲ್ಲ. ಆದರೆ ಹಿಂದೆ ಇಲ್ಲಿ ಜನರು ಆ ಶ್ರೀ ವೀರೇಂದ್ರಪಾಟೀಲರು ತಮ್ಮ ಭಾಗದಲ್ಲಿ ಬಹಳ ನೀರಾವರಿ ಕೆಲಸಗಳನ್ನು ನಡೆಸಿದ್ದಾರೆ ಎಂದು ಹೇಳುತ್ತಿದ್ದರು. ಆದರೆ ನಾವು ಅಲ್ಲಿ ಹೋಗಿದ್ದಾಗ ನೋಡಿದ್ದರಲ್ಲಿ ಅದೆಲ್ಲಾ ಸುಳ್ಳು ಎಂಬುದಾಗಿ ಕಂಡು ಬಂದಿತು. ಆದರೆ ಶ್ರೀ ವೀರೇಂದ್ರ ಪಾಟೀಲರೂ ಕೂಡ ಅಲ್ಲಿ ಸ್ವಲ್ಪ ಕೆಲಸಗಳನ್ನು ನಡೆಸಿದ್ದಾರೆ—ಅಂದರೆ ಕೆಲವು ಟಾರ್ ರಸ್ತೆಗಳನ್ನು ಮಾಡಿಸಿದ್ದಾರೆ, ಕೆಲವು ಟಿ.ಬಿ. ಗಳನ್ನು ಕಟ್ಟಿಸಿದ್ದಾರೆ. ಆದರೆ ಯಾವುದರಿಂದ ಪ್ರಜೆಗಳಿಗೆ ಉತ್ಪತ್ತಿ ಬರುವುದಕ್ಕೆ ಅವಕಾಶವಿತ್ತೋ ಅಂಥ ಬಾಬುಗಳಿಗೆ ಹಣವನ್ನು ಖರ್ಚು ಮಾಡದೆ ನಾನ್‌ಪ್ರೊಡಕ್ಟೀವ್ ಕೆಲಸಗಳಿಗೆ ಹಣವನು ವೆಚ ಮಾಡಿದ್ದಾರೆ. ಕಳೆದ ೨೫ ವರ್ಷಗಳಿಂದ ಹಿಂದಿದ್ದ ಸರ್ಕಾರಗಳೆಲ್ಲಾ ವರ್ಷಕ್ಕೆ ಶೇ: ಐದರಂತೆ ಈ ಸಮಸ್ಯೆಯನ್ನು ಬಗೆಹರಿಸಿಕೊಂಡು ಬಂದಿದ್ದರೆ ಈ ದಿವಸ ಅಲ್ಲಿ ಇಷ್ಟು ಭೀಕರ ಪರಿಣಾಮಗಳಾಗುವುದಕ್ಕೆ ಖಂಡಿತ ಅವಕಾಶವಿರುತ್ತಿರಲಿಲ್ಲ. ಅಲ್ಲಿನ ಭೂಮಿಯಾದರೋ ಬಹಳ ಫಲವತ್ತಾದ ಭೂಮಿ. ನೀರನ್ನು ಒದಗಿಸಿದ್ದರೆ ದೇಶಕ್ಕೆ ಕ್ಷಾಮ ಎಂಬ ಮಾತೆಲ್ಲಿತ್ತು? ದೇಶದಲ್ಲಿ ಮಳೆಬಾರದಿದ್ದರೆ ಕ್ಷಾಮ ಬರಬೇಕೆ? ಇದನ್ನು ನಾವೇ ತಂದುಕೊಂಡಂತೆ ಆಗಿದೆ. ಇದೇ ವಿಚಾರದಲ್ಲಿ ಶ್ರೀ ಆರುಗಂ ಅವರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಪುಟ ೭೧ ರಲ್ಲಿ ಹೀಗೆ ಹೇಳಿದ್ದಾರೆ :—

ಅಧ್ಯಕ್ಷರ ಅನುಮತಿ ಪಡೆದು ಅದನ್ನು ಓದುತ್ತೇನೆ,

"In the result, while the neighbouring States availed of the facilities provided by the Government of India, to make detailed surveys of the ground water potential in such districts as Ananthapur in Andhra Pradesh and Ramnad in Madras, Mysore did little beyond concentrating attention on the water needs of the over-urbanised City of Bangalore, more to cater to the real estate speculators among the wealthy than to the starving peasantry of the arid districts."

ಈ ಮಾತನ್ನು ಬಹಳ ಸೊಗಸಾಗಿ ಹೇಳಿದ್ದಾರೆ. ಪರಿಸ್ಥಿತಿಯನ್ನು ತಿಳಿದು ಕಳೆದ ೨೫ ವರ್ಷಗಳಲ್ಲಿ ಆ ಭಾಗದ ಜಿಲ್ಲೆಗಳು ನಮ್ಮ ರಾಜ್ಯಕ್ಕೆ ಬಂದಮೇಲೆ ಅಲ್ಲಿ ಮಾಡಿರುವ ಕೆಲಸಗಳು ಏನೇನು ಪ್ರಯೋಜನವಿಲ್ಲ. ಅಲ್ಲಿನ ಸರ್ಕಾರಗಳು ಬಹಳವಾಗಿ ಕೇವಲ ದೊಡ್ಡ ಬಂಗಲೆಗಳನ್ನು ಕಟ್ಟುವುದರಲ್ಲಿ, ಟಾರ್ ರಸ್ತೆಗಳನ್ನು ಮಾಡುವುದರಲ್ಲಿ, ನಗರಗಳನ್ನು ಬಹಳ ಸುಂದರವಾಗಿ ಮಾಡುವುದರಲ್ಲಿ ಅವರು ತೊಡಗಿರುವ ಕೆಲಸಗಳು ಇವತ್ತು ಅಲ್ಲಿಯ ಜನರಿಗೆ ಆ ರಾಜ್ಯಗಳಲ್ಲಿ ಅಭಾವ ಸ್ಥಿತಿ ಪ್ರಾರಂಭವಾಗಿದೆ ಹಾಗೆಯೇ ಈ ಬೆಂಗಳೂರು ನಗರದಲ್ಲಿ ಸುಂದರವಾದ ಕಟ್ಟಡಗಳು ಬೇಕು, ಖಾಸಗೀಯವರು ಅವನ್ನು ಕಟ್ಟುವ ಹಾಗೆ ಇಲ್ಲ. ಸರ್ಕಾರದವರೇ ಕಟ್ಟುತ್ತೇವೆಂದು ಹೇಳುತ್ತಾರೆ. ಯಾವಾಗಲೂ ಸರ್ಕಾರದ ಹಣವನ್ನು ಉತ್ಪಾದನೆ ಮಾಡುವ ಕ್ಷೇತ್ರಗಳಲ್ಲಿ ತೊಡಗಿಸದೆ ಕೇವಲ ಉತ್ಪಾದನೆ ಮಾಡದೇ ಇರುವ ಕ್ಷೇತ್ರಗಳಲ್ಲಿ ಹೆಚ್ಚಿಗೆ ತೊಡಗಿಸುತ್ತಿದ್ದಾರೆ. ಎಲ್ಲಿ ಉತ್ಪಾದನೆ ಮಾಡಬೇಕೋ ಅಲ್ಲಿ ಹೆಚ್ಚು ಹಣವನ್ನು ತೊಡಗಿಸದೆ ಇವತ್ತು ೨೫ ವರ್ಷಗಳಿಂದಲೂ ಅಧಿಕಾರ ನಡೆಸಿ ಈಗ ಇಂತಹ ನಾನಾ ಸಮಸ್ಯೆಗಳು ಇವತ್ತಿನವರೆಗೂ ಕೊಳೆತು ನಾರುತ್ತಿವೆ. ಇವತ್ತು ಕೆಲವು ಪ್ರದೇಶಗಳಲ್ಲಿ ಕ್ಷಾಮ ಪರಿಸ್ಥಿತಿ ಇದ್ದರೆ ಬೇರೆ ಕಡೆಗಳಲ್ಲಿ ದುರ್ಭಿಕ್ಷ ಪರಿಸ್ಥಿತಿ ಇದೆ ಇದರ ಪರಿಣಾಮ ಈಗ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಕಳೆದ ೨೫ ವರ್ಷಗಳ ಇವರ ಆಡಳಿತದಲ್ಲಿ ನಾವು ಕಾಣುತ್ತಿದ್ದೇವೆ. ರಾಷ್ಟ್ರದ ಎಲ್ಲ ಭಾಗಗಳಲ್ಲಿಯೂ ಇಂತಹ ದುರ್ಭಿಕ್ಷ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ ಇದನ್ನು ಬಗೆಹರಿಸುವ ಪ್ರಯತ್ನವನ್ನು ನಾವು ಮಾಡಬೇಕು, ಸರ್ಕಾರದವರೂ ಮಾಡಬೇಕು. ಈ ದೃಷ್ಟಿಯಿಂದಲೇ ರಚನಾತ್ಮಕವಾದ ಸಲಹೆಗಳನ್ನು ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂ ಅವರು ಕೊಟ್ಟಿದ್ದಾರೆ.

ಮಾನ್ಯ ಶ್ರೀ ಆರ್ಮುಗಂ ಅವರು ಕೊಟ್ಟಿರುವ ವರದಿಯ ಪುಟ ೭೫ನ್ನು ಓದಿದರೆ ತಮಗೆ ಚೆನ್ನಾಗಿ ಅರ್ಥವಾಗುತ್ತಿತ್ತು. ಏಕೆಂದರೆ ಮಾನ್ಯ ಶ್ರೀ ನಿಜಲಿಂಗಪ್ಪನವರು, ಶ್ರೀಮತಿ ಇಂದಿರಾ ಗಾಂಧಿಯವರನ್ನು ಕರೆಸಿ ತಕ್ಕಡಿಯಲ್ಲಿ ಬಂಗಾರವನ್ನು ತೂಗಿಸಿದಂತಹ ನೆಲ ಇವತ್ತು ಅಲ್ಲಿ ಜನಗಳನ್ನು ಹಾಗೆಯೇ ನುಂಗಲೋ ಅಥವಾ ಬಾಯಿಬಿಟ್ಟು ನುಂಗಲೋ ಎಂದು ಹೇಳುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಅದು ಬೇಕಾದರೆ ಈ ಸರ್ಕಾರವನ್ನು ಸಹ ನುಂಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ :—ಎಷ್ಟು ಪ್ರದೇಶಗಳಲ್ಲಿ ಯೋಜನೆಗಳು ಪೂರ್ಣವಾಗಿಲ್ಲವೋ ಅಷ್ಟು ಪ್ರದೇಶಗಳಲ್ಲಿ ನೆರವನ್ನು ಕೊಡದೇ ಇದ್ದುದೇ ಕಾರಣ. ಆದರಿಂದಲೇ ತೊಂದರೆಯಾಗುತ್ತದೆ. ಮೊದಲಿನಿಂದಲೂ ಮಂಡ್ಯ ಮತ್ತು ಶಿವಮೊಗ್ಗಗಳಲ್ಲಿ ಹುಲ್ಲು ಸೊಗಸಾಗಿ ಬೆಳೆದು ಕೊಡತಕ್ಕ ಪರಿಸ್ಥಿತಿಯೇ ಇರುತ್ತಿರಲಿಲ್ಲ. ಇದು ಸ್ವಯಂಸೃಷ್ಟಿ. ಈ ಸ್ವಯಂಸೃಷ್ಟಿಗೆ ಬ್ರಹ್ಮಲಿಪಿ ಬೇಕು. ಇದಕ್ಕೆ ಮಾನ್ಯ ಶ್ರೀ ನಿಜಲಿಂಗಪ್ಪನವರು, ಶ್ರೀ ಹನುಮಂತಯ್ಯನವರು ಮತ್ತು ಶ್ರೀ ವೀರೇಂದ್ರಪಾಟೀಲರು ಕಾರಣ. ಸೇಕಡ ೫೦ರಷ್ಟು ಭಾಗದಲ್ಲಿ ೨೪ ಲಕ್ಷ ಪಶು ಸಂಪತ್ತು ಇದೆ. ನಾವಿನ್ನೂ ಜಾಸ್ತಿ ಹೇಳಿದ್ದೇವೆ. ಅದರಲ್ಲಿ ಅರ್ಧದಷ್ಟು ನಶಿಸಿ ಹೋಗಿವೆ. ಅದನ್ನು ಉಳಿಸಬಹುದಾಗಿತ್ತು. ಮಾನ್ಯ ವೀರೇಂದ್ರಪಾಟೀಲರು ಹಿಂದಿನ ಸರ್ಕಾರದಲ್ಲಿದ್ದಾಗ ರಾಯಚೂರು ಜಿಲ್ಲೆಗೆ ಬಾವಿ ತೋಡಿಸುವ ಕಾರ್ಯಗಳನ್ನು ಕೊಟ್ಟಿದ್ದರು. ಅದನ್ನು ಆಗಲೇ ಕಾರ್ಯಗತ ಮಾಡಿದ್ದರೆ ರಾಯಚೂರು ಜಿಲ್ಲೆಗೆ ಬರಗಾಲ ಬರುತ್ತಿರಲಿಲ್ಲ. ರಾಯಚೂರು ಜಿಲ್ಲೆಯಲ್ಲಿ ೧೦ ಕೋಟಿ ರೂಪಾಯಿಗಳ ಬಾವಿ ಯೋಜನೆ ಮಾಡಿದ್ದರೆ, ೨೧ ಲಕ್ಷ ಎಕರೆಗೆ ನೀರಾವರಿಯಾಗುತ್ತಿತ್ತು. ಸ್ವತಃ ಇಲಾಖೆಯವರು ತಯಾರು ಮಾಡಿರತಕ್ಕ ಒಂದು ಪ್ರಾಜೆಕ್ಟಿಗೆ ಅಂದಿನ ಸರ್ಕಾರ ಹಣವನ್ನು ಮಂಜೂರು ಮಾಡಿ ಆ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾಗ್ಯೂ ಅವನ್ನು ಮುಚ್ಚಿ ಕಣ್ಣೆತ್ತಿ ನೋಡಲಿಲ್ಲ. ಅದನ್ನೇದಾರೂ ಕಾರ್ಯಗತ ಮಾಡಿದ್ದಿದ್ದರೆ, ನಿಜವಾಗಿಯೂ ರಾಯಚೂರು ಜನಗಳಿಗೆ ಈ ರೀತಿಯಾಗಿ ಕ್ಷಾಮ ಬರುತ್ತಿರಲಿಲ್ಲ. ಆ ಕೆಲಸಗಳನ್ನು ಈಗಲೂ ಮಾಡುವುದರಲ್ಲಿ ಹಿಂದೆ ಬಿದ್ದರೆ ಹೇಗೆ? ಅನಾವಶ್ಯಕವಾಗಿ ದುಡ್ಡು ಕೊಡುತ್ತಿದ್ದಾರೆ. ಆ ರೀತಿಯಾಗಿ ಕೊಟ್ಟು ಕ್ಷಾಮವನ್ನು ಬಗೆಹರಿಸುವುದಕ್ಕಾಗುವುದಿಲ್ಲ. ನೀವು ಶಾಶ್ವತವಾದ ಕೆಲಸಗಳನ್ನು ಮಾಡಬೇಕು. ಕ್ಷಾಮ ಬಾರದೇ ಇರುವ ರೀತಿಯ ತಡೆ ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು ಈ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಎಷ್ಟರಮಟ್ಟಿಗೆ ನಾವು ಕೆಲಸವನ್ನು ಜನರಿಗೆ ಕೊಡಬೇಕಾಗಿತ್ತೋ ಅದಕ್ಕಿಂತಲೂ ಇನ್ನೂ ಹೆಚ್ಚಿಗೆ ಕಾರ್ಯ

(ಶ್ರೀ ಕಾಗೋಡು ತಿಮ್ಮಪ್ಪ)

ಕ್ರಮಗಳನ್ನು ರೂಪಿಸಬೇಕೆಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಬಿಜಾಪುರ, ಬೆಳಗಾಂ, ಗುಲ್ಬರ್ಗಾ, ರಾಯಚೂರು, ಮತ್ತು ಬಿದರೆ—ಈ ಭಾಗಗಳಲ್ಲಿ ಕ್ಷಾಮಕ್ಕೆ ತುತ್ತಾಗಿರುವ ಪ್ರಜಾಸಂಖ್ಯೆ ಯಲ್ಲಿ ಸುಮಾರು ೩೬ ಲಕ್ಷದಲ್ಲಿ ಈವರೆಗೆ ಕೆಲಸವನ್ನು ಕೊಟ್ಟಿರತಕ್ಕಂಥಾದ್ದು ಸೇಕಡ ೫ರಷ್ಟು ಅಥವಾ ಸುಮಾರು ೨ ಲಕ್ಷದ ೭೬ ಸಾವಿರ ಜನಗಳಿಗೆ ಮಾತ್ರ. ಗುಲ್ಬರ್ಗಾ ಜಿಲ್ಲೆಯಲ್ಲಿ ೧೭ ಲಕ್ಷ ೩೬ ಸಾವಿರ ಪ್ರಜಾಸಂಖ್ಯೆ, ಅಲ್ಲಿ ಕೆಲಸದಲ್ಲಿರುವವರನ್ನು ಮತ್ತು ಕೆಲಸದಲ್ಲಿ ಇಲ್ಲದೇ ಇರುವವರನ್ನು ಅಥವಾ ಯಾವ ತರಹದಲ್ಲಿ ಲೆಕ್ಕ ಹಾಕಿದರೂ ಕೂಡ ಕನಿಷ್ಟ ಪಕ್ಷ ೪ ಲಕ್ಷ ಜನಗಳಿಗಾದರೂ ಉದ್ಯೋಗವನ್ನು ಕೊಡಲೇ ಬೇಕು. ಇದು ಇಂಥಹ ಪರಿಸ್ಥಿತಿ ಅಲ್ಲಿನ ಪರಿಸ್ಥಿತಿ ಬಹಳ ಕೆಟ್ಟದ್ದಾಗಿದೆ. ೧೭ ಲಕ್ಷ ೩೬ ಸಾವಿರ ಜನ ಸಂಖ್ಯೆಯ ಪೈಕಿ ಯಾವುದೇ ಕಾರಣದಿಂದಲಾದರೂ ೪ ಲಕ್ಷ ಜನಗಳಿಗಾದರೂ ಉದ್ಯೋಗ ಕೊಡಲೇ ಬೇಕು. ಇವತ್ತಿನ ಪರಿಸ್ಥಿತಿಯೊಳಗೆ ಈವರೆಗೆ ಕೊಟ್ಟಿರುವ ಗುಲ್ಬರ್ಗಾಕ್ಕೆ ೧ ಲಕ್ಷದ ೨೫ ಸಾವಿರ ೫೮೧ ಮಾತ್ರ. ಇನ್ನುಳಿದವರು ಅಲ್ಲಿ ಗಾಳಿ ಸೇವಿಸಿ, ನೀರು ಕುಡಿದು, ಮಣ್ಣನ್ನು ತಿನ್ನಬೇಕೇ ಎಂಬುದನ್ನು ತಾವು ಉತ್ತರ ದಲ್ಲಿ ಹೇಳಬೇಕು. ಹಾಗೆಯೇ ಇನ್ನು ಬೆಳಗಾಂ ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾಗಿರುವ ಪ್ರಜಾ ಸಂಖ್ಯೆ ೩ ಲಕ್ಷದ ೮೦ ಸಾವಿರದ ೫೬೦ ಅಲ್ಲಿ ಕೆಲಸ ಕೊಟ್ಟಿರುವುದು ಕೇವಲ ೨೦ ಸಾವಿರದ ೭೮೨. ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಕನಿಷ್ಟಪಕ್ಷ ಒಂದು ಲಕ್ಷ ಜನಗಳಿಗಾದರೂ ಕೆಲಸವನ್ನು ಕೊಡಬೇಕು. ಅಂದ ಮೇಲೆ ನೀವು ಕೇವಲ ಅಷ್ಟು ಕಡಿಮೆ ಜನಗಳಿಗೆ ಉದ್ಯೋಗಗಳನ್ನು ಕೊಟ್ಟರೆ, ಉಳಿದವರಿಗೆ ನೀವು ಆಕಾಶ ತೋರಿಸುತ್ತೀರೋ ಅಥವಾ ಸಮುದ್ರ ತೋರಿಸುತ್ತೀರೋ? ಕೊನೆಯಪಕ್ಷ ಎಲ್ಲಿ ನೀರು ಸಿಗದಿದ್ದರೆ, ನೀವು ಅದನ್ನೇ ತೋರಿಸಬೇಕಾಗುತ್ತದೆ.

ಹಾಗೆ ಇನ್ನು ಬಿಜಾಪುರ ಜಿಲ್ಲೆಗೆ ಬಂದರೆ ಅಲ್ಲಿರತಕ್ಕ ನಾಲ್ಕು ಲಕ್ಷ ಜನರಲ್ಲಿ ೮೦ ಸಾವಿರ ಜನರಿಗೆ ಮಾತ್ರ ಉದ್ಯೋಗ ಕೊಟ್ಟಿದ್ದಾರೆ. ಹಾಗೆಯೇ ಬೀದರ್ ಜಿಲ್ಲೆಯಲ್ಲಿ ಸುಮಾರು ೮ ಲಕ್ಷ ೨೨ ಸಾವಿರ ಜನರ ಪೈಕಿ ಕೆಲಸ ೫೦ ಸಾವಿರದ ೫೯೯ ಜನರಿಗೆ ಕೊಟ್ಟಿದ್ದಾರೆ. ಕನಿಷ್ಟಪಕ್ಷ ಅಲ್ಲಿ ಒಂದು ಮೂರು ಲಕ್ಷ ಜನರಿಗಾದರೂ ಕೊಡಲೇಬೇಕಾಗಿತ್ತು. ಇಷ್ಟು ಜನರಿಗೆ ಇವರು ಕೆಲಸ ಕೊಟ್ಟರೂ ಸಹ ಅದು ಪೂರ್ತಿಯಾಗಿ ಕೆಲಸ ಕೊಟ್ಟದ್ದಲ್ಲ. ಕೆಲರಿಗೆ ಎರಡು ದಿವಸ ಕೆಲಸ ಕೊಟ್ಟಿರಬಹುದು ; ಕೆಲವು ಜನರಿಗೆ ೮ ದಿವಸ ಸಿಕ್ಕಿರ ಬಹುದು ; ಮತ್ತು ಇದರಲ್ಲಿ ಒಂದು ದಿವಸ ಸಹ ಕೆಲಸ ಮಾಡಿದವನು ಬರುತ್ತಾನೆ. ತಾವು ಇಷ್ಟು ಜನ ಮಂತ್ರಿಗಳು ಅಲ್ಲಿ ಓಡಾಡಿ ಮಾಡಿದ್ದಾದರೂ ಏನು ? ಅಲ್ಲಿ ಎಲ್ಲರನ್ನು ಕೂರಿಸಿಕೊಂಡು, ಈ ಕ್ಷಾಮ ಪರಿಸ್ಥಿತಿಯ ಬಗ್ಗೆ ಎಷ್ಟು ಜನರಿಗೆ ಉದ್ಯೋಗವನ್ನು ಕೊಡಬೇಕೋ, ಅದರ ಬಗ್ಗೆ ಒಂದು ರಿಪೋರ್ಟ್ ತಯಾರು ಮಾಡಿದ್ದೀರಾ ಎಂದು ಕೇಳುತ್ತೇನೆ. ಆದಕ್ಕೆ ಇಂತಹ ಪ್ರದೇಶಗಳನ್ನು ಒಂದೊಂದು ಭಾಗ ವನ್ನಾಗಿ ಮಾಡಿಕೊಂಡ ಎಷ್ಟು ಜನರಿಗೆ ಕೊಡಬೇಕೆಂದು ಇಲ್ಲಿಯ ವರೆಗೆ ಒಂದು ವರದಿಯನ್ನು ತಯಾರು ಮಾಡಿಲ್ಲವೆಂದರೆ ಇದು ನಾಚಿಕೆ ಪಡತಕ್ಕಂತಹ ವಿಷಯ ಇಂತಹ ಒಂದು ವರದಿಯನ್ನು ತಯಾರು ಮಾಡಿ ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟು ಕೆಲಸ ಮಾಡಬೇಕು, ಇದಕ್ಕೆ ಎಷ್ಟು ಹಣ ಬೇಕು ; ಎಷ್ಟು ಕಾಲ ಇದನ್ನು ಮುಂದುವರಿಸಿಕೊಂಡು ಹೋಗ ಬೇಕೆನ್ನುವುದರ ಬಗ್ಗೆ ಒಂದು ಸ್ಪಷ್ಟವಾದ ಚಿತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳ್ಪಿಸಿ ಕೊಡದೆ ಹೋದುದರಿಂದ, ಮತ್ತು ಕೇಂದ್ರ ಸರ್ಕಾರದವರ ತಂಡ ಇಲ್ಲಿ ಬಂದಾಗ ಆ ಒಂದು ಚಿತ್ರವನ್ನು ಅವರ ಮುಂದೆ ಇಟ್ಟು ಹೇಳದೆ ಇದ್ದುದರಿಂದ ನಮಗೆ ೧೬ ಕೋಟಿ ಸಿಗುವ ಹಾಗೆ ಆಯಿತು. ಇಲ್ಲದಿದ್ದರೆ ೨೭ ಕೋಟಿಯಾದರೂ ಸಿಗುತ್ತಿತ್ತು. ಮಾನ್ಯ ಕಂದಾಯ ಮಂತ್ರಿಯವರ ಒಂದು ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಅದರಲ್ಲಿ ಆಯಾ ಪ್ರದೇಶದಲ್ಲಿ ಎಷ್ಟು ಜನರಿದ್ದಾರೆ, ಎಷ್ಟು ಜನರಿಗೆ ಉದ್ಯೋಗವಕಾಶ ಕಲ್ಪಿಸಿದ್ದಾರೆ, ಎಷ್ಟು ಗಂಜಿ ಕೇಂದ್ರಗಳನ್ನು ತೆರೆಯುತ್ತಾರೆ ಎಂಬುದರ ಬಗ್ಗೆ ವಿಸ್ತಾರವಾದ ಅಂಕಿ ಅಂಶಗಳು ಇಲ್ಲದಿರುವುದರಿಂದ ನಮಗೆ ಈ ಪರಿಸ್ಥಿತಿ ಬಂದಿದೆ. ಇವತ್ತು ಕೇವಲ ನೀವು ಓಡಾಟ ಮಾಡಿ ಭಾಷಣ ಮಾಡುವುದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಅಲ್ಲಿ ಜನರು ದಿವಸಕ್ಕೆ ಒಬ್ಬರು ಮಂತ್ರಿಯವರು ಬರುತ್ತಾರಲ್ಲದೆ, ಏನೂ ಕೆಲಸ ಮಾಡಲಿಲ್ಲವೆಂದು ಹೇಳುತ್ತಿದ್ದಾರೆ ನೀವು ಅಲ್ಲಿ ಪ್ರವಾಸ ಮಾಡಿ ಅಲ್ಲಿಯ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದು ಕಲ್ಪನೆಯನ್ನು ಮಾಡಿಕೊಂಡಿದ್ದರೆ ಈ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು. ರೋಗಿಯ ರೋಗವನ್ನೇ ಡೈಯಾಗ್ನಾಸ್ ಮಾಡದೆ ಏನು ಔಷಧಿ ಕೊಟ್ಟರೆ ಏನು ಪ್ರಯೋಜನ ? ಇವತ್ತು ಈ ಅವಸ್ಥೆಗೆ ಮುಟ್ಟಿರ ತಕ್ಕದ್ದು ನಿಮ್ಮ ಅಸಡ್ಡೆಯಿಂದ ಎಂದು ಹೇಳುತ್ತೇನೆ. ಅಲ್ಲದೆ ಅಲ್ಲಿರತಕ್ಕಂತಹ ಆಡಳಿತ ಯಂತ್ರವು ಇದನ್ನು ಅಷ್ಟು ತೀವ್ರತೆಯಲ್ಲಿ ವಿಚಾರ ಮಾಡಿಲ್ಲ ನಾನು ಸಹ ಅಲ್ಲಿ ಕೆಲವು ಹಳ್ಳಿಗಳಿಗೆ ಹೋಗಿದ್ದೇನೆ. ಇಂತಹ ಕ್ಷಾಮ ಇದೆ ಅಂದಾಗ ತಾಹಸೀಲ್ದಾರರು, ಅಸಿಸ್ಟಾಂಟ್ ಕಮಿಷನರ್ ಬಿ ಡಿ ಒ ಗಳು ವಿಷಯ ತಿಳಿದುಕೊಂಡು ಬರಬೇಕಾಗುತ್ತದೆ. ನಾನು ಇವತ್ತು ಹೇಳುತ್ತೇನೆ ಹೀಗೆ ಎಷ್ಟು ಅಧಿಕಾರಿಗಳು ಅಲ್ಲಿರತಕ್ಕ ಸಮಸ್ಯೆಯನ್ನು ಖುದ್ದಾಗಿ ಪರಿಶೀಲನೆ ಮಾಡಿ ಬಂದಿದ್ದಾರೆ ? ಇಲ್ಲಿಯ ವರೆಗೆ ತಾಹಸೀಲ್ದಾರರು ಬರಲಿಲ್ಲ,

ಬಿ ಡಿ ಓ ಗಳು ಬರಲಿಲ್ಲವೆಂದು ಅಲ್ಲಿಯ ಜನರು ಹೇಳುತ್ತಿದ್ದಾರೆ. ಪರಿಸ್ಥಿತಿಯ ಆಳವನ್ನು ಸರಿಯಾಗಿ ಸರ್ವೆ ಮಾಡಿ ನೋಡದೆ ಇದ್ದುದರಿಂದ, ಮತ್ತು ನಿಮಗೆ ಅದರ ಆಳ ಗೊತ್ತಾಗದೆ ಇದ್ದುದರಿಂದ ಅಲ್ಲಿ ತಕ್ಕ ಕೆಲಸವನ್ನು ಮಾಡುವುದಕ್ಕಾಗಲಿಲ್ಲ. ಮಾನ್ಯ ರಾಥೋಡರವರು ಒಂದು ಕಡೆ ಪ್ರತಿಯೊಂದು ಹಳ್ಳಿಗೂ ೧೦ ಭಾವಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ೧೨೦೦ ಹಳ್ಳಿಗಳಿವೆ ಕನಿಷ್ಟ ಒಂದು ಗ್ರಾಮಕ್ಕೆ ೧೦ ಬಾವಿಗಳಂತೆ ಕೊಟ್ಟರೂ ಒಂದು ಬಾವಿಗೆ ೧೦ ಸಾವಿರದಂತೆ ಖರ್ಚು ಮಾಡಿದರೆ ಅದಕ್ಕೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. ಅಂದರೆ ಕನಿಷ್ಟ ೧೦೦ ಜನರಿಗೆ ಸರಾಸರಿ ಒಂದು ೬-೭ ತಿಂಗಳಾದರೂ ಕೆಲಸ ಕೊಡಬಹುದೆಂದು ಅಂದಾಜು ಮಾಡಬಹುದು. ಇದೇರೀತಿ ಮೂರು ನಾಲ್ಕು ಜಿಲ್ಲೆಗೆ ಬಾವಿ ತೋಡಿಸಿದರೆ ಒಟ್ಟು ೪೫-೫೦ ಕೋಟಿ ರೂಪಾಯಿ ಬೇಕಾಗುತ್ತದೆ. ಮಾನ್ಯ ರಾಥೋಡ್‌ರವರು ಹೇಳಿರುವ ಪ್ರಕಾರ ಹಳ್ಳಿಗಳಲ್ಲಿ ೧೦-೧೦ ಬಾವಿಗಳನ್ನು ಮಾಡಲು ೪೫-೫೦ ಕೋಟಿ ರೂಪಾಯಿ ಬೇಕಾಗುತ್ತದೆ. ನಾನು ಎಲ್ಲಾಹಳ್ಳಿಗಳನ್ನೂ ನೋಡಿದ್ದೇನೆ. ಎಷ್ಟೋ ಹಳ್ಳಿಗಳಲ್ಲಿ ನಮ್ಮ ಹೆಣ್ಣುಮಕ್ಕಳಿಗೆ ಸರಿಯೊದ ಲ್ಯಾವೇಟರಿ ಸಹ ಇಲ್ಲ. ಆ ಸ್ಥಿತಿಯಲ್ಲಿ ನಾವಿದ್ದೇವೆ.

ಹೆಣ್ಣು ಮಕ್ಕಳು ಬೆಳಿಗ್ಗೆ ಎದ್ದರೆ ಮಲಮೂತ್ರ ವಿಸರ್ಜನೆ ಮಾಡಬೇಕು. ಅವರಿಗೆ ಹಳ್ಳಿಗಾಡುಗಳಲ್ಲಿ ಲ್ಯಾವಿಟ್ರಿಯ ಒಂದು ಸೌಕರ್ಯವಿಲ್ಲ ನಗರಗಳಲ್ಲೇನೋ ಫ್ಲಷ್ ಔಟ್ ಕಕ್ಕಸು ಕಟ್ಟಿಸಿದ್ದಾರೆ. ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳೂ ಪಟ್ಟಣಗಳಲ್ಲಿ ಇದೆ. ಆದರೆ ಹಳ್ಳಿಗಾಡುಗಳಲ್ಲಿ ಆ ಒಂದು ವ್ಯವಸ್ಥೆ ಇಲ್ಲ. ಪಟ್ಟಣಗಳನ್ನೇನೋ ಬೆಳೆಸುತ್ತಿದ್ದಾರೆ. ಆದರೆ ಹಳ್ಳಿಗಾಡುಗಳ ಕಡೆ ಸರ್ಕಾರ ಅಷ್ಟು ಹೆಚ್ಚಿನ ನಿಗಾ ವಹಿಸುತ್ತಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇಲ್ಲಿ ನಾನು ಮೂಲಭೂತವಾಗಿ ಹೇಳುವುದೇನೆಂದರೆ ಬಾವಿಗಳನ್ನು ತೆಗೆಯುವ ಕೆಲಸ ಪ್ರಾಮುಖ್ಯವಾಗಿ ಆಗಬೇಕು. ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ೧೫-೨೦ ಬಾವಿಗಳನ್ನು ತೆಗೆಸಬೇಕು. ಆ ರೀತಿ ಬಾವಿಗಳನ್ನು ತೆಗೆಸುವುದಾದರೆ ೩ ತಿಂಗಳಲ್ಲಿ ಹಲವು ಬೆಳೆಗಳನ್ನು ಬೆಳೆಗಳನ್ನು ಬೆಳೆಸುವುದಕ್ಕೆ ಸಹಾಯವಾಗುತ್ತದೆ. ೧೫ ಅಡಿ ನೀರಿದ್ದರೂ ಫಸಲನ್ನು ಬೆಳೆಯಬಹುದು. ಅಂಥಾ ಕಡೆ ಏತವನ್ನು ಹಾಕಿಕೊಂಡು ಬೆಳೆಯನ್ನು ಬೆಳೆಯುತ್ತಿದ್ದಾರೆ. ಈ ದೃಷ್ಟಿಯಿಂದ ಒಂದೊಂದು ಗ್ರಾಮದಲ್ಲಿ ೧೦-೧೦ ಬಾವಿಗಳನ್ನು ತೆಗೆದರೆ ಆ ಭಾವಿಗಳ ಮುಖಾಂತರ ನೀರನ್ನು ಉಪಯೋಗಿಸಿಕೊಂಡು ಕೆಲವು ಬೆಳೆಗಳನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಜನಗಳಿಗೆ ಕೆಲಸವನ್ನು ಕೊಡುವುದಕ್ಕೂ ಅನುಕೂಲವಾಗುತ್ತದೆ. ಇದುವರೆಗೆ ಆ ಒಂದು ಪ್ರಯತ್ನವನ್ನು ಮಾಡಿದರೆ ಎಷ್ಟೋ ಜನಗಳನ್ನು ಮತ್ತು ಜಾನುವಾರುಗಳನ್ನು ಬದುಕಿಸಬಹುದಾಗಿತ್ತು. ಒಬ್ಬರು ಮಾನ್ಯ ಸದಸ್ಯರು ಹೇಳಿದರು ಕಾರಂಜಪ್ರಾಜೆಕ್ಟ್ ಕೆಲಸವನ್ನು ತೆಗೆದುಕೊಳ್ಳಬೇಕೆಂದು, ಈ ಪ್ರಾಜೆಕ್ಟಿಗೆ ೧೭ ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಮತ್ತು ಇದರಿಂದ ಒಂದು ಎಕರೆ ನೀರಾವರಿಯಾಗುತ್ತದೆ ಎಂದು ಹೇಳಿದ್ದಾರೆ. ಈ ಪ್ರಾಜೆಕ್ಟನ್ನು ಕಟ್ಟುವುದರಿಂದ ೧೩ ಸಾವಿರ ಎಕರೆ ಮುಳುಗಡೆಯಾಗುತ್ತದೆ ಎಂದು ಗೊತ್ತಾಗಿದೆ. ೧೭ ಕೋಟಿ ರೂಪಾಯಿಗಳಲ್ಲಿ ಎಷ್ಟು ಬಾವಿಗಳನ್ನು ತೆಗೆಯಬಹುದು ಎಂಬುದನ್ನು ಯೋಚನೆ ಮಾಡಿ?

ಒಬ್ಬ ಸದಸ್ಯರು :—ಸಣ್ಣ ಸಣ್ಣ ಬಾವಿಗಳನ್ನು ತೆಗೆಯುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ :—ಸಣ್ಣ ಸಣ್ಣ ಬಾವಿಗಳನ್ನು ತೆಗೆಸಿಕೊಡುವುದರ ಮೂಲಕ ಹೆಚ್ಚಿನ ನೀರಾವರಿ ಸೌಕರ್ಯವನ್ನು ಒದಗಿಸುವುದಕ್ಕೆ ಸಾಧ್ಯವಿದೆ. ೧೭ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಒಂದು ಲಕ್ಷ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸಬಹುದು. ಆದರೆ ಅಷ್ಟೇ ಹಣವನ್ನು ಖರ್ಚು ಮಾಡಿ ಬಾವಿಯನ್ನು ತೆಗೆಸುವುದಾದರೆ ೨ ಲಕ್ಷ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸಬಹುದು. ಎಂದರೆ ಇಡೀ ಜಿಲ್ಲೆಗೇ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಒಂದುವೇಳೆ ಒಂದು ಗ್ರಾಮದಲ್ಲಿ ಬಾವಿಯಲ್ಲಿ ನೀರು ಬಾರದಿದ್ದರೆ ಪಕ್ಕದ ಗ್ರಾಮದಲ್ಲಿ ಬಾವಿಗಳಲ್ಲಿ ನೀರು ಬರುತ್ತದೆ. ಆದರಿಂದ ಪಕ್ಕದ ಗ್ರಾಮದವರಿಗೂ ಸಹಾಯ ಮಾಡಬಹುದು ಈ ದೃಷ್ಟಿಯಿಂದ ಇಂಥಾ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳಬೇಕು. ಇದರಿಂದ ಖರ್ಚು ಮಾಡಿದಂತಹ ಹಣದಿಂದ ಉತ್ಪತ್ತಿಯನ್ನು ತೆಗೆಯುವುದಕ್ಕೆ ಸಾಧನ ಸಂಪರ್ಕವನ್ನು ಕಲ್ಪಿಸಿದಂತಾಗುತ್ತದೆ. ಬಾವಿ ತೆಗೆಯುವುದಕ್ಕೆ ದುಡ್ಡು ಕೊಟ್ಟರೆ ದುಡ್ಡು ವಾಪಸು ಬರುತ್ತದೆ. ಅಭಾವ ಪೀಡಿತ ಪ್ರದೇಶದಲ್ಲಿ ಒಂದು ಶಾಶ್ವತವಾದ ಪರಿಹಾರ ಕಾರ್ಯವನ್ನು ಮಾಡಿಸಿದಂತಾಗುತ್ತದೆ ಮತ್ತುಎಲ್ಲಾ ಭೂಮಿಯನ್ನು ನೀರಾವರಿ ಮಾಡಿ ಅದರಿಂದ ಒಂದಕ್ಕೆ ೪ ರಷ್ಟು ಉತ್ಪತ್ತಿಯನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಇಂಥಾ ಒಂದು ಪ್ರಾಮಾಣಿಕವಾದ ಕೆಲಸವನ್ನು ಸರ್ಕಾರದವರು ಏತಕ್ಕೆ ಮಾಡಲಿಲ್ಲ? ಬಿಜಾಪುರ ಜಿಲ್ಲೆಯಲ್ಲಿ ಬೋರ್ ವೆಲ್‌ಗಳನ್ನು ತೆಗೆಸಿ ಜನಗಳು ಆಹಾರವನ್ನು ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಿದೆ. ಇದನ್ನು ಸರ್ಕಾರದವರು ಏನಾದರೂಯೋಚನೆ ಮಾಡಿದ್ದಾರೆಯೆ? ಶ್ರೀಮಾನ್ ಆರ್ಮುಗಂ ಅವರ ವರ

(ಶ್ರೀ ಕಾಗೋಡು ತಿಮ್ಮಪ್ಪ)

ದಿಯ ಪುಟ ೩೨ ರಲ್ಲಿ ಇಂಡಿ ಮತ್ತು ಸಿಂದಗಿ ತಾಲ್ಲೋಕುಗಳಲ್ಲಿ ೫ ಬೋರ್‌ವೆಲ್‌ಗಳು ಪ್ರೋಗ್ರೆಸ್‌ನಲ್ಲಿವೆ, ೨ ಬಾವಿಗಳು ಕಂಪ್ಲೀಟಾಗಿವೆ ಒಂದು ಬಾವಿ ಫೈಲ್ಡ್ ಎಂದು ಕೊಟ್ಟಿದ್ದಾರೆ. ಈಗ ೪೦ ಅಡಿ ೫೦ ಅಡಿ ಆಳ ತೆಗೆದರೂ ಬಾವಿಯಲ್ಲಿ ನೀರು ಬರುವುದಿಲ್ಲ ಎಂದರೆ ಮತ್ತೆ ಬೋರ್‌ವೆಲ್ ಹಾಕಿದರೆ ನೀರು ಬಂದೇ ಬರುತ್ತದೆ. ಈ ರೀತಿಯಾಗಿ ಬೋರ್‌ವೆಲ್‌ಗಳನ್ನು ತೆಗೆಸಿದರೆ ಈ ಒಂದು ಸಮಸ್ಯೆಗೆ ಒಂದು ಶಾಶ್ವತವಾದ ಪರಿಹಾರ ಸಿಕ್ಕುತ್ತದೆ. ಆದಕಾರಣ ಬಹಳ ವೇಗವಾಗಿ ಬಾವಿಗಳನ್ನು ತೆಗೆಸುವುದಕ್ಕೆ ರಿಗ್ಸ್‌ಗಳನ್ನು ತರಿಸಿ ಬಾವಿಗಳನ್ನು ತೆಗೆಸುವಂಥಾ ಕಾರ್ಯವನ್ನು ಮೊದಲು ಮಾಡಬೇಕು. ಈ ಕೆಲಸ ಬಹಳ ತೀವ್ರಗತಿಯಿಂದ ನಡೆಯಬೇಕು. ಇದು ಆಮೆಯಂತಿ ಮಂದಗತಿಯಿಂದ ಹೋದರೆ ಅದು ಆಗುವುದಿಲ್ಲ ಅಧಿಕಾರಿಗಳು ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಬೇಕು, ಯುದ್ಧಭೂಮಿಯಲ್ಲಿ ಸೇನಾನಿಗಳು ಯಾವರೀತಿ ಕೆಲಸ ಮಾಡುತ್ತಾರೆಯೋ ಆ ರೀತಿ ಕೆಲಸ ಮಾಡಿದರೆ ಮಾತ್ರ ಜನಗಳನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಜಾನುವಾರುಗಳನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ.

ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ರಿಗ್ಸ್ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ರಿಗ್ಸ್ ಯಂತ್ರಗಳಿದ್ದರೆ ಕೇವಲ 6 ಗಂಟೆಗಳಲ್ಲಿ ಒಂದು ಬಾವಿ ತೆಗೆಯುವುದಕ್ಕೆ ಅವಕಾಶವಿದೆ. ಈ ರೀತಿ ಬಾವಿ ತೆಗೆಯುವುದರ ಮೂಲಕ 5 ಎಕರೆಗಳಲ್ಲಿ ಹುಲ್ಲನ್ನು ಬೆಳೆಸುವುದಕ್ಕೆ ಅವಕಾಶವಿದೆ. ಆದ್ದರಿಂದ ತಾವು ಈ ವಿಚಾರದಲ್ಲಿ ಹೋಗುತ್ತಿರುವ ವೇಗವನ್ನು ಸ್ವಲ್ಪ ಜಾಸ್ತಿ ಮಾಡಬೇಕು. ಈಗ ತಾವು ಈ ವಿಚಾರದಲ್ಲಿ ಜಟಕಾ ಬಂಡಿಯ ರೀತಿಯಲ್ಲಿ ಹೋಗುತ್ತಿದ್ದೀರಿ. ಅದು ಸರಿಯಲ್ಲ. ಹೋಗುತ್ತಿರುವ ವೇಗವನ್ನು ಜಾಸ್ತಿ ಮಾಡಬೇಕು. ನೀರು ಇಲ್ಲದಿರುವ ಎಲ್ಲ ಭಾಗಗಳಿಗೂ ನೀರನ್ನು ಕೊಡಬೇಕು. ಯುದ್ಧಸನ್ನದ್ಧ ರೀತಿಯಲ್ಲಿ ಕೆಲಸ ಕೈಕೊಂಡು ನೀರನ್ನು ಒದಗಿಸಿದರೆ ಮಾತ್ರ ಜನರು ಬದುಕುವುದಕ್ಕೆ ಸಾಧ್ಯವೆಂದು ಹೇಳುತ್ತೇನೆ. ಮುಖ್ಯವಾಗಿ ಶಾಶ್ವತ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳುವುದಕ್ಕೆ ಮನಸ್ಸು ಮಾಡಬೇಕು. ಮಾನ್ಯ ಆರ್ಮುಗಂ ಅವರ ವರದಿಯ ಪ್ರಕಾರ ಸುಮಾರು 24 ಲಕ್ಷ ಜಾನುವಾರುಗಳು ಆ ಭಾಗಗಳಲ್ಲಿ ಇವೆ ಎಂದು ಗೊತ್ತಾಗುತ್ತದೆ. ಅವುಗಳ ಪರಿಸ್ಥಿತಿಯನ್ನು ಹೃದಯವಿರುವವರು ಯಾರು ನೋಡಿ ಸುಮ್ಮನೆ ಇರುವುದಕ್ಕಾಗುವುದಿಲ್ಲ. ಅಂಥಹ ಒಂದು ಪರಿಸ್ಥಿತಿ ಜಾನುವಾರುಗಳಿಗೆ ಉಂಟಾಗಿದೆ. ಸಾಕುವುದಕ್ಕೆ ಕಷ್ಟವಾಗಿ ಕೊರಳಿಗೆ ಚೀಟಿ ಕಟ್ಟಿ ಬಿಟ್ಟುಬಿಡುವವರು ಇದ್ದಾರೆ. ಸಂತೆಗೆ ತೆಗೆದುಕೊಂಡು ಬಂದು ಹೋದ ಬೆಲೆಗೆ ಮಾರುವವರಿದ್ದಾರೆ. ಇಂದು ಅವುಗಳನ್ನು ಕೊಳ್ಳುವವರು ಸಹ ಯಾರು ಇಲ್ಲ. ಇವುಗಳಿಗೆ ಪ್ರಮುಖ ಗಿರಾಕಿಗಳೆಂದರೆ ಸ್ಲಾಟರ್ ಹೌಸ್‌ನವರು. ಮುಂಬೈನ ಸ್ಲಾಟರ್ ಹೌಸ್‌ನವರು ಖರೀದಿ ಮಾಡುತ್ತಿದ್ದಾರೆ. ಈಗ ಅವರ ಹತ್ತಿರವೂ ಸಹ ಸಾಕಷ್ಟು ಜಾನುವಾರುಗಳಿದ್ದು, ಅವರು ಸಹ ಖರೀದಿ ಮಾಡಲು ಮುಂದೆ ಬರುತ್ತಿಲ್ಲ. ಸಂತೆಗಳಿಗೆ ಮಾರಾಟ ಮಾಡಲು ಎಲ್ಲ ದಿಕ್ಕುಗಳಿಂದಲೂ ಜಾನುವಾರುಗಳನ್ನು ರೈತರು ತೆಗೆದುಕೊಂಡು ಬರುತ್ತಿದ್ದಾರೆ. ಬಂದ ಬೆಲೆಗೆ ಮಾರಾಟ ಮಾಡಿ ಹೋಗುತ್ತಿದ್ದಾರೆ. ಈಗಾಗಲೇ ಆ ಭಾಗಗಳಲ್ಲಿ ಶೇಕಡ 25–30 ರಷ್ಟು ಪಶುಸಂಪತ್ತು ನಾಶವಾಗಿದೆ. ಕೆಲವರು ಸಾಕುವುದಕ್ಕೆ ಕಷ್ಟವಾಗಿ ಮಾರಿದರೆ, ಮತ್ತೆ ಕೆಲವರು ಜೀವನಕ್ಕೆ ಬೇರೆ ಮಾರ್ಗವಿಲ್ಲದೆ ಮಾರಾಟ ಮಾಡುತ್ತಿದ್ದಾರೆ. 8 ಲಕ್ಷ ಜಾನುವಾರುಗಳನ್ನಾದರೂ ಉಳಿಸಬೇಕಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ನಾಳೆ ಜೂನ್ ತಿಂಗಳೊಳಗೆ ಮಳೆ ಬಂದರೆ ವ್ಯವಸಾಯ ಮಾಡಲು ಜಾನುವಾರುಗಳು ಬೇಡವೇ ? ದನಗಳು ಇಲ್ಲದಿದ್ದರೆ ಗಂಡ ಹೆಂಡತಿ ಜಮೀನು ಉಳಬೇಕಾಗುತ್ತದೆ. ಕೇರಳಾದಲ್ಲಿ ಗುದ್ದಲಿಯಿಂದ ಮಣ್ಣನ್ನು ಕಡಿದು ಸಾಗುವಳಿ ಮಾಡುತ್ತಾರೆ. ಆ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ,—ಪೂಲಿಂಗ್ ಬೂತ್ ಮುಂದೆ ತಂದು ನಿಲ್ಲಿಸುವುದಕ್ಕಾದರೂ ದನಗಳನ್ನು ಉಳಿಸಿಕೊಳ್ಳಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ವ್ಯವಸಾಯಗಾರರಿಗೆ ಇಂದು ಜಾನುವಾರುಗಳೇ ಅಸ್ತಿತ್ವ. ಅವುಗಳನ್ನು ಕಳೆದುಕೊಂಡು ಬಿಟ್ಟರೆ ಮತ್ತೆ ಅವುಗಳನ್ನು ಪಡೆಯಲು ಎಷ್ಟುಕಾಲ ಬೇಕಾಗುತ್ತದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಇಂದು ರೈತರಿಗೆ ತಕಾವಿ ಮುಂತಾದ ಎಲ್ಲ ರೀತಿಯ ಸಾಲಗಳನ್ನು ಸಹ ಕೊಟ್ಟುಬಿಟ್ಟಿದ್ದೀರಿ. ಅದೂ ಸಾಲದೆ ಈಗ ತಮ್ಮ ಆಸ್ತಿಯನ್ನು ಡೀಡ್ ಮಾಡಿ ಸಾಲ ಪಡೆಯುತ್ತಿದ್ದಾರೆ. ಮುಂದೆ ತಾವು ಎತ್ತುಗಳನ್ನು ಕೊಳ್ಳಲು ಸಾಲ ಕೊಡಬಹುದು, ಆದರೆ ಜಾನುವಾರುಗಳು ಸಿಗದಿದ್ದರೆ ಏನು ಮಾಡುವುದು ? ಆದ್ದರಿಂದ ಈಗಿರುವ ಜಾನುವಾರುಗಳನ್ನು ಉಳಿಸಿಕೊಳ್ಳುವುದಕ್ಕೆ ಎಲ್ಲ ರೀತಿಯಿಂದಲೂ ಪ್ರಯತ್ನ ಮಾಡಬೇಕು. ಶಾಶ್ವತ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳಲು ಹಣ ಇಲ್ಲವೆಂದು ಹೇಳುತ್ತಿದ್ದೀರಿ. ಇಂದಿರಾ ಗಾಂಧಿಯವರ ಹತ್ತಿರ ಹೋಗಿ ಕಸರತ್ ಮಾಡಿ ಹಣ ತರಬೇಕು. ಇಲ್ಲದಿದ್ದರೆ ನಿಜಲಿಂಗಪ್ಪನವರಿಗೆ ಆದಂತೆ ನಿಮಗೂ ಆಗುತ್ತದೆ. ಇರುವ

ಜಾನುವಾರು ಸಂಪತ್ತನ್ನು ಕಳೆದುಕೊಂಡುಬಿಟ್ಟರೆ ಮುಂದೆ ಅದನ್ನು ಪಡೆಯಬೇಕಾದರೆ ಎಷ್ಟು ವರ್ಷಗಳ ಕಾಲ ಬೇಕಾಗುತ್ತದೆಂಬುದನ್ನು ತಾವು ನೋಡಬೇಕು ಇರತಕ್ಕ 8 ಲಕ್ಷ ಜಾನುವಾರುಗಳನ್ನು ಉಳಿಸಲು 13 ಕೋಟಿ ರೂಪಾಯಿಗಳು ಬೇಕಾಗುತ್ತೆಂದು ವರದಿಯಲ್ಲಿ ತಿಳಿಸಲಾಗಿದೆ. ನಾವು 10-12 ಕೋಟಿ ರೂಪಾಯಿಗಳು ಬೇಕಾಗಬಹುದೆಂದು ನಿರೀಕ್ಷೆ ಮಾಡಿದ್ದೆವು ಮಾನ್ಯ ಆಮೂರ್ಗಂ ತಮ್ಮ ವರದಿಯಲ್ಲಿ 13 ಕೋಟಿ ರೂಪಾಯಿಗಳು ಬೇಕಾಗುತ್ತೆಂದು ಹೇಳಿದ್ದಾರೆ. ಇದು ಕೇವಲ ಖರ್ಚು ಎಂದು ತಾವು ಭಾವಿಸಬೇಡಿ. ಇಷ್ಟು ಹಣ ಖರ್ಚು ಮಾಡಿದರೆ ಸುಮಾರು 50 ಕೋಟಿ ರೂಪಾಯಿಗಳ ಪಶು ಸಂಪತ್ತನ್ನು ರಕ್ಷಣೆ ಮಾಡಿದ ಹಾಗೆ ಆಗುತ್ತದೆ. ಇಂದು ಆ ಭಾಗದಲ್ಲಿ ರೈತರು 500 ರೂಪಾಯಿ ಬೆಲೆ ಬಾಳುವ ಹೋರಿಗಳನ್ನು 50 ರೂಪಾಯಿಗಳಿಗೆ ಕೊಡುವುದಕ್ಕೆ ತಯಾರಿದ್ದಾರೆ. ದನದ ಮಾಂಸದ ಬೆಲೆ ಕೆ. ಜಿ. ಗೆ ಎರಡೂವರೆ ರೂಪಾಯಿಗಳಿದ್ದುದು ಈಗ ನಾಲ್ಕಾಣೆಯಾಗಿದೆ. ಚಿಟಿಗುಪ್ಪದಲ್ಲಿ ಹತ್ತು ಪೈಸೆಗೆ ಒಂದು ಕೆ. ಜಿ. ಯಂತೆ ಮಾರಾಟವಾಗುತ್ತಿತ್ತು. ಮನೆಯಲ್ಲಿ ರೊಟ್ಟಿಯನ್ನು ಕೊಡದೆ, ಕೇವಲ ಮಾಂಸವನ್ನು ಕೊಡುವುದರಿಂದ ಮಕ್ಕಳು ಶಾಲೆಗೆ ಬಂದರೆ ಸುಮ್ಮನೆ ಕೂಗಾಡುತ್ತವೆಂದು ಉಪಾಧ್ಯಾಯರು ನಾವು ಅಲ್ಲಿಗೆ ಹೋದಾಗ ಹೇಳಿದರು. ಮಕ್ಕಳು ಇಂದು ಕೇವಲ ದನದ ಮಾಂಸವನ್ನು ತಿನ್ನುವ ಪರಿಸ್ಥಿತಿ ಬಂದಿದೆ. ನಾಳೆ ದನದ ಮಾಂಸವೂ ಸಿಗದೇ ಹೋದರೇ, ಮನುಷ್ಯರನ್ನೇ ಹಿಸುಕಿ ಕೊಂದು ತಿನ್ನುವ ಕಾಲ ಬರಹುದು. ಅದು ಏನು ದೂರವಿಲ್ಲ. ಅಂಥಹ ಒಂದು ಪರಿಸ್ಥಿತಿ ಬಂದರೆ ಯಾರೂ ಆಶ್ಚರ್ಯಪಡ ಬೇಕಾಗಿಲ್ಲ. ಆದಕ್ಕೋಸ್ಕರವಾಗಿಯೇ ಈ ಭೀಕರ ಬರಗಾಲ ಪರಿಸ್ಥಿತಿಯನ್ನು ಅತ್ಯಂತ ಮಾನವೀಯ ದೃಷ್ಟಿಯಿಂದ ನೋಡಬೇಕೆಂದು ನಾನು ಸರ್ಕಾರಕ್ಕೆ ಹೇಳುತ್ತಿರುವುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿಯವರೆಗೆ ತಾವು ಹೋಗಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದಿನ ಚರಿತ್ರೆ ತೆಗೆದುಕೊಂಡರೆ ವಿಶ್ವಾಮಿತ್ರ ನಾಯಿಯನ್ನು ತಿಂದ ಉದಾಹರಣೆ ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮನುಷ್ಯ ಬದುಕುವುದಕ್ಕೆ ಏನು ಬೇಕಾದರೂ ಮಾಡುತ್ತಾನೆ ಎಂದು ಹೇಳುವುದಕ್ಕೆ ಒಂದು ಶಾಮ್ಯದ ರೂಪದಲ್ಲಿ ಆ ಕಥೆ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗಲೂ ನಾಯಿಗಳು ಮರಿಗಳನ್ನು ಹಾಕಿದ ಮೇಲೆ ಅವುಗಳ ಪೈಕಿ ಒಂದನ್ನು ತಿಂದುಬಿಡುತ್ತದೆ.

ಉಪಾಧ್ಯಕ್ಷರು.—ನಾಯಿ ಅಲ್ಲ, ಬೆಕ್ಕು ಆ ರೀತಿ ಮಾಡುವುದು.

